ಮಾನವಿಕ ಕರ್ಣಾಟಕ

ಸಂಪುಟ ೯ ಸಂಚಿಕೆ ೨

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೯

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೯   ಸಂಚಿಕೆ ೩

ಮೇ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೯

MANAVIKA KARNATAKA, Kannada Quarterly of the University of Mysore, Volume 9, Number 3, May 1979. Edited by Dr. B. R. Gopal and Dr. B. S. Srikantaradhya.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು : ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು : ಹರ್ಷ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು–570 008

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧. ಜಿ. ಟಿ. ನಾರಾಯಣರಾವ್ — ಸಂಪಾದಕರು, ವಿಜ್ಞಾನ, ಕನ್ನಡ ವಿಶ್ವಕೋಶ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೫೭೦ ೦೦೬.

೨. ಎಚ್. ಎಸ್. ಸುಜಾತ — ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ.

೩. ಸಿ. ವಿ. ರಂಗಸ್ವಾಮಿ — ಅಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೫೮೦ ೦೦೩.

೪. ಕೆ. ರಘುಪತಿ ಭಟ್ಟ — ಕನ್ನಡ ಅಧ್ಯಾಪಕರು, ಮಣಿಪಾಲ ಜೂನಿಯರ್ ಕಾಲೇಜು, ಮಣಿಪಾಲ-೫೭೬ ೧೧೯.

೫. ರು. ಮಾ. ಷಡಕ್ಷರಯ್ಯ — ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ-೫೮೦ ೦೦೩.

೬. ತಿರುಮಲ ಮಾವಿನಕುಳಿ — c/o ಮಾವಿನಕುಳಿ ಶ್ರೀನಿವಾಸ, ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

೭. ಡಾ॥ ಎಂ. ಮಾದಯ್ಯ — ಪ್ರಾಧ್ಯಾಪಕ ಮತ್ತು ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ.

೮. ಎಸ್. ಉದಯಶಂಕರ್ — ಸಂಶೋಧನ ವಿದ್ಯಾರ್ಥಿ, ಅರ್ಥಶಾಸ್ತ್ರ ವಿಭಾಗ, ಮಾನಸಗಂಗೋತ್ರಿ,

೯. ಡಾ. ಎನ್. ಪ್ರಭುಸ್ವಾಮಿ — ರೀಡರ್, ಅರ್ಥಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ,

೧೦. ಡಾ॥ ಡಿ. ಕೆ. ರಾಜೇಂದ್ರ — ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ,

೧೧. ಡಾ॥ ಬಾ. ರಾ. ಗೋಪಾಲ್ — ರೀಡರ್, ದಕ್ಷಿಣ ಭಾರತೀಯ ಅಧ್ಯಯನ, ಕನ್ನಡ ಅಧ್ಯಯನ ಸಂಸ್ಥೆ, ಸಂಪಾದಕರು, ಮಾನವಿಕ ಕರ್ನಾಟಕ, ಮಾನಸಗಂಗೋತ್ರಿ.

೧೨. ಡಾ॥ ಕೆ. ಎಸ್. ಶಿವಣ್ಣ — ಅಧ್ಯಾಪಕರು, ಇತಿಹಾಸ ವಿಭಾಗ, ಮಾನಸ ಗಂಗೋತ್ರಿ .

ಜಿ. ಟಿ. ನಾರಾಯಣರಾವ್

ಐನ್‌ಸ್ಟೈನ್ ಮತ್ತು ಪ್ರಪಂಚಶಾಂತಿ

ನಮ್ಮ ಶಾಲಾ ಪುಸ್ತಕಗಳು ಯುದ್ಧವನ್ನು ಉದಾತ್ತೀಕರಿಸಿ ಅದರ ಕ್ರೌರ್ಯವನ್ನು ಮರೆಮಾಚುತ್ತವೆ, ಮಕ್ಕಳ ಧಮನಿಗಳಲ್ಲಿ ದ್ವೇಷವನ್ನು ಹೊಗಿಸುತ್ತವೆ. ನಾನು ಯುದ್ಧದ ಬದಲಾಗಿ, ಶಾಂತಿ ಬೋಧಿಸಿಯೇನು, ದ್ವೇಷದ ಬದಲಾಗಿ ಪ್ರೇಮ ಬೆಳೆಸಿಯೇನು — ಐನ್‌ಸ್ಟೈನ್

*   *   *   *   *

ಮಾನವನ ಹಕ್ಕುಬಾಧ್ಯತೆಗಳನ್ನು ಕಾಪಾಡುವುದರಲ್ಲಿ ಅಪಾರ ಆಸ್ಥೆ ವಹಿಸಿದವರು ಎಂಬ ಕಾರಣಕ್ಕಾಗಿ ಆಲ್ಬರ್ಟ್ ಐನ್‌ಸ್ಟೈನರನ್ನು ಅಮೆರಿಕದ ಶಿಕಾಗೊದಲ್ಲಿ 1954 ಫೆಬ್ರುವರಿ 20 ರಂದು ಸಾರ್ವಜನಿಕವಾಗಿ ಸನ್ಮಾನಿಸಲಾಯಿತು. ಆಗ ಅವರಾಡಿದ ಮಾತು "ಸುದೀರ್ಘ ಜೀವನದ ಅವಧಿಯಲ್ಲಿ ನಾನು ನನ್ನ ಸಮಸ್ತ ಶಕ್ತಿ ಸಾಮರ್ಥ್ಯವನ್ನೂ ಭೌತವಸ್ತುವಿನ ರಚನೆಯನ್ನು ಆಳವಾಗಿ ಅರಿಯುವತ್ತ ವಿನಿಯೋಗಿಸಿದ್ದೇನೆ. ನಾನೆಂದೂ ವ್ಯವಸ್ಥಿತವಾಗಿ ಅನ್ಯಾಯ ಮತ್ತು ದಬ್ಬಾಳಿಕೆಯನ್ನು ಎದುರಿಸಲು, ಭೂರಿ ಜನರ ಸ್ಥಿತಿಗತಿಗಳನ್ನು ಒಳಿತುಗೊಳಿಸಲು ಇಲ್ಲವೇ ಮಾನವಸಂಬಂಧಗಳ ಸಾಂಪ್ರದಾಯಿಕ ವಿಧಿಗಳನ್ನು ಸುಧಾರಿಸಲು ಪ್ರಯತ್ನಿಸಿರುವುದಿಲ್ಲ. ನಾನು ನಿರ್ವಹಿಸಿರುವ ಒಂದೇ ಒಂದು ಪಾತ್ರವಿದು: ಸಾರ್ವಜನಿಕ ವಿವಾದಗಳು ಅತ್ಯಂತ ಪ್ರಕೋಪ ಮತ್ತು ಶೋಚನೀಯ ಸ್ಥಿತಿಗೆ ಹೋಗಿದ್ದು, ಆಗ ನಾನು ಮೌನ ತಳೆದಿದ್ದರೆ, ಅದು ಸಮ್ಮತಿಸೂಚಕವೆನ್ನಿಸಿ ದ್ರೋಹಿ ಆಗುತ್ತಿದ್ದೆನೆಂದು ಕಂಡುಬಂದಾಗಲೆಲ್ಲ, ಸುದೀರ್ಘ ಕಾಲಾಂತರಗಳಲ್ಲಿ, ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ.

"ಮಾನವನ ಹಕ್ಕುಬಾಧ್ಯತೆಗಳ ಅಸ್ತಿತ್ವ ಮತ್ತು ಸಾಧುತ್ವ ನಕ್ಷತ್ರಲಿಖಿತ ದಾಖಲೆಗಳೇನೂ ಅಲ್ಲ. ಮನುಷ್ಯರ ನಡುವಿನ ನಡವಳಿಕೆಯನ್ನು ಕುರಿತ ಆದರ್ಶಗಳು ಮತ್ತು ಸಮಾಜದ ಅಪೇಕ್ಷಣೀಯ ರಚನೆ ಹೇಗಿರಬೇಕು ಎಂಬುದನ್ನು ಇತಿಹಾಸದ ಉದ್ದಕ್ಕೂ ಪ್ರತಿಭಾನ್ವಿತ ವ್ಯಕ್ತಿಗಳು ಚಿಂತಿಸಿದ್ದಾರೆ ಮತ್ತು ಪ್ರತಿಪಾದಿಸಿದ್ದಾರೆ. ಸೌಂದರ್ಯ ಮತ್ತು ಸಾಂಗತ್ಯ ಗಳಿಕೆಗಾಗಿ ಕಡುಬಯಕೆ, ಮತ್ತು ಐತಿಹಾಸಿಕಾನುಭವ ಇವುಗಳ ಫಲವಾಗಿ ಜನಿಸಿದ ಈ ದಿವ್ಯಾದರ್ಶಗಳನ್ನೂ ದೃಢನಂಬಿಕೆಗಳನ್ನೂ ಮಾನವ ನಿರ್ವಿಕಾರ ಬುದ್ಧಿಯಿಂದ, ಸೈದ್ಧಾಂತಿಕವಾಗಿ, ಸ್ವೀಕರಿಸಿದ್ದಾಗಲೇ ಎಲ್ಲ ಯುಗಗಳಲ್ಲಿಯೂ ಆತನ ಪಾಶವಿಕ ಪ್ರವೃತ್ತಿಗಳ ಒತ್ತಾಯಕ್ಕೆ ಮಣಿದು ಅವನ್ನು ತುಳಿದಪ್ಪಳಿಸಿಯೂ ಇದ್ದಾನೆ. ಇತಿಹಾಸದ ಬಲು ದೊಡ್ಡ ಭಾಗ ಮಾನವನ ಹಕ್ಕುಬಾಧ್ಯತೆಗಳ

ಸ್ಥಾಪನೆಯ ಹೋರಾಟದ ಕತೆಗಳಿಂದ ತುಂಬಿ ತುಳುಕಾಡುತ್ತಿದೆ. ಕೊನೆ ಇರದ ಹೋರಾಟವಿದು. ಇದರಲ್ಲಿ ಅಂತಿಮ ಜಯವೆಂದೂ ಕೈಗೂಡದು. ಆದರೆ ಈ ಹೋರಾಟದಲ್ಲಿ ದಣಿವು ಇಣುಕಿದ್ದೇ ಆದರೆ ಆಗ ಸಮಾಜ ನಾಶವಾಗುವುದು ದಿಟ."

1879ರಿಂದ 1955ರ ತನಕ ಎಪ್ಪತ್ತಾರು ವರ್ಷಗಳ ಸಾರ್ಥಕ ಜೀವನ ನಡೆಸಿದ ಈ ವಿಜ್ಞಾನಿಋಷಿಯ ಅಭಿಪ್ರಾಯದಲ್ಲಿ ಮಾನವನ ಹಕ್ಕುಬಾಧ್ಯತೆಗಳ ರಕ್ಷಣೆಯೂ ಪ್ರಪಂಚದಲ್ಲಿ ಸುಖಶಾಂತಿಗಳ ಸ್ಥಾಪನೆಯೂ ಒಂದೇ ನಾಣ್ಯದ ಎರಡು ಮಗ್ಗುಲುಗಳು. ಒಂದಿದ್ದರೆ ಇನ್ನೊಂದುಂಟು, ಒಂದಿಲ್ಲದೇ ಇನ್ನೊಂದಿಲ್ಲ, ಒಂದಕ್ಕೆ ಇನ್ನೊಂದು ಪೂರಕ, ಪೋಷಕ. ಹುಟ್ಟಿನಿಂದಲೇ ಇವರು ಶಾಂತಿಪ್ರಿಯರು. ಕಡ್ಡಾಯತನದ ಲೇಪವಿದ್ದ ಎಲ್ಲ ಚಟುವಟಿಕೆಗಳೂ ಇವರಿಗೆ ನಿಷಿದ್ಧ. ತರಗತಿಯಲ್ಲಿ ಉಪಾಧ್ಯಾಯ ಚಲಾಯಿಸುತ್ತಿದ್ದ ಶಿಸ್ತು ಮತ್ತು ಮನೆಯಲ್ಲಿ ಪಿಟೀಲು ಮೇಷ್ಟ್ರು ಹೇರುತ್ತಿದ್ದ ವಿಧಿ ಎರಡೂ ಒಂದೇ ಕ್ರೂರ ಮನಸ್ಸಿನ ಭಿನ್ನ ರೂಪಗಳೆಂದು ಭಾವಿಸಿದ್ದರು. ದಳವಾಯಿ ಪದಾತಿಗಳಿಗೆ ಅಬ್ಬರಿಸುತ್ತಿದ್ದ ಕಡ್ಡಾಯದ ಹುಕುಮುಗಳಿಗಿಂತ ಇವು ಬೇರೆ ಅಲ್ಲವೆಂದು ಇವರ ಎಳೆ ಮನಸ್ಸು ಹಿಡಿಯುತ್ತಿತ್ತು.

ಜರ್ಮನಿಸಂಜಾತರಾದ ಐನ್‌ಸ್ಟೈನ್ ಹದಿನೈದು ವರ್ಷ ಪ್ರಾಯವಾಗುವ ತನಕ ವ್ಯಾಸಂಗವನ್ನು ಅಲ್ಲಿನ ಲಷ್ಕರೀ ವಾತಾವರಣದಲ್ಲಿ ಕಷ್ಟದಿಂದ ಸಾಗಿಸಿ, ಗಳಹಿಸುಕುವ ಆ ಪರಿಸರದಲ್ಲಿ ಮುಂದೆ ಇರಲಾಗದೆ, ಇಡೀ ದೇಶದ ಬಗ್ಗೆ ತಿರಸ್ಕಾರ ತಳೆದು, ವಿದ್ಯೆ ಇನ್ನೂ ಒಂದು ಹಂತ ಐದುವ ಮೊದಲೇ ದೇಶ ಬಿಟ್ಟು, ಜರ್ಮನ್ ಪೌರತ್ವ ಬಿಸುಟು, ಸ್ವಿಟ್ಸರ್ಲೆಂಡಿಗೆ ಹೋಗಿ ಅಲ್ಲಿ ಮುಂದಿನ ಶಿಕ್ಷಣ ಪಡೆದು, ಆ ದೇಶದ ಪೌರತ್ವ ಸ್ವೀಕರಿಸಿ, ಅಲ್ಲಿಯೇ ಕೆಲಸಕ್ಕೆ ಸೇರಿದರು.

1905ರಲ್ಲಿ ಪ್ರಕಟವಾದ ಇವರ ವಿಶೇಷ ಸಾಪೇಕ್ಷತಾಸಿದ್ಧಾಂತದ (Theory of Special Relativity) ಅನುಪಮ ಹಾಗೂ ಅದ್ವಿತೀಯ ಸಂಶೋಧನ ಪ್ರಬಂಧಗಳು ಇವರಿಗೆ ಯುಗದ ಮಹಾವಿಜ್ಞಾನಿ ಎಂಬ ಖ್ಯಾತಿ ತಂದುಕೊಟ್ಟಾಗ, ಜರ್ಮನಿಯಿಂದ ಬಂದ ಅನಿರ್ಬಂಧಿತ ಮತ್ತು ಮುಕ್ತ ಆಹ್ವಾನವನ್ನು ಮನ್ನಿಸಿ ಬರ್ಲಿನ್ನಿಗೆ ಹೋದರು — ಆದರೆ ಸ್ವಿಸ್ ಪ್ರಜೆಯಾಗಿಯೇ. ಇದು ನಡೆದದ್ದು ಏಪ್ರಿಲ್ 1914ರಲ್ಲಿ. ಆಗ ಜರ್ಮನಿಯಲ್ಲಿ ಮಿಲಿಟರಿ ಹಮ್ಮು ಎಲ್ಲೆ ಮೀರಿ ಬಿರಿಯುವುದರಲ್ಲಿತ್ತು. ಸೈನ್ಯದ ಕೊರೆದಾಡೆಗಳಿಗೆ ಉಗ್ರರಾಷ್ಟ್ರೀಯತೆ ನಂಜನ್ನು ಊಡಿತ್ತು. ಯುದ್ಧದ ಕಾರ್ಮೋಡಗಳು ದಟ್ಟವಾಗಿ ಕವಿದು ಪ್ರಳಯ ಯಾವ ಗಳಿಗೆಯೂ ಸಂಭವಿಸುವುದರಲ್ಲಿತ್ತು. ಅದೇ ಆಗಸ್ಟಿನಲ್ಲಿ ಆ ದುರ್ಮುಹೂರ್ತ ಕೂಡಿಯೇ ಬಂದಿತು. ರಾಷ್ಟ್ರೀಯ ಪ್ರಜ್ಞೆಯನ್ನು ಸೇನಾಸಾಹಸಗಳತ್ತ ವ್ಯವಸ್ಥಿತವಾಗಿ ಕಾಲುವೆ ಹರಿಸಿ, ಅದಕ್ಕೆ ಪೂರಕವಾಗಿ ಸುಸಂಘಟಿತ ಸೇನಾಬಲಗಳನ್ನು ಸಜ್ಜುಗೊಳಿಸಿ, ಜರ್ಮನಿ, ನೆರೆರಾಷ್ಟ್ರಗಳ ಮೇಲೆ ಯುದ್ಧ ಸಾರಿ, ಒಂದನೆಯ ಮಹಾಯುದ್ಧದ ಕಿಡಿಯನ್ನು ಸಿಡಿಸಿಯೇ ಬಿಟ್ಟಿತು. ಆದರೆ ತನ್ನ 'ಸತ್ಯನಿಷ್ಠ' ರಾಜನೀತಿಯನ್ನು ಪ್ರಪಂಚಕ್ಕೆ ಪ್ರದರ್ಶಿಸಲೋಸ್ಕರ ಆ ದಾಳಿಕೋರ ದೇಶ 'ನಾಗರಿಕ ಪ್ರಪಂಚಕ್ಕೆ ಪ್ರಣಾಳಿಕೆ' ಎಂಬ ಲಿಖಿತ ಪತ್ರವನ್ನು ಪ್ರಕಟಿಸಿತು. ಇದರ ಪ್ರಕಾರ ಜರ್ಮನ್ ಸಂಸ್ಕೃತಿಯೂ ಮಿಲಿಟರಿತನವೂ ಅಖಂಡವಾದವು, ಅವಿಭಾಜ್ಯವಾದವು; ಅಂತಾರಾಷ್ಟ್ರೀಯ ಪಿತೂರಿಗಳ ಕಾರಣವಾಗಿ ಜರ್ಮನಿಯ ಉಳಿವಿಗೇ ಸಂಚಕಾರ ಒದಗಿ ಬಂದದ್ದರಿಂದ, ಸ್ವರಕ್ಷಣೆಗೋಸ್ಕರ ಸದ್ಯ ಮಿಲಿಟರಿತನ ಮುಂಬಂದು ಕದನೋದ್ಯುಕ್ತವಾಗುವುದು ಅನಿವಾರ್ಯವಾಗಿದೆ ಎಂದಿತ್ತು. ಈ ರಾಜಕೀಯ ಪ್ರಣಾಳಿಕೆಗೆ ತೊಂಬತ್ತೆರಡು ಮಂದಿ ಜರ್ಮನ್ ಬುದ್ಧಿಜೀವಿಗಳು — ಅಂದರೆ ವಿಜ್ಞಾನಿಗಳು, ಸಾಹಿತಿಗಳು, ವಿಚಾರವಾದಿಗಳು, ಕಲಾವಿದರು, ತಂತ್ರವಿದರು ಮುಂತಾದವರು — ರುಜುವಿಕ್ಕಿದ್ದರು. ಶಾಂತಿ ಕಾಲದಲ್ಲಿ ತಾವು ಪ್ರಪಂಚಪುರುಷರೆಂದು ಕೊಚ್ಚಿಕೊಂಡು ಉದಾತ್ತಧ್ಯೇಯಗಳನ್ನು ಘೋಷಿಸುತ್ತ ಬೀಗುತ್ತಿದ್ದ ಈ ಮಹನೀಯರು ಈಗ ಆಳರಸರ

ಜೊತೆ ಸಾಮೀಲಾಗಿ ಹೊಡೆದ ಡೊಂಬರಲಾಗವನ್ನು ಕಂಡ ಐನ್‌ಸ್ಟೈನರಲ್ಲಿ ಸಾತ್ತ್ವಿಕ ಆಕ್ರೋಶ ಉಮ್ಮಳಿಸಿತು.

ಇಂಥ ದುರ್ಧರ ಸನ್ನಿವೇಶದಲ್ಲಿ ಇವರು ಏಕಾಂಗಿಯಾಗಿ ನಿಂತರು. ಪ್ರಪಂಚದ ಮೂಕ ಮನಸ್ಸಾಕ್ಷಿಯ ಶೋಕ ಮೂರ್ತಿಯಾಗಿ ನಡೆದರು. ‘ನಾಗರಿಕ ಪ್ರಪಂಚಕ್ಕೆ ಪ್ರಣಾಳಿಕೆ’ಗೆ ಎದುರಾಗಿ ಮುಂದಿನ ಕೆಲವೇ ದಿನಗಳಲ್ಲಿ ‘ಯೂರೊಪಿಯನ್ನರಿಗೆ ಪ್ರಣಾಳಿಕೆ’ಯನ್ನು ಪ್ರಕಟಿಸಿದರು. ಇದಕ್ಕೆ ರುಜುವಿಕ್ಕಿದವರು ಐನ್‌ಸ್ಟೈನರನ್ನೂ ಒಳಗೊಂಡಂತೆ ನಾಲ್ವರು ಋಜು ಪುರುಷರು ಮಾತ್ರ.

“ವಾದ್ಯ ಬಜಾವಣೆಗೆ ಅನುಗುಣವಾಗಿ ಅಡ್ಡ ನೀಟಸಾಲುಗಳಲ್ಲಿ ಕಾಲು ಕುಕ್ಕಿ ಕುಟ್ಟಿ ನಡೆಯುವುದನ್ನು ಮೆಚ್ಚುವಾತ ನನ್ನ ತಿರಸ್ಕಾರಕ್ಕೂ ಅರ್ಹನಲ್ಲ. ಅವನಲ್ಲಿ ಮಹಾಮಸ್ತಿಷ್ಕ (ಮಿದುಳು) ತಪ್ಪಾಗಿ ಸೇರಿಕೊಂಡಿದೆ. ಅವನಿಗೆ ಕಶೇರುರಜ್ಜುವೊಂದೇ (ಬೆನ್ನುಹುರಿ) ಧಾರಾಳವಾಗಿ ಸಾಕಿತ್ತು” ಎನ್ನುತ್ತಿದ್ದ ಐನ್‌ಸ್ಟೈನ್ ಈ ಪ್ರಣಾಳಿಕೆಯಲ್ಲಿ ಹೀಗೆ ಬರೆದರು:

“ಯುದ್ಧ ಈಗಿನಂತೆ ಹಿಂದೆಂದೂ ಇಷ್ಟೊಂದು ಪೂರ್ತಿಯಾಗಿ ಸಾಂಸ್ಕೃತಿಕ ಸಹಕಾರವನ್ನು ಬುಡಮೇಲು ಮಾಡಿದ್ದಿಲ್ಲ. ಇದು ಘಟಿಸಿರುವುದಾದರೂ ಎಂದು? ನಮ್ಮನ್ನು ಸಾರ್ವತ್ರಿಕ ಪ್ರಪಂಚವ್ಯಾಪಿ ನಾಗರಿಕತೆಯತ್ತ ಅವಶ್ಯವಾಗಿ ಒಯ್ಯಬಲ್ಲ ಅಂತಾರಾಷ್ಟ್ರೀಯ ಸಂಬಂಧಗಳ ಅಗತ್ಯವನ್ನು ನಾವು ಪರಿಗಣಿಸಲೇಬೇಕು ಎಂಬುದಾಗಿ ತಂತ್ರವಿದ್ಯೆ ಮತ್ತು ಸಂಸ್ಕೃತಿಗಳಲ್ಲಿ ಸಾಧಿಸಿರುವ ಪ್ರಗತಿ ಸಾರಿಸಾರಿ ಹೇಳುತ್ತಿರುವ ಇದೇ ದಿನಗಳಂದು. ಈ ಮೊದಲು ಎಷ್ಟೊಂದು ಅಂತಾರಾಷ್ಟ್ರೀಯ ಬಂಧಗಳು ಬೆಸೆದುಕೊಂಡಿದ್ದುವು ಎಂಬ ಕಾರಣಕ್ಕಾಗಿಯೇ ಪ್ರಾಯಶಃ ಈಗಿನ ಛೇದನೆ ನಮಗೆ ಇನ್ನಷ್ಟು ದಾರುಣವಾದ ವೇದನೆ ಉಂಟುಮಾಡಿದೆ.

“ನಮಗೇನೂ ಅಚ್ಚರಿ ಆಗಬೇಕಾಗಿಲ್ಲ. ಸರ್ವಮಾನ್ಯ ಪ್ರಪಂಚ ಸಂಸ್ಕೃತಿಯನ್ನು ಕೊಂಚವಾದರೂ ಲೆಕ್ಕಿಸುವ ಯಾರೇ ಆಗಲಿ ಅದು ನಿಂತಿರಲೇಬೇಕಾದ ತತ್ತ್ವಗಳ ಕಾಪಾಡಿಕೆಗಾಗಿ ಈಗ ಎರಡು ತೆರದಲ್ಲಿ ಬದ್ಧನಾಗಿದ್ದಾನೆ. ಹೀಗಿದ್ದಾಗ್ಯೂ ಯಾರಿಂದ ಇಂಥ ಭಾವಗಳನ್ನು ನಿರೀಕ್ಷಿಸಬಹುದಾಗಿತ್ತೊ — ಪ್ರಧಾನತಃ ವಿಜ್ಞಾನಿಗಳು ಮತ್ತು ಕಲಾವಿದರು — ಅಂಥವರು ಈ ತನಕ, ಹೆಚ್ಚು ಕಡಿಮೆ ಪ್ರತಿಯೊಬ್ಬನೂ ಎನ್ನುವಂತೆ, ಅಂತಾರಾಷ್ಟ್ರೀಯ ಸಂಬಂಧಗಳ ಮುಂದುವರಿಕೆಗೆ ಯಾವುದೇ ಹೆಚ್ಚಿನ ಅಪೇಕ್ಷೆಯನ್ನು ತೋರದೇ ಬಿಟ್ಟಿರುವರೆಂಬಂಥ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ಪ್ರತೀಕಾರ ಭಾವನೆಯಿಂದ ಮಾತಾಡಿದ್ದಾರೆ ಮತ್ತು ಶಾಂತಿಯನ್ನು ಬೆಂಬಲಿಸುವುದರಲ್ಲಿ ವಿಫಲರಾಗಿದ್ದಾರೆ.

“ಪ್ರಪಂಚ ಈ ತನಕ ಸಂಸ್ಕೃತಿಯೆಂದು ಯಾವುದನ್ನು ಹೇಳಿಕೊಂಡು ಬಂದಿದೆಯೋ ಅದಕ್ಕೆ ಸಲ್ಲದ ಈ ನಿಲವನ್ನು ಉಗ್ರರಾಷ್ಟ್ರೀಯತೆಯ ಹೆಸರಿನಲ್ಲಿ ಕ್ಷಮಿಸಲು ಬಾರದು. ಹೀಗಲ್ಲದೇ, ಅದನ್ನು ಕ್ಷಮಿಸಬಹುದೆಂಬ ಭಾವ ಬುದ್ಧಿವಂತರಲ್ಲಿ ಸಾರ್ವತ್ರಿಕ ಚಲಾವಣೆ ಗಳಿಸಿದ್ದೇ ಆದರೆ ಅದೊಂದು ಘೋರ ದುರದೃಷ್ಟ. ಅದು ಸ್ವತಃ ಸಂಸ್ಕೃತಿಗೆ ಮುಳುವಾಗುವುದು ಮಾತ್ರವಲ್ಲ, ಯಾವ ರಾಷ್ಟ್ರಗಳ ರಕ್ಷಣೆಗೋಸ್ಕರ ಈ ಮಾರಣಹೋಮ(ಯುದ್ಧ)ವನ್ನು ಹೂಡಲಾಗಿದೆಯೋ ಖುದ್ದು ಅವುಗಳ ಅಸ್ತಿತ್ವವನ್ನೇ ಅಪಾಯಕ್ಕೆ ಈಡು ಮಾಡದಿರದು. ಇಂದು ತಂತ್ರವಿದ್ಯೆ ಪ್ರಪಂಚವನ್ನು ಸಂಕೋಚಿಸಿದೆ, ಸಂಪರ್ಕಜಾಲ ಸಪ್ತಸಾಗರಗಳನ್ನೂ ಸಮಸ್ತ ನಗರಗಳನ್ನೂ ಬೆಸೆದಿದೆ. ಇಡೀ ಪ್ರಪಂಚವೇ ಈಗ ಒಂದು ಘಟಕ. ಪರಿಸ್ಥಿತಿ ಹೀಗಿರುವಾಗ ಯೂರೊಪ್ ಅಂತಃಕಲಹಗಳಿಂದ ವಿನಾಶಪಥ ಹಿಡಿಯುವುದು ಸಲ್ಲ. ಇಂದಿನ ಯುದ್ಧದಲ್ಲಿ ಭಾಗಿಗಳೆಲ್ಲರೂ ಸೋತು ಸುಣ್ಣಾಗುವುದರಿಂದ ನಿಜವಾದ ವಿಜಯಿಗಳ ಇತ್ಯರ್ಥವೆಂದೂ ಆಗದು.

ಆದ್ದರಿಂದ ಪ್ರಾಜ್ಞರು ಎಲ್ಲಿಯೇ ಇದ್ದರೂ ಯುದ್ಧನಿವಾರಣೆಗಾಗಿ ಪೂರ್ಣ ಪ್ರಯತ್ನ ಮಾಡುವುದು ಆದ್ಯ ಕರ್ತವ್ಯ. ಯೂರೋಪಿನ ಅಖಂಡ ಸಂಸ್ಕೃತಿಯನ್ನು ಕಾಪಾಡುವತ್ತ ನಾವು ಮೊದಲ ಹೆಜ್ಜೆ ಇಡಬೇಕು. ಎಲ್ಲ ಯೂರೋಪಿಯನ್ನರೂ ಒಂದಾಗಿ ಯೂರೋಪಿನ ಒಕ್ಕೂಟ ಸ್ಥಾಪಿಸುವುದರತ್ತ ಉದ್ಯುಕ್ತರಾಗಬೇಕು."

ಯೆಹೂದ್ಯದ್ವೇಷಿಗಳ ನೆಲೆವೀಡಾಗಿದ್ದ ಜರ್ಮನಿಯಲ್ಲಿದ್ದುಕೊಂಡು, ಕಾಳಗದ ಕಾವು ಏರುತ್ತಿದ್ದ ದಿನಗಳಂದು, ಅಧಿಕಾರೋನ್ಮತ್ತರ ಪಕ್ಷಕ್ಕೆ ವಿರೋಧವಾಗಿ, ಈ ಸಾರ್ವಜನಿಕ ಘೋಷಣೆ ಪ್ರಕಟಿಸುವಲ್ಲಿ, ಯೆಹೂದ್ಯಕುಲಜ ಐನ್‌ಸ್ಟೈನ್ ಪ್ರದರ್ಶಿಸಿದ ಎದೆಗಾರಿಕೆ ಅಸಾಮಾನ್ಯವಾದುದು. ಅವರಿಗೆ ಪ್ರಪಂಚಶಾಂತಿಯ ಬಗ್ಗೆ ಇದ್ದ ಅಚಲ ಶ್ರದ್ಧೆಗೆ ಮತ್ತು ಯಾವ ಸಮಸ್ಯೆಗೂ ಯುದ್ಧ ಸುತರಾಂ ಪರಿಹಾರವಲ್ಲ ಎಂದಿದ್ದ ದೃಢ ನಂಬಿಕೆಗೆ ಇದು ಸಾಕ್ಷಿ.

1918ರಲ್ಲಿ ಜರ್ಮನಿಯ ಪತನದೊಂದಿಗೆ ಯುದ್ಧವೇನೋ ನಿಂತಿತು. ಆದರೆ ಆ ದೇಶದ ಅಪಮಾನಿತ ಅಭಿಮಾನ ಪ್ರಜ್ಞೆ ಈ ಪರಾಭವವನ್ನು ಒಪ್ಪಲೇ ಇಲ್ಲ. ತಾವು ಆರ್ಯಕುಲೋತ್ಪನ್ನರೆಂದೂ ಪ್ರಪಂಚಧುರೀಣರಾಗಲು ಯೋಗ್ಯತೆ ಪಡೆದವರೆಂದೂ ಜರ್ಮನರು ಭಾವಿಸಿದ್ದರು. ತಮ್ಮ ಪರಮವೈರಿಗಳಾದ ಯೆಹೂದ್ಯರು ಜರ್ಮನ್ ಸಂಸ್ಕೃತಿಗೆ ಹಿಡಿದ ಜಂಗು ಎಂದು ನಂಬಿದ್ದರು. ಜಗದೇಕವೀರರಾದ ತಾವು ಯಾವುದೇ ಯುದ್ಧದಲ್ಲಿ ಸೋಲುವುದು ಸಾಧ್ಯವಿಲ್ಲ. ಈಗ ಸಂಭವಿಸಿರುವುದು ಸ್ಥಳೀಯ ಘಾತಕರಾದ ಯೆಹೂದ್ಯರು ಅಂತಾರಾಷ್ಟ್ರೀಯ ಪಿತೂರಿಗಾರರೊಂದಿಗೆ ಹೊಯಿಕೈಯಾಗಿ ಜರ್ಮನಿಗೆ ಬಗೆದಿರುವ ದ್ರೋಹ, ಈ ಮುಯ್ಯಿಗೆ ಮುಯ್ಯಿ ತೀರಿಸಲೇಬೇಕೆಂದು ಹೊಂಚಿದರು. ಆದರೆ ನವ್ಯ ಜರ್ಮನ್ ಗಣರಾಜ್ಯದ ಸರ್ಕಾರ ಈ ಉಗ್ರ ರಾಷ್ಟ್ರಪ್ರೇಮಿಗಳಿಗೆ ಅನುಕೂಲವಾಗಿರದ್ದರಿಂದ ಯೆಹೂದ್ಯದ್ವೇಷ ನೆಲದಡಿಯ ಲಾವಾರಸವಾಗಿದ್ದು, ಸಾರ್ವಜನಿಕ ಜೀವನದಲ್ಲಿ ಮತ್ತು ಸರ್ಕಾರೀ ವ್ಯವಹಾರಗಳಲ್ಲಿ ಆಗ ಈಗ ಬಿರುಕು ಕೊರಕಲುಗಳ ಮೂಲಕ ಅಲ್ಲಿ ಇಲ್ಲಿ ಹೊರಸಿಡಿದು ತನ್ನ ಖಚಿತ ಅಸ್ತಿತ್ವವನ್ನು ಪ್ರಕಟಿಸುತ್ತಿತ್ತು; ಮತ್ತು ವೈಯಕ್ತಿಕವಾಗಿ ಐನ್‌ಸ್ಟೈನರ ವಿರುದ್ಧ ಸುಯೋಜಿತ ವಾಗ್ಯುದ್ಧ ಹೂಡಿ ಇವರ ತೇಜೋವಧೆ ಮಾಡುತ್ತಿದ್ದುದರ ಜೊತೆಗೆ ಇವರ ಪರಿಪೂರ್ಣ ಸಿದ್ಧಾಂತಗಳನ್ನು ಕ್ಷುದ್ರ ಕ್ಷುಲ್ಲಕ ಇಂದ್ರಜಾಲಗಳೆಂದು ಲೇವಡಿ ಮಾಡುತ್ತಿತ್ತು.

ವಾಸ್ತವವಾಗಿ ಪ್ರಪಂಚಮಾನ್ಯರಾಗಿದ್ದ ಐನ್‌ಸ್ಟೈನರಿಗೆ ತಮ್ಮ ಯೆಹೂದ್ಯತ್ವದ ಅರಿವು ಮೂಡಿದ್ದು 1914ರ ಅನಂತರವೇ. ಯೂರೋಪಿನ ವಿವಿಧ ರಾಷ್ಟ್ರಗಳಲ್ಲಿ ಹರಡಿ ಹಂಚಿಹೋಗಿದ್ದ ಯೆಹೂದ್ಯರ ಬಾಳಬವಣೆಗಳ ದುರಂತ ಕತೆ ಇವರಿಗೆ ಪುಂಖಾನುಪುಂಖವಾಗಿ ತಲಪುತ್ತಿತ್ತು. ಜರ್ಮನಿಯಲ್ಲಂತೂ ಈ ಹತಭಾಗ್ಯರ ಪರಿಸ್ಥಿತಿ ಶೋಚನೀಯವಾಗಿತ್ತು. ತಮ್ಮ ತಂದೆ ಮತ್ತು ಚಿಕ್ಕಪ್ಪ ಯೆಹೂದ್ಯದ್ವೇಷಕ್ಕೆ ಬಲಿಯಾಗಿ ವ್ಯಾಪಾರದಲ್ಲಿ ನಷ್ಟಪಟ್ಟು ನೆಲೆಗಾಣದೆ ಜರ್ಮನಿಯನ್ನು ತೊರೆದು (1894) ದೂರದ ಇಟಲಿಗೆ ಹೊರಟುಹೋದ ದುರ್ಘಟನೆ ಇವರ ಮನದಲ್ಲಿ ಆಳವಾದ ಗಾಯ ಕೆತ್ತಿತ್ತು. ಜರ್ಮನಿಯಲ್ಲಿ, ಅಷ್ಟೇಕೆ ಪ್ರಪಂಚದಲ್ಲೇ, ಗೌರವಾನ್ವಿತ ಮಹಾವಿಜ್ಞಾನಿಯಾಗಿದ್ದ ಐನ್‌ಸ್ಟೈನರಾದರೂ ಇವರ ಹುಟ್ಟಿನ ಆಕಸ್ಮಿಕತೆಯ ಏಕೈಕ ಕಾರಣದಿಂದಾಗಿ ಯೆಹೂದ್ಯದ್ವೇಷಕ್ಕೆ ಗ್ರಾಸವಾಗಬೇಕಾದದ್ದು ಜರ್ಮನ್ ರಾಷ್ಟ್ರೀಯತೆಯ ಹಾಲಾಹಲ ಸ್ವರೂಪಕ್ಕೆ ನಿದರ್ಶನ.

1920ರಷ್ಟು ಹಿಂದೆಯೇ ಐನ್‌ಸ್ಟೈನರಿಗೆ ಭವಿಷ್ಯದ ಬೆಳವಣಿಗೆಗಳ ಸುಳುಹು ದೊರೆತಿತ್ತು. ಏರುತ್ತಿದ್ದ ಜರ್ಮನ್ ರಾಷ್ಟ್ರೀಯತೆಯ ರಂಗನ್ನು ಬೆಂಬಲಿಸಲು ಸೇನಾಬಲವನ್ನು ಸಂವರ್ಧಿಸುವುದು ಅಗತ್ಯವಾಗುತ್ತದೆ, ಸೇನಾಬಲಕ್ಕೆ ಭದ್ರ ತಾತ್ತ್ವಿಕ ಅಡಿಪಾಯ ಒದಗಿಸಿ ಅದರ ಧೃತಿಯನ್ನು ಹಿರಿಮಟ್ಟದಲ್ಲಿ ಕಾಪಾಡಲು ರಾಷ್ಟ್ರೀಯತೆಯ ಪೋಷಕದ್ರವ್ಯವನ್ನು ಹೆಚ್ಚು

ಹೆಚ್ಚು ಎರೆಯಬೇಕಾಗುತ್ತದೆ, ಒಂದಕ್ಕಿನ್ನೊಂದು ಕೊಕ್ಕೊಡುವ ಈ ಆಟ ಅಥವಾ ಓಟ ತಾರಕ್ಕೆ ಏರುವಾಗ ಜರ್ಮನಿಯಲ್ಲಿ ಯೆಹೂದ್ಯರ ಪೂರ್ಣಾಹುತಿ ಆಗಿರುತ್ತದೆ, ಅದೇ ವೇಳೆ ಪ್ರಪಂಚಶಾಂತಿ ಸ್ಫೋಟಿಸಿ ನಾಶವಾಗಿರುತ್ತದೆ ಎಂಬುದಾಗಿ ಇವರು ತರ್ಕಿಸಿದ್ದರು. ಆದ್ದರಿಂದ ಯೆಹೂದ್ಯರಿಗೆ ತನ್ನ ಕೈಲಾದ ನೆರವು ನೀಡುವುದು ಕರ್ತವ್ಯವೆಂದು ಭಾವಿಸಿದರು. ಎಂದೇ ಇವರು ಸಯನಿಸ್ಟ್ ಚಳವಳಿಯ ಬೆಂಬಲಿಗರಾದರು.

ಪ್ರಪಂಚದ ಅಲೆಮಾರಿಗಳಾಗಿದ್ದ, ಅಂದರೆ ಯಾವುದೇ ನಿರ್ದಿಷ್ಟ ಮಾತೃಭೂಮಿ ಇಲ್ಲದೆ ಎಲ್ಲೆಲ್ಲೂ ತೆಳುವಾಗಿ ಹರಡಿಹೋಗಿದ್ದ, ಯೆಹೂದ್ಯರ ಪ್ರಾಚೀನ ತವರೂರು ಪ್ಯಾಲೆಸ್ಟೈನ್. ಅಲ್ಲಿ ಇವರಿಗೆ ಶಾಶ್ವತ ನೆಲೆ ಗಳಿಸಿಕೊಡುವ ಉದ್ದೇಶದಿಂದ ಸಯನಿಸ್ಟ್ ಚಳವಳಿ 1897ರಲ್ಲಿ ಅಸ್ತಿತ್ವಕ್ಕೆ ಬಂದಿತು. ಅರಬ್ಬರ ನಾಡಾಗಿದ್ದ ಪ್ಯಾಲೆಸ್ಟೈನಿನಲ್ಲಿ ಪ್ರಪಂಚದ ಯೆಹೂದ್ಯರನ್ನು ಸಂಸ್ಥಾಪಿಸುವ ಪ್ರಯತ್ನ ಅಸಂಖ್ಯಾತ ಮಾನವೀಯ ಸಮಸ್ಯೆಗಳಿಗೆ ಕಾರಣವಾಗುತ್ತಿತ್ತು. ತೀರ ಸರಳವಾಗಿ ಹೇಳುವುದಾದರೆ ಯೆಹೂದ್ಯರಾಷ್ಟ್ರೀಯತೆಯ ಬೆಂಕಿಗೆ ಸಯನಿಸ್ಟ್ ಚಳವಳಿ ಉರುವಲು ಊಡುವುದು ದಿಟ. ರಾಷ್ಟ್ರೀಯತೆ, ಅದು ಯಾವ ಛಾಪಿನದೇ ಆಗಿರಲಿ, ಅಂತಿಮವಾಗಿ ಮಾನವನ ಪಾಶವಿಕ ಪ್ರವೃತ್ತಿಗಳನ್ನು ಬಡಿದೆಬ್ಬಿಸಿ, ಪ್ರಪಂಚಶಾಂತಿಗೆ ಮಾರಕವಾಗುವುದೆಂದು ತಿಳಿದಿದ್ದ ಐನ್‌ಸ್ಟೈನ್, ಸಯನಿಸ್ಟ್ ಚಳವಳಿಗೆ ಬೆಂಬಲವೀಯುವಲ್ಲಿ ವಿಶೇಷ ಸಂದಿಗ್ಧ ಸನ್ನಿವೇಶವನ್ನು ಎದುರಿಸಬೇಕಾಯಿತು. ಯೆಹೂದ್ಯರ ಸಂಕಷ್ಟ, ಆತ್ಮಪ್ರತ್ಯಯ ಹೀನತೆ ಮತ್ತು ನಿರ್ವಿಣ್ಣತೆ ನಿವಾರಿಸಿ, ಅವರನ್ನು ಒಂದು ಜನಾಂಗವಾಗಿ ಒಗ್ಗೂಡಿಸಿ, ಅಖಂಡ ಸಾಂಸ್ಕೃತಿಕ ಘಟಕವಾಗಿ ಬೆಸೆದು, ಅವರಿಗೆ ವ್ಯಕ್ತಿತ್ವ ದಾನ ಮಾಡಬಲ್ಲ ಸಂಜೀವಿನಿ ಈ ಚಳವಳಿ ಎಂದು ಇವರು ಮನಗಂಡದ್ದರಿಂದ ಇದಕ್ಕೆ ಸಾರ್ವಜನಿಕವಾಗಿ ತಮ್ಮ ಒತ್ತಾಸೆ ಕೊಟ್ಟರು. ಆದರೆ ಯೆಹೂದ್ಯ ರಾಷ್ಟ್ರೀಯತೆಗೂ ಅರಬ್ ರಾಷ್ಟ್ರೀಯತೆಗೂ ನಡುವೆ ತಿಕ್ಕಾಟವೇರ್ಪಡಬಹುದಾದ ಕಳ ಪ್ಯಾಲೆಸ್ಟೈನ್ ಆಗಬಾರದು, ಅಲ್ಲಿ ಯೆಹೂದ್ಯರು ಅರಬ್ಬರೊಡನೆ ಸಾಮರಸ್ಯದಿಂದ ಬಾಳಬೇಕು, ಈ ದಿಶೆಯಲ್ಲಿ ಯೆಹೂದ್ಯರಾಜಕಾರಣಿಗಳು ಯೋಚಿಸಿ ಮುನ್ನಾಗಬೇಕು ಎಂದು ಆಶಿಸಿದರು. ಜೆರೂಸಲೆಮ್ಮಿನಲ್ಲಿ ಯೆಹೂದ್ಯ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಧನ ಸಂಚಯಿಸಲು ಸಯನಿಸ್ಟ್ ಮುಖಂಡರ ಜೊತೆ ಅಮೆರಿಕಯಾತ್ರೆ ಮುಗಿಸಿ ಮರಳಿದರು. ವಸ್ತುತಃ ಯಾವ ಸಯನಿಸ್ಟನೂ, ಹಾಗೆ ಹೇಳುವುದಾದರೆ ಯಾವ ಕರ್ಮ. ಯೆಹೂದ್ಯನೂ, ಐನ್‌ಸ್ಟೈನರ ವಿಜ್ಞಾನಸಿದ್ಧಿಗಳ ಬಗ್ಗೆ ಹೆಮ್ಮೆ ತಳೆಯುತ್ತಿದ್ದಾಗಲೇ, ಇವರ ರಾಜಕೀಯ ಅಭಿಪ್ರಾಯಗಳನ್ನು ಎಂದೂ ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಈ ಮಂದಿಗೆ ಬೇಕಾದದ್ದು ಇವರ ಹೆಸರು, ಇದರ ಹಿಂದಿದ್ದ ಪ್ರಭೆ, ಇವರ ನೀತಿ ಅಲ್ಲ, ನಡವಳಿಕೆಯೂ ಅಲ್ಲ. ಕ್ರಮೇಣ ಸಯನಿಸ್ಟ್ ಚಳವಳಿಯಾದರೂ ಇತರ ರಾಷ್ಟ್ರೀಯತೆಗಳಂತೆಯೇ ಉಗ್ರಪಥಗಾಮಿಯಾಗಿ ತನ್ನ ಇರವಿಗೆ ಮಿಲಿಟರಿಯನ್ನು ಅವಲಂಬಿಸಬೇಕಾಯಿತು. ಸಹಜವಾಗಿ ಐನ್‌ಸ್ಟೈನ್ ಇದಕ್ಕೆ ತಮ್ಮ ಸಕ್ರಿಯ ಬೆಂಬಲವನ್ನು ಕೈದು ಮಾಡಿದರು.

ವ್ಯಕ್ತಿ ಸ್ವಾತಂತ್ರ್ಯ, ಸಾಮಾಜಿಕ ಸಹಕಾರ, ವಿಶ್ವವಿದ್ಯಾಲಯಗಳ ಸ್ವಾಯತ್ತತೆ ಎಲ್ಲವೂ ಅಂತಾರಾಷ್ಟ್ರೀಯ ಸ್ವಾಸ್ಥ್ಯದ — ಅಂದರೆ ಪ್ರಪಂಚಶಾಂತಿಯ — ಆವಶ್ಯಕ ಘಟಕಗಳೆಂದು ಐನ್‌ಸ್ಟೈನ್ ನಂಬಿದ್ದರು. ವಿಶ್ವವಿದ್ಯಾಲಯಗಳ ಸ್ವಾಯತ್ತತೆಯ ಬಗ್ಗೆ ಇವರಿಗೆಂಥ ತೀವ್ರ ಕಾಳಜಿ ಇತ್ತೆನ್ನುವುದಕ್ಕೆ ಒಂದು ನಿದರ್ಶನವನ್ನು ಉಲ್ಲೇಖಿಸಬಹುದು.

1918 ನವೆಂಬರ್ 9ರಂದು ಜರ್ಮನ್ ಚಕ್ರಾಧಿಪತ್ಯ ಪತನವಾಗಿ ಜರ್ಮನ್ ಗಣರಾಜ್ಯ ಅಧಿಕಾರಾರೂಢವಾಯಿತು. ಕಾರ್ಲ್ ಈಬರ್ಟ್ ಗಣರಾಜ್ಯದ ಛಾನ್ಸಲರ್ (ಪ್ರಧಾನ ಮಂತ್ರಿ). ವಾಮಪಂಥದತ್ತ ಒಲವಿದ್ದ ಮತ್ತು ಮಿಲಿಟರಿತನದ ಕಟ್ಟಾ ವಿರೋಧಿ ಆಗಿದ್ದ ಐನ್‌ಸ್ಟೈನರಿಗೆ

ಈ ಘಟನೆ ತುಂಬ ಮುದ ನೀಡಿತು. ಜರ್ಮನಿಯ ಸಕಲ ಶಾಂತಿವಾದಿಗಳಿಗೂ ಕಾಳಗನಿಲುಗಡೆ ಮತ್ತು ಗಣರಾಜ್ಯ ಸ್ಥಾಪನೆ ಹೊಂಬೆಳಗನ್ನು ಕಾರಂಜಿಸುವ ಉದ್ಘಟನೆಗಳೆನ್ನಿಸಿದುವು. ಆದರೆ ಬಲಪಂಥೀಯರಾದ ಉಗ್ರರಾಷ್ಟ್ರೀಯವಾದಿಗಳಿಗೆ ಗಣರಾಜ್ಯದ ಉದ್ಘಾಟನೆ ಖಂಡಿತ ಸಂತೋಷಪ್ರದವಾಗಲಿಲ್ಲ. ತಮ್ಮ ಸೋಲು ಸಾವಿನ ಕರ್ಮಾಂತರವದು ಎಂಬ ದುಃಖ ಕ್ರೋಧ ಮತ್ತು ದ್ವೇಷಭಾವನೆಯಿಂದ ಸದ್ಯದ ಅನಿವಾರ್ಯತೆಗೆ ಮಣಿದಿದ್ದರು ಅಷ್ಟೆ.

ಬರ್ಲಿನ್ ನಗರದಲ್ಲಿ ಕ್ರಾಂತಿಯ ಕಾಳ್ಗಿಚ್ಚು ದಟ್ಟವಾಗಿ ಹಬ್ಬಿತು. ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಆಡಳಿತ ಕಛೇರಿಯನ್ನು ಮುತ್ತಿ ರೆಕ್ಟರರನ್ನೂ ಅವರ ಸಹವರ್ತಿಗಳನ್ನೂ ಘೇರಾಯಿಸಿದರು; ರೆಕ್ಟರರನ್ನು ಪದಚ್ಯುತಗೊಳಿಸಲಾಗಿದೆಯೆಂದು ಘೋಷಿಸಿದರು. ಬಂಧನಕ್ಕೊಳಗಾದವರಿಂದ ಸಹಾಯಯಾಚನೆಯ ದೂರವಾಣಿ ಮೊರೆ ಐನ್‌ಸ್ಟೈನರಿಗೆ ಹೋಯಿತು. ಒಡನೆ ಇವರು ಇಬ್ಬರು ವಾಮಪಂಥೀಯ ಸಹೋದ್ಯೋಗಿಗಳ ಸಮೇತ ವಿದ್ಯಾರ್ಥಿ ಪರಿಷತ್ತಿಗೆ ನಡೆದು ಹೋದರು. ನೇರವಿದ್ಯಾರ್ಥಿ ಮುಖಂಡರಿಗೆ ಹೇಳಿದರು "ನೀವು ದಿಗ್ಬಂಧಿಸಿರುವ ವಿಶ್ವವಿದ್ಯಾಲಯಾಧಿಕಾರಿಗಳನ್ನು ಒಡನೆ ಬಿಡುಗಡೆ ಮಾಡಬೇಕು."

ವಿದ್ಯಾರ್ಥಿ ಮುಖಂಡ "ಗೌರವಾನ್ವಿತ ಪ್ರಾಧ್ಯಾಪಕರೆ! ವಿಶ್ವವಿದ್ಯಾಲಯದ ಕಾರ್ಯಕಲಾಪಗಳಲ್ಲಿ ವಿದ್ಯಾರ್ಥಿಗಳು ಕೈಹಾಕುವುದನ್ನು ಕುರಿತು ನಿಮ್ಮ ಮತವೇನು?"

ಐನ್‌ಸ್ಟೈನ್ ಹಲವು ನಿಮಿಷಗಳ ತನಕ ಯೋಚಿಸಿ ನುಡಿದರು "ಶಿಕ್ಷಣವಿಚಾರಗಳಲ್ಲಿ ಪೂರ್ಣ ಸ್ವಾತಂತ್ರ್ಯವೇ ಜರ್ಮನ್ ವಿಶ್ವವಿದ್ಯಾಲಯಗಳ ಹಿರಿಮೆ ಎಂದು ನಾನು ನಂಬಿದ್ದೇನೆ. ಎಂದೇ ಉಪನ್ಯಾಸಕರಿಗೆ ಅವರೇನನ್ನು ಬೋಧಿಸಬೇಕೆಂಬುದರ ಬಗ್ಗೆ ಆಗಲಿ, ವಿದ್ಯಾರ್ಥಿಗಳಿಗೆ ಅವರೇನನ್ನು ಕಲಿಯಬೇಕೆಂಬುದರ ಬಗ್ಗೆ ಆಗಲಿ ವಿಶೇಷ ನಿರ್ಬಂಧಗಳೇನೂ ವಿಧಿಸಲ್ಪಟ್ಟಿಲ್ಲ. ಹೀಗಾಗಿ ಮುಕ್ತ ಚಿಂತನೆ, ಬೋಧನೆ ಮತ್ತು ಅಧ್ಯಯನ ಇಲ್ಲಿ ಸೊಗಸಾಗಿ ಅಭಿವರ್ಧಿಸಿವೆ. ಈಗ ನೀವು ಹೇರಲಿರುವ ನಿಯಮಾವಳಿಯ ಪರಿಣಾಮವಾಗಿ ಮೊದಲು ಮರಣವಾಗುವುದು ಈ ಮುಕ್ತ ಪರಿಸರ. ಆಗ ಜ್ಞಾನವೃಕ್ಷದ ತಾಯಿಬೇರಿಗೆ ಗೆದ್ದಲು ಹಿಡಿದಂತಾಗುತ್ತದೆ. ಖಂಡಿತ ಇದು ವಿಶ್ವವಿದ್ಯಾಲಯದ ಆರೋಗ್ಯಕ್ಕೆ ಹಿತಕರವಲ್ಲ."

"ಹಾಗಾದರೆ ವಿದ್ಯಾರ್ಥಿಗಳು...."

"ವಿದ್ಯಾರ್ಥಿಗಳ ಹಸ್ತಕ್ಷೇಪ ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ಅಪಾಯಕಾರಿ. ಸಂದೇಹಾತೀತವಾಗಿ ಅನಪೇಕ್ಷಣೀಯ."

ಈ ಅನಿರೀಕ್ಷಿತ ಉತ್ತರದಿಂದ ದಂಗುಬಡಿದ ವಿದ್ಯಾರ್ಥಿ ಮುಖಂಡರು ಸಾವರಿಸಿಕೊಂಡು "ಮಾನ್ಯರೇ! ಈ ಸಮಸ್ಯೆಯ ಪರಿಹಾರ ನಮ್ಮ ಅಳವಿಗೆ ಮೀರಿದ್ದು. ದಯಮಾಡಿ ಛಾನ್ಸಲರರನ್ನೇ ನೋಡುವಿರಾ?" ಎಂಬುದಾಗಿ ನಿವೇದಿಸಿದರು.

ಸರಿ, ತ್ರಿಮೂರ್ತಿಗಳ ಕಾಲ್ನಡಿಗೆಯ ಜಂಬೂಸವಾರಿ ಗಣರಾಜ್ಯದ (ಇದು ಘೋಷಣೆಯಾಗಿ ಕೆಲವು ಗಂಟೆಗಳೂ ಸಂದಿರಲಿಲ್ಲ) ವರಿಷ್ಠರಾದ ಛಾನ್ಸಲರರ ಸಮ್ಮುಖಕ್ಕೆ ಚಿತ್ತೈಸಿತು. ಅಲ್ಲಿಯೂ ಅಷ್ಟೆ: ಹಾದಿಗುಂಟ ಎಲ್ಲ ಬೇಲಿಗಳೂ ತಂತಾವೇ ಕಳಚಿಕೊಂಡು ಇವರಿಗೆ ಛಾನ್ಸಲರ್ ದರ್ಶನ ಒಡನೆ ಲಭಿಸಿತು.

ಕಾರ್ಲ್ ಈಬರ್ಟ್ ಇವರ ಅಹವಾಲೆಯನ್ನು ಆಲಿಸಿ ಸಂಬಂಧಿಸಿದ ಅಧಿಕಾರಿಗೆ ತತ್‌ಕ್ಷಣ ಯುಕ್ತ ಅನುಜ್ಞೆ ನೀಡಿದರು. ಪರಿಣಾಮವಾಗಿ ರೆಕ್ಟರ್ ಮತ್ತು ಸಹವರ್ತಿಗಳು ದಿಗ್ಬಂಧನ ವಿಮೋಚಿತರಾದರು.

ನಲವತ್ತು ವರ್ಷಗಳ ತರುವಾಯ ಈ ಘಟನೆಯನ್ನು ಸ್ಮರಿಸುತ್ತ ಐನ್‌ಸ್ಟೈನ್ ಹೇಳಿದರು "ನಮಗೆ ಆಗ ನಲವತ್ತು ವರ್ಷ ವಯಸ್ಸಾಗಿದ್ದರೂ ನಾವೆಂಥ ಹುಂಬರಾಗಿದ್ದೆವು! ಚಕ್ರವಾತದ ಕಣ್ಣಿಗೇ ದುಮುಕಿದೆವಲ್ಲ! ಅದೊಂದು ಹುಚ್ಚು ಸಾಹಸ. ಮಾನವನಲ್ಲಿ ಬುದ್ಧಿಗಿಂತ ಪ್ರವೃತ್ತಿ ಅದೆಷ್ಟು ಬಲಿಷ್ಠವಾಗಿರುವುದೆಂಬುದರ ಅರಿವು ನಮಗೆ ಯಾರಿಗೂ ಇರಲಿಲ್ಲ."

ಪ್ರವೃತ್ತಿಯಿಂದಲೇ ಐನ್‌ಸ್ಟೈನ್ ಸ್ವಾತಂತ್ರ್ಯಪ್ರಿಯರು, ಶಾಂತಿಪ್ರಿಯರು.

1920ರಿಂದ 1933ರ ತನಕ ಐನ್‌ಸ್ಟೈನ್ ಜರ್ಮನಿಯಲ್ಲಿದ್ದು ಉನ್ನತ ವೈಜ್ಞಾನಿಕ ಚಿಂತನೆ, ಸಂಶೋಧನೆ, ಚರ್ಚೆಗಳಲ್ಲಿ ಮಗ್ನರಾಗಿರುತ್ತಿದ್ದಾಗಲೂ ಪ್ರಪಂಚಶಾಂತಿಯನ್ನು ಕುರಿತು ತುಂಬ ಮುತುವರ್ಜಿ ವಹಿಸುತ್ತಿದ್ದರು. ಪತ್ರಿಕೆಗಳಿಗೆ ಲೇಖನ ಬರೆದು ಪತ್ರಕರ್ತರಿಗೆ ಸಂದರ್ಶನ ನೀಡಿ ಮತ್ತು ಸಾರ್ವಜನಿಕ ಭಾಷಣ ಮಾಡಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸುತ್ತಿದ್ದರು. 'ಶಾಂತಿ' ಎನ್ನುವ ಹೆಸರಿನ ಒಂದು ಲೇಖನದಲ್ಲಿ ಹೀಗೆ ಬರೆದರು "ಅಂತಾರಾಷ್ಟ್ರೀಯ ಶಾಂತಿ ಗಳಿಕೆಯ ಮತ್ತು ಸ್ಥಾಪನೆಯ ಮಹತ್ತ್ವವನ್ನು ಗತಶತಮಾನಗಳ ನಿಜ ಮಹಾಪುರುಷರು ಗುರುತಿಸಿದ್ದರು. ಆದರೆ ಇಂದು ನಮ್ಮ ಕಾಲದ ತಾಂತ್ರಿಕ ಪ್ರಗತಿಗಳು ನೀತಿವಿಷಯಕವಾದ ಈ ಮೂಲಸೂತ್ರವನ್ನು ನಾಗರಿಕ ಜನತೆಗೆ ಬದುಕು ಸಾವಿನ ಪ್ರಶ್ನೆಯಾಗಿ ಪರಿವರ್ತಿಸಿವೆ, ಮತ್ತು ಮನಸ್ಸಾಕ್ಷಿ ಇರುವ ಯಾವನೇ ವ್ಯಕ್ತಿ ಶಾಂತಿಸಮಸ್ಯೆಯ ಪರಿಹಾರದಲ್ಲಿ ಸಕ್ರಿಯ ಪಾತ್ರ ವಹಿಸುವುದನ್ನು ನಿರಾಕರಿಸಲಾಗದಂಥ ಒಂದು ನೈತಿಕ ಕರ್ತವ್ಯವಾಗಿ ಮಾಡಿವೆ.

"ಶಸ್ತ್ರಾಸ್ತ್ರಗಳ ನಿರ್ಮಾಣದಲ್ಲಿ ಉದ್ಯುಕ್ತವಾಗಿರುವ ಪ್ರಬಲ ಕೈಗಾರಿಕಾ ಕೂಟಗಳು, ಅಂತಾರಾಷ್ಟ್ರೀಯ ವಿವಾದಗಳ ಶಾಂತಿಯುತ ಪರಿಹಾರ ಸಿದ್ಧಿಸದಂತೆ ಮಾಡಲು, ಸಮಸ್ತ ದೇಶಗಳಲ್ಲಿಯೂ ತೀವ್ರ ಕಾರ್ಯಮಗ್ನವಾಗಿವೆ ಎಂಬುದನ್ನು ನಾವು ಅರಿತಿರಬೇಕು. ಇಂಥ ಸನ್ನಿವೇಶದಲ್ಲಿ ಆಳುವ ಪ್ರಭುಗಳಿಗೆ ತಮ್ಮ ಬಹುಸಂಖ್ಯಾತ ಪ್ರಜೆಗಳು ತಮ್ಮನ್ನು ಉತ್ಸಾಹದಿಂದ ಬೆಂಬಲಿಸುತ್ತಿರುವರೆಂಬ ಭರವಸೆ ಮೂಡಿದಾಗ ಮಾತ್ರ, ಅವರು ಶಾಂತಿಯ ಈ ಪರಮ ಗುರಿಯನ್ನು ಸಾಧಿಸಿಯಾರು, ಅಷ್ಟೆ. ಪ್ರಜಾಪ್ರಭುತ್ವಾತ್ಮಕ ಸರ್ಕಾರಗಳಿರುವ ಈ ದಿನಗಳಂದು ರಾಷ್ಟ್ರಗಳ ಅದೃಷ್ಟ ಸಾಕ್ಷಾತ್ ಜನಗಳನ್ನೇ ಅವಲಂಬಿಸಿ ನಿಂತಿದೆ. ಪ್ರತಿಯೊಬ್ಬ ವ್ಯಕ್ತಿಯೂ ಇದನ್ನು ತಿಳಿಯುವುದು ಅಗತ್ಯ".

ಈ ನೈತಿಕ ಕರ್ತವ್ಯವನ್ನು ಇವರು ಎರಡು ತೆರನಾಗಿ ನಿರ್ವಹಿಸಿದರು.

ಒಂದು, ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತ ನಿಶ್ಶಸ್ತ್ರೀಕರಣದ ಆವಶ್ಯಕತೆಯನ್ನು ಮತ್ತೆ ಮತ್ತೆ ಒತ್ತಿ ಹೇಳಿದರು. ರಾಷ್ಟ್ರ ತನ್ನ ಪ್ರಜೆಗಳ ಮೇಲೆ ಕಡ್ಡಾಯ ಸೇನಾ ಶಿಕ್ಷಣ ಇಲ್ಲವೇ ಸೇವೆ ಹೇರುವುದನ್ನು ಕಟುವಾಗಿ ವಿರೋಧಿಸಿದರು. "ರಾಷ್ಟ್ರ ವ್ಯಕ್ತಿಗಾಗಿ ನಿರ್ಮಿತವಾದದ್ದೇ ವಿನಾ ವ್ಯಕ್ತಿ ರಾಷ್ಟ್ರಕ್ಕಾಗಿ ಅಲ್ಲ. ಅಂದರೆ ರಾಷ್ಟ್ರ ನಮ್ಮ ಸೇವಕ ಆಗಿರತಕ್ಕದ್ದು, ನಾವು ಅದರ ಗುಲಾಮರಾಗಿರುವುದಲ್ಲ. ಸೇನಾಶಿಕ್ಷಣ ಮತ್ತು ಯುದ್ಧಕ್ರಿಯೆ ಇವುಗಳಲ್ಲಿ ಭಾಗ ವಹಿಸುವಂತೆ ರಾಷ್ಟ್ರ ನಮ್ಮನ್ನು ಬಲಾತ್ಕಾರವಾಗಿ ಒತ್ತಾಯಿಸಿದಾಗ ಅದು ಈ ಮೇಲಿನ ಕಟ್ಟಳೆಯನ್ನು – ನೀತಿಸಂಹಿತೆಯನ್ನು – ಅತಿಕ್ರಮಿಸಿರುತ್ತದೆ. ಈ ಗುಲಾಮತನದ ಗೇಯ್ಮೆಯ ಉದ್ದೇಶ ಮತ್ತು ಪರಿಣಾಮ ಏನು? ಇತರ ದೇಶಗಳ ಜನರನ್ನು ಕೊಲ್ಲುವುದು ಇಲ್ಲವೇ ಅವರ ಅಭಿವರ್ಧನಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪಿಸುವುದು. ಎಂದೇ ಇದು ಅತಿ ಅಸಹ್ಯವಾದದ್ದು." ಸೇನಾ ಬಲಗಳ ಹುಚ್ಚುಕುದುರೆಯ ಬೆನ್ನೇರಿ ಅಧಿಕಾಧಿಕ ಅಧಿಕಾರವನ್ನು ಅರಸುತ್ತ ದೌಡಾಯಿಸುವ ರಾಷ್ಟ್ರಗಳ ಸರ್ವಾಧಿಕಾರಕ್ಕೆ ಕಡಿವಾಣ ತೊಡಿಸಿ ಲಗಾಮು ಜಗ್ಗಿ ಅದನ್ನು ಹತೋಟಿಗೆ ತಂದ ಹೊರತು ವ್ಯಕ್ತಿಗೆ ಸುಖ ದೊರೆಯದು, ಪ್ರಪಂಚಕ್ಕೆ ಶಾಂತಿ ಒದಗದು ಎಂದು ಪದೇ ಪದೇ

ಹೇಳುತ್ತಿದ್ದರು. ಇನ್ನೊಮ್ಮೆ ಹೇಳಿದರು "ನಮ್ಮ ಕಾಲದ ಅತ್ಯಂತ ಮಹಿಮಾನ್ವಿತ ರಾಜಕಾರಣಿ ಗಾಂಧಿ ಹಾದಿ ಸೂಚಿಸಿದ್ದಾರೆ. ಒಮ್ಮೆ ಸರಿದಾರಿ ಕಂಡುಕೊಂಡದ್ದಾದರೆ ಜನ ಎಂಥ ಬಲಿದಾನಗಳಿಗೂ ಹೇಗೆ ಸಿದ್ಧರಿರುತ್ತಾರೆ ಎನ್ನುವುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಭಾರತದ ದಾಸ್ಯ ವಿಮೋಚನೆಗಾಗಿ ಅವರು ಪಟ್ಟ ಶ್ರಮ, ಹೇಗೆ ದೃಢಸಂಕಲ್ಪಯುತ ಮನ, ತೋರ್ಕೆಗೆ ಅಭೇದ್ಯವೆಂದು ಭಾಸವಾಗುವ ಲೌಕಿಕ ಸಾಮರ್ಥ್ಯಕ್ಕಿಂತ ಪ್ರಬಲತರವಾದದ್ದು ಎಂಬುದಕ್ಕೆ ಜೀವಂತ ಸಾಕ್ಷಿ."

ಎರಡು, ಜರ್ಮನಿಯಲ್ಲಿ ನಾಟ್ಸೀ ಹಂತಕರು ತಮ್ಮ ನಿರಂಕುಶ ಪ್ರಭು ಅಡಾಲ್ಫ್ ಹಿಟ್ಲರನ ಹಿರಿತನದಲ್ಲಿ, ಸ್ಪಷ್ಟ ಮತ್ತು ಪ್ರಕಟಿತ ಯೆಹೂದ್ಯಜನಾಂಗದ್ವೇಷದ ಹೊಯಿಲಿನಲ್ಲಿ ತೇಲಿ ಅಧಿಕಾರವನ್ನು ಕಬಳಿಸಿದಾಗ, ಜನವರಿ 1933, ಐನ್‌ಸ್ಟೈನ್ ಭವಿಷ್ಯದ ದುರಂತ ದೃಶ್ಯಗಳನ್ನು ಪ್ರವಾದಿಯ ಖಚಿತತೆಯಿಂದ ಕಂಡುಕೊಂಡರು. ಆ ವೇಳೆ ಅಮೆರಿಕದಲ್ಲಿದ್ದ ಇವರು ಇನ್ನು ತಾನು ಜರ್ಮನಿಗೆ ಹಿಂತಿರುಗಿ ಮಾರಣ ಹೋಮಕ್ಕೆ ನೇರ ಆಹುತಿ ಆಗುವುದಕ್ಕಿಂತ ಹೊರಗೆ ಉಳಿದದ್ದು ತನಗೆ ಸಾಧ್ಯವಾಗುವ ರಚನಾತ್ಮಕ ಕ್ರಿಯೆಗಳಲ್ಲಿ ಭಾಗವಹಿಸುವುದೇ ಶ್ರೇಯಸ್ಕರವೆಂದು ಭಾವಿಸಿದರು.

ಪ್ರಶ್ಯನ್ ವಿಜ್ಞಾನ ಅಕ್ಯಾಡೆಮಿಯ ಸದಸ್ಯತ್ವಕ್ಕೆ ತಮ್ಮ ರಾಜಿನಾಮೆ ಕಾಗದವನ್ನು ಅಂಚೆ ಮೂಲಕ ರವಾನಿಸಿದರು. ಇನ್ನು ಮುಂದೆ ತಾವು ಜರ್ಮನಿ ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದು ಸಾಧ್ಯವಾಗದೆಂದು ಕಾರಣ ನೀಡಿದರು. ಆಸ್ತಿ, ಪಾಸ್ತಿ, ಸ್ಥಾನ, ಆತ್ಮೀಯ ವಿಜ್ಞಾನಿ ಮಿತ್ರರೊಡನೆ ಸಂಪರ್ಕಸೌಕರ್ಯ, ತಾವು ಮೆಚ್ಚಿದ್ದ ಹಿತಕರ ಪರಿಸರ ಹೀಗೆ ತಮಗೆ ಪ್ರಿಯವಾದ ಸಮಸ್ತ ಪರಿಕರಗಳನ್ನೂ ಆ ಕ್ಷಣ ನಿರಾಲೋಚನೆಯಿಂದ ಕಳಚಿ ಬಿಸುಟರು, ಮಾನ ಉಳಿಸಿಕೊಂಡರು — ಜೀವ ಉಳಿಸಲು ಕುಷ್ಠರೋಗಗ್ರಸ್ತ ಅಂಗವನ್ನು ಕತ್ತರಿಸಿ ಹಾಕುವಂತೆ. ಪ್ರಪಂಚಶಾಂತಿಗೆ ಪಿಡುಗಾಗಿದ್ದ ನಾಟ್ಸೀ ಜರ್ಮನಿಯ ವಾಸ್ತವ್ಯ ಇವರಿಗೆ ಜುಗುಪ್ಸೆಕಾರಕವಾಗಿತ್ತು.

ಅಕ್ಯಾಡೆಮಿ ಸುಮ್ಮನೆ ನುಂಗೀತೇ ಈ ಕಟುಕರೋಹಿಣಿಯನ್ನು ? ತನ್ನ ಅಂತಾರಾಷ್ಟ್ರೀಯ ಖ್ಯಾತಿ, ಅಂತಸ್ತು, ವರ್ಚಸ್ಸುಗಳಿಗೆ ಕಾರಣರಾಗಿದ್ದ ಆ ಐನ್‌ಸ್ಟೈನರ ಎದುರೇ ರೇಗಿ ಎಗರಿ ಬಿದ್ದಿತು. ಜರ್ಮನಿಯ ವೈರಿಗಳು ವಿದೇಶಗಳಲ್ಲಿ ಸಾರ್ವಜನಿಕವಾಗಿ ಅಪಪ್ರಚಾರ ಮಾಡಿ ಈ ದೇಶದ ಹೆಸರನ್ನು ಕೆಡಿಸುತ್ತಿರುವಾಗ ಐನ್‌ಸ್ಟೈನ್ ಒಂದು ಒಳ್ಳೆಯ ಮಾತು ಹೇಳಿದ್ದರೆ ಇವರಿಗೆ ಅನ್ನವಿಕ್ಕಿದ್ದ ದೇಶಕ್ಕೆ ಎಷ್ಟು ಉಪಕಾರವಾಗುತ್ತಿತ್ತು ; ತದ್ವಿರುದ್ಧವಾಗಿ ಇವರು ಕೂಡ ವೈರಿಗಳ ಬಣ ಸೇರಿ ಜರ್ಮನಿಗೆ ದ್ರೋಹ ಬಗೆದಿದ್ದಾರೆ ಎಂಬುದಾಗಿ ಆರೋಪಿಸಿತು.

ಈ ಮಿಥ್ಯಾರೋಪವನ್ನು — ಅಥವಾ ಸತ್ಯವನ್ನು ತಿರುಚುವ ಪಾಪವನ್ನು — ಐನ್‌ಸ್ಟೈನ್ ನಿರಾಕರಿಸಿದರು "ನಾನು ಜರ್ಮನ್ ಜನತೆಯ ಬಗೆಗೆ ಒಂದು ಒಳ್ಳೆಯ ಮಾತು ಆಡಿದ್ದರೆ ಅದು ವಿದೇಶಗಳಲ್ಲಿ ಮಹತ್ಪರಿಣಾಮಕಾರಿ ಆಗುತ್ತಿತ್ತೆಂದು ನೀವು ಬರೆದಿದ್ದೀರಿ. ನೀವು ಸೂಚಿಸಿದಂಥ ಆ ಸಾಕ್ಷ್ಯ ನನ್ನ ಜೀವಮಾನ ಪರ್ಯಂತ ನಾನು ಎತ್ತಿ ಹಿಡಿದುಕೊಂಡು ಬಂದಿರುವ ನ್ಯಾಯದ ಹಾಗೂ ಸ್ವಾತಂತ್ರ್ಯದ ಎಲ್ಲ ಮೌಲ್ಯಗಳ ನೇರ ನಿರಾಕರಣೆಗೆ ಸಮಾನವಾಗುತ್ತಿತ್ತು. ಅಂಥ ಸಾಕ್ಷ್ಯ ನಿಮ್ಮ ಪ್ರಕಾರ ಜರ್ಮನ್ ಜನಾಂಗಕ್ಕೆ ಶುಭವೆಸಗುತ್ತಿತ್ತು. ಇದು ತಪ್ಪು, ಬದಲು, ಜರ್ಮನ್ ಜನಾಂಗಕ್ಕೆ ನಾಗರಿಕ ಪ್ರಪಂಚದಲ್ಲಿ ಗೌರವಾನ್ವಿತ ಸ್ಥಾನವನ್ನು ಗೆದ್ದುಕೊಟ್ಟಿರುವ ಭಾವನೆಗಳನ್ನೂ ತತ್ತ್ವಗಳನ್ನೂ ಹತ್ತಿಕ್ಕಲು ಕಾತರರಾಗಿರುವವರ ಉದ್ದೇಶಸಾಫಲ್ಯಕ್ಕೆ ಮಾತ್ರ ಆ ಸಾಕ್ಷ್ಯ ಸಹಾಯಕವಾಗುತ್ತಿತ್ತು. ವರ್ತಮಾನ ಸನ್ನಿವೇಶಗಳಲ್ಲಿ ಅಂಥ ಸಾಕ್ಷ್ಯವನ್ನು ನೀಡಿದು

ದಾಗಿದ್ದರೆ ಆಗ ನಾನು ಪರೋಕ್ಷವಾಗಿಯಾದರೂ ಒಳ್ಳೆಯ ನಡವಳಿಕೆಗಳ ಪಾಶವೀಕರಣಕ್ಕೂ ಪ್ರಚಲಿತ ಸಾಂಸ್ಕೃತಿಕ ಮೌಲ್ಯವೆಲ್ಲವುಗಳ ನಾಶಕ್ಕೂ ಕಾರಣಕರ್ತನಾಗುತ್ತಿದ್ದೆ."

ಅಮೆರಿಕದಿಂದ ಹಿಂತಿರುಗಿದ ಬಳಿಕ ಐನ್‌ಸ್ಟೈನ್ ಸ್ವಲ್ಪಕಾಲ ಜರ್ಮನಿಯ ನೆರೆಯ ಬೆಲ್ಜಿಯಮ್ಮಿನಲ್ಲಿ ತಂಗಿದ್ದರು. ಇವರು ಜರ್ಮನಿಗೆ ವಾಪಸಾಗುತ್ತಿಲ್ಲವೆಂಬ ಸುದ್ದಿಯನ್ನು ನಾಟ್ಸೀಗಳು ಸಂತೋಷದಿಂದ ಸ್ವಾಗತಿಸಿದರು ಆದರೆ ಈ ಮಹಾಪುರುಷ ಬದುಕಿರುವುದು ಕೂಡ ಅವರಿಗೆ ಸಹ್ಯವಿರಲಿಲ್ಲ. ಐನ್‌ಸ್ಟೈನ್‌ವಾಣಿಯನ್ನು ಸ್ತಬ್ಧಗೊಳಿಸುವವರಿಗೆ ಸಾವಿರ ಪೌಂಡುಗಳ ಬಹುಮಾನವನ್ನು ನಾಟ್ಸೀ ಸರ್ಕಾರ ಘೋಷಿಸಿತು. ಈ ಅವೀಷದ ಸುದ್ದಿ ತಿಳಿದಾಗ ಇವರು ನಕ್ಕು ನುಡಿದರು "ಅದು ನನ್ನ ತಲೆಗೆ ದುಬಾರಿ ಬೆಲೆ !"

ತಲೆಯ ಮೇಲೆ ಈ ಹಿರಿಮೊತ್ತದ ಬೆಲೆ ಹೊತ್ತ ಇವರ ಜೀವನ ಯೂರೊಪಿನ ಯಾವುದೇ ರಾಷ್ಟ್ರದಲ್ಲಿಯೂ ಸುಭದ್ರವಾಗಿರುತ್ತಿರಲಿಲ್ಲವಾಗಿ ಇವರು ಆ ಖಂಡವನ್ನೇ ತೊರೆದು, ಮತ್ತೆಂದೂ ಹಿಂದೆ ಬರದಂತೆ, ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ವಲಸೆ ಹೋದರು. ಪ್ರಿನ್ಸ್‌ಟನ್ನಿನ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡಿಯನ್ನು ಆಹ್ವಾನಿತ ಪರಮೋಚ್ಚ ಪ್ರಾಧ್ಯಾಪಕರಾಗಿ ಸೇರಿಕೊಂಡರು (ಅಕ್ಟೋಬರ್ 1933).

ಐನ್‌ಸ್ಟೈನರ ಈ ವರ್ತನೆಯಲ್ಲಿ ಒಂದು ತೆರನಾದ ಅಸಾಂಗತ್ಯವನ್ನು—ಅಂದರೆ ಹೇಳುವುದು ಒಂದು ಮಾಡುವುದು ಇನ್ನೊಂದು ಎಂಬ ವಿರೋಧಾಭಾಸವನ್ನು – ಗುರುತಿಸಿದ ಒಬ್ಬ ವ್ಯಕ್ತಿ 1954ರಲ್ಲಿ ಇವರಿಗೊಂದು ಕಾಗದ ಬರೆದ. ವಾಕ್‌ಸ್ವಾತಂತ್ರ್ಯವನ್ನು ಕಾಪಾಡಲು ಮತ್ತು ಯುದ್ಧವನ್ನು ವಿರೋಧಿಸಲು, ಅವಶ್ಯವಾದರೆ, ಜನ ಬಂದೀಖಾನೆಗಳಿಗೆ ಹೋಗಲು ಕೂಡ ಸಿದ್ಧರಿರಬೇಕು, ವ್ಯವಸ್ಥೆಯ ಒಳಗಿದ್ದು ಅದನ್ನು ಅಸಹಕಾರ ಮಾರ್ಗದಿಂದ ಸರಿಪಡಿಸಲು ಪ್ರಯತ್ನಿಸಬೇಕು ಎಂದು ಮುಂತಾಗಿ ಬೋಧಿಸಿದ ಐನ್‌ಸ್ಟೈನ್, ನಾಟ್ಸಿಗಳು ಜರ್ಮನಿಯಲ್ಲಿ ಅಧಿಕಾರಾರೂಢರಾಗುತ್ತಿದ್ದಂತೆ ಒಂದು ಕ್ಷಣವನ್ನೂ ಅಪವ್ಯಯಗೊಳಿಸದೆ ಪರದೇಶಕ್ಕೆ ಓಡಿಹೋದದ್ದು ಖಂಡಿತ ತಪ್ಪು, ಇವರು ಜರ್ಮನಿಯಲ್ಲೇ ಉಳಿದಿದ್ದು ಯೆಹೂದ್ಯರ ಮತ್ತು ಇತರ ಶೋಷಿತರ ರಕ್ಷಣೆಯ ಹೊಣೆಗಾರಿಕೆಯನ್ನು ವಹಿಸಿಕೊಳ್ಳಬೇಕಾಗಿತ್ತು, ಇವರ ವರ್ಚಸ್ಸಿನ ಪ್ರಭಾವದಿಂದ ಆ ಹತಭಾಗ್ಯರಿಗೆ ಹೆಚ್ಚಿನ ಸಾಂತ್ವನ ಒದಗಬಹುದಾಗಿತ್ತು ; ಇಂಥದೇ ಒಂದು ಸಂದರ್ಭ ಕ್ರಿಸ್ತಪೂರ್ವ ದಿನಗಳಂದು ಗ್ರೀಸಿನಲ್ಲಿ ತಲೆದೋರಿದಾಗ ಸಾಕ್ರೆಟೀಸ್ ಅಥೆನ್ಸಿನಲ್ಲೇ ಉಳಿದಿದ್ದು ಅಸತ್ಯದ ಅನ್ಯಾಯದ ಮತ್ತು ಅತಿರೇಕದ ಎದುರು ಹೋರಾಡಿ ಅಸುನೀಗಿದ–ಎಂಬುದಾಗಿ ಈ ಪತ್ರಕರ್ತ ವಾದ ಮುಂಡಿಸಿದ್ದ.

ಈ 'ಆರೋಪಣೆ'ಗೆ ಐನ್‌ಸ್ಟೈನ್ ಉತ್ತರ ಬರೆದರು "ಸ್ವಲ್ಪ ಜನಪ್ರಿಯತೆ ಗಳಿಸಿರುವ ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ ಅಜ್ಞಾತನಾಗಿರುವ ಒಬ್ಬಾತನಿಗಿಂತ ಕಡಿಮೆ ಅಪಾಯದ ಸನ್ನಿವೇಶದಲ್ಲಿರುತ್ತಾನೆ ಎನ್ನುವುದು ನಿಜ. ಆದರೆ ಇಂಥ ವ್ಯಕ್ತಿ ಆಗಿಂದಾಗ್ಯೆ ತನಗೆ ಅವಶ್ಯವೆಂದು ತೋರಿದಾಗಲೆಲ್ಲ ಸಾರ್ವಜನಿಕವಾಗಿ ಮಾತಾಡಿ ತನ್ನ ನಾಮದ ಬಲವನ್ನು ಉಪಯೋಗಿಸಿಕೊಳ್ಳುವುದಕ್ಕಿಂತ ಹೆಚ್ಚಿಗೆ ಬೇರೇನನ್ನು ತಾನೇ ಮಾಡಬಲ್ಲ? ಸಾಕ್ರೆಟೀಸನ ಜೊತೆಯ ಹೋಲಿಕೆ ಪ್ರಸಕ್ತ ಸನ್ನಿವೇಶದಲ್ಲಿ ಸಮರ್ಪಕವಲ್ಲ. ಆತನಿಗೆ ಪ್ರಪಂಚವೆಂದರೆ ಅಥೆನ್ಸ್ ನಗರವಾಗಿತ್ತು. ನಾನಾದರೋ ಯಾವುದೇ ನಿರ್ದಿಷ್ಟ ರಾಷ್ಟ್ರದೊಡನೆ ನನ್ನನ್ನು ಸಮೀಕರಿಸಿಕೊಳ್ಳಲಿಲ್ಲ. ಅದೂ ಜರ್ಮನಿ ರಾಷ್ಟ್ರದೊಡನೆ, ಜರ್ಮನ್ ಭಾಷೆಯನ್ನು ನಾನು ಎಳೆ ಅಣುಗನಾಗಿ ಕಲಿತೆನಾದರೂ ಪ್ರಶ್ಯನ್ ವಿಜ್ಞಾನ ಅಕ್ಯಾಡಮಿಯೊಡನೆ ನಿಕಟಸಂಬಂಧ ಹೊಂದಿದ್ದೆನಾದರೂ, ನಾನೆಂದೂ ಸಹಮತನಾಗಲಿಲ್ಲ."

ಹಿಟ್ಲರ್ ಶಾಹಿಯ ಉಚ್ಛ್ರಾಯಪರ್ವದ ಆ ದಿನಗಳೆಂದು ಜರ್ಮನಿಯಲ್ಲಿ ಯೆಹೂದ್ಯರ ಬೇಟೆ ಹಾಗೂ ಕೊಲೆ ಸಾಮೂಹಿಕ ದೃಶ್ಯಗಳಾದುವು. ಲಕ್ಷಲಕ್ಷ ಮಂದಿ, ಕಾಳ್ಗಿಚ್ಚಿಗೆ ಸವಿತ್ತಾಗುವ ಜೀರ್ಣಪರ್ಣಗಳಂತೆ, ಅನಿಲಕೋಷ್ಠದ ಅಗ್ನಿಗೆ ಉರುವಲಾದರೆ, ಸಾವಿರ ಸಾವಿರ ಮಂದಿ ಜೀವ ಉಳಿಸಿಕೊಂಡು ನೆರೆನಾಡುಗಳಿಗೆ ಕಾಲ್ಕಿತ್ತರು. ಇಂಥವರ ಹೊನಲು ಅಮೆರಿಕಕ್ಕೂ ಹರಿಯಿತು. ಈ ನಿರಾಶ್ರಿತ ನಿರ್ಭಾಗ್ಯರ ಪುನರ್ವಸತೀಕರಣಕ್ಕಾಗಿ ಐನ್‌ಸ್ಟೈನ್ ತಮ್ಮ ವ್ಯಕ್ತಿತ್ವವನ್ನೇ ಧಾರೆ ಎರೆದರು.

ಇಷ್ಟಾಗುವಾಗ 1939 ಮೂಡಿತು. ಬರಲಿದ್ದ ಯುದ್ಧದ ದಟ್ಟ ಮೂರಿಯಿಂದ ಯೂರೋಪ್ ಖಿಂತ ನಾರತೊಡಗಿತು. ಅದೇ ವೇಳೆ, ಪರಮಾಣುವಿನಿಂದ ಅಗಾಧ ಶಕ್ತಿಯನ್ನು ಬಸಿಯುವ ಜಟಿಲ ತಂತ್ರ ಜರ್ಮನ್ ವಿಜ್ಞಾನಿಗಳಿಗೆ ಸಿದ್ಧಿಸಿದೆ ಎಂಬ ಕಠೋರ ವಾರ್ತೆ ಮಿತ್ರರಾಷ್ಟ್ರಗಳ ವಿಜ್ಞಾನಿಗಳ ಮೇಲೆ ಬರಸಿಡಿಲಿನಂತೆ ಬಡಿದೆರಗಿತು. ಇದರ ಅರ್ಥ ಸ್ಪಷ್ಟ: ಸನ್ನಿಕಟ ಭವಿಷ್ಯದಲ್ಲೇ ಪರಮಾಣು ಬಾಂಬ್ ಹಿಟ್ಲರನ ಬತ್ತಳಿಕೆ ಸೇರುತ್ತದೆ, ಅಲ್ಲಿಗೆ ಪ್ರಪಂಚವಿಡೀ ಆ ಅಸುರನ ತೊತ್ತಾಗುತ್ತದೆ. ಮುಸಲೀನಿಯ ಇಟಲಿಯಿಂದ ಮತ್ತು ಹಿಟ್ಲರನ ಜರ್ಮನಿಯಿಂದ ನಿಷ್ಕ್ರಮಿಸಿ ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ತಲಪಿ ಅಲ್ಲಿ ನೆಲಸಿದ್ದ ಪರಮಾಣುವಿಜ್ಞಾನಿಗಳು ಒಟ್ಟುಗೂಡಿ ಒಡನೆ ಅಮೆರಿಕ ಸರ್ಕಾರವನ್ನು ಎಚ್ಚರಿಸಬೇಕೆಂದು ನಿರ್ಧರಿಸಿದರು. ಹಿಟ್ಲರ್ ಬಾಂಬನ್ನು ತಯಾರಿಸುವುದಕ್ಕಿಂತ ಮೊದಲೇ ಅಮೆರಿಕ ಅದನ್ನು ತಯಾರಿಸಿ ಅವನನ್ನು ಸೋಲಿಸುವಂತಾಗಬೇಕೆಂಬುದು ಇವರ ಉದ್ದೇಶ. ಆದರೆ ಸರ್ಕಾರದ ಬೃಹತ್ ಜಡಯಂತ್ರಕ್ಕೆ ಸನ್ನಿವೇಶದ ತೀವ್ರತೆಯ ಚುರುಕನ್ನು ಚಟಕಿಸುವುದು ಹೇಗೆ, ಯಾರು? ಐನ್‌ಸ್ಟೈನರ ವಿಶ್ವವರ್ಚಸ್ಸನ್ನೂ ಪರಮ ಶಾಂತಿಪ್ರಿಯತೆಯನ್ನೂ ತಮ್ಮ ಬಂಡವಾಳವಾಗಿ ಬಳಸಿಕೊಳ್ಳಲು ಆಶಿಸಿದ ಈ ಸದುದ್ದೇಶಪೂರಿತ ವಿಜ್ಞಾನಿಗಳು ಪಾವನ ಏಕಾಂತತೆಯಲ್ಲಿದ್ದ ಅವರನ್ನು ಪತ್ತೆಹಚ್ಚಿ ಭೇಟಿಮಾಡಿ ಪೂರ್ಣ ಪರಿಸ್ಥಿತಿಯನ್ನು ವಿವರಿಸಿದರು.

ವ್ಯಕ್ತಿಸ್ವಾತಂತ್ರ್ಯ, ನಿಶ್ಶಸ್ತ್ರೀಕರಣ, ಪ್ರಪಂಚಶಾಂತಿ, ಸುಸಂಸ್ಕೃತ ಜೀವನ ಮುಂತಾದವು ಜಾಳಿಸುಸಿರಾಗಿದ್ದ ಐನ್‌ಸ್ಟೈನರ ಮುಂದೆ ವಿಧಿ, ಅಥವಾ ಇವರ ಮಾತಿನಲ್ಲೇ ಹೇಳುವುದಾದರೆ ಎಂದೂ ದಾಳ ಹೂಡದ ಭಗವಂತ God does not throw dice ಅತ್ಯಂತ ಕಠಿಣ ಪರೀಕ್ಷೆಯನ್ನೆಸೆಯಿತು: ಪರಮಾಣು ಶಕ್ತಿಯ ರಹಸ್ಯವನ್ನು. 1905ರಲ್ಲಿ, $E = mc^2$ ಎನ್ನುವ ಸರಳ ಸುಂದರ ಸಮೀಕರಣದಲ್ಲಿ ಕುಂಚಿಸಿದ ಈ ಊಹನಾಚತುರ ಈಗ ಅದರ ಪ್ರಾಯೋಗಿಕ ಸಾಫಲ್ಯ ಪ್ರತ್ಯಕ್ಷವಾಗಿರುವಾಗ ಮೌನ ತಳೆದು, ತನ್ನ ಕಣ್ಣೆದುರೇ ಪ್ರಪಂಚಶಾಂತಿ ನಾಶವಾಗುವುದನ್ನು ನೋಡುತ್ತಿರಬೇಕೇ? ಇಲ್ಲ, ತನ್ನ ವ್ಯಕ್ತಿತ್ವದ ಪ್ರತಿಷ್ಠೆಯನ್ನು ಪಣವೊಡ್ಡಿ, ಪರಿಸ್ಥಿತಿಯ ಗಭೀರತೆಯನ್ನು ರಾಷ್ಟ್ರಾಧ್ಯಕ್ಷರಿಗೆ ಮನವರಿಕೆ ಮಾಡುವ ಸಲಹೆ ನೀಡಿ ಪ್ರಪಂಚ ಶಾಂತಿ ಸ್ಥಾಪನೆಗೆ ನೆರವಾಗಬೇಕೇ? ಮೂರನೆಯ ಪರ್ಯಾಯಮಾರ್ಗ ಆಗ ಇವರೆದುರು ಇರಲಿಲ್ಲ. ಇವರು ಎರಡನೆಯ ಹಾದಿ ಹಿಡಿದರು ಮತ್ತು 1939 ಆಗಸ್ಟ್ 2ರಂದು ಅಧ್ಯಕ್ಷ ರೂಸ್ವೆಲ್ಟರಿಗೆ ಕಾಗದ ಬರೆದರು "ಇ ಫರ್ಮಿ ಮತ್ತು ಎಲ್. ಝೀಲಾರ್ಡ್ ಇವರ ಸಂಶೋಧನೆಯ ಹಸ್ತಪ್ರತಿಯನ್ನು ನನಗೆ ಒಪ್ಪಿಸಲಾಗಿದೆ. ಇದರ ಪ್ರಕಾರ ಸನ್ನಿಕಟ ಭವಿಷ್ಯದಲ್ಲೇ ಯುರೇನಿಯಮ್ ಧಾತುವನ್ನು ಶಕ್ತಿಯ ನೂತನ ಮತ್ತು ಪ್ರಮುಖ ಆಕರವಾಗಿ ಮಾರ್ಪಡಿಸುವುದು ಕೈಗೂಡೀತೆಂದು ನಿರೀಕ್ಷಿಸಬಹುದಾಗಿದೆ. ಈ ಸನ್ನಿವೇಶದ ಕೆಲವೊಂದು ಮುಖಗಳನ್ನು ಜಾಗರೂಕತೆಯಿಂದ ಪರಿಶೀಲಿಸುವುದೂ, ಮತ್ತು ಅವಶ್ಯವೆಂದು ತೋರಿದರೆ, ಈ ದಿಶೆಯಲ್ಲಿ ಆಡಳಿತವಿಭಾಗ ಒಡನೆ ಕಾರ್ಯೋದ್ಯುಕ್ತವಾಗುವುದೂ ಅಗತ್ಯವೆಂದು ಅನ್ನಿಸುತ್ತದೆ."

ಪರಮಾಣುಶಕ್ತಿ ಉತ್ಪಾದನೆಯ ಸಾಧ್ಯತೆಗಳನ್ನು ಅಮೆರಿಕ ಒಡನೆ ಗಮನಿಸಬೇಕೆಂದು ಈ ಪತ್ರದಲ್ಲಿ ನಿವೇದಿಸಿದ್ದರೇ ವಿನಾ ಪರಮಾಣುಬಾಂಬನ್ನು ತಯಾರಿಸಬೇಕೆಂದೇನೂ ಸೂಚಿಸಿರಲಿಲ್ಲ. ಆದರೆ ರಾಜಕಾರಣಿಗಳ ಕೋಠಿ ಸೇರಿದ ವಿಜ್ಞಾನ ಮುಂದೆ ಹಿಡಿದ ಜಾಡೇ ಬೇರೆ: ಅಮೆರಿಕ ತಯಾರಿಸಿದ ಪರಮಾಣು ಬಾಂಬುಗಳು ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿ ನಗರಗಳನ್ನು 1945 ಆಗಸ್ಟ್ 6 ಮತ್ತು 9ರಂದು ಧ್ವಂಸ ಮಾಡಿದುವು. ಆ ವಿನಾಶಯುಗ ಪ್ರವರ್ತಕ ಪತ್ರಕ್ಕೆ ತಾನು ರುಜುವಿಕ್ಕಿದ್ದು ತನ್ನ ಬಾಳಿನ ಬಲು ದೊಡ್ಡ ತಪ್ಪೆಂದು ಐನ್‌ಸ್ಟೈನ್ ಕೊನೆತನಕವೂ ಪರಿತಪಿಸುತ್ತಿದ್ದರು.

ಪರಮಾಲ್ಪ ಗಾತ್ರದಾ ಪರಮಾಣು ಭೇದನೆ
ಮಾನವ ಜನಾಂಗದಾ ತೀವ್ರಪ್ರಲೋಭನೆ
ಪರಮಾಣು ಮನದಿ ಸ್ಪಂದಿಸಿದೆ ಸಂವೇದನೆ
ಮರಳಿಸಲು ಬರುತಿಹುದು ದಿನದಿನಂ ಗುರುವಂದನೆ

ಸರಿ, ಪರಮಾಣುಬಾಂಬ್ (ವ್ಯಾಪಕವಾಗಿ, ನ್ಯೂಕ್ಲಿಯರ್ ಬಾಂಬ್) ವಾಸ್ತವ ಘಟನೆ ಆಯಿತು. ದುರದೃಷ್ಟ. ಮುಂದೇನು ಮಾಡಬೇಕು? ನ್ಯೂಕ್ಲಿಯರ್ ಬಾಂಬುಗಳ ತಯಾರಿಕೆಯನ್ನು ರದ್ದುಗೊಳಿಸಬೇಕೆಂದು ಐನ್‌ಸ್ಟೈನ್ ಹಿರಿರಾಷ್ಟ್ರಗಳಿಗೆ ಮನವಿ ಸಲ್ಲಿಸಿದರು. ಆದರೆ ಸರ್ಕಾರಗಳು ಮಾತ್ರ ತಮ್ಮ ತಮ್ಮ ಹಾದಿಗಳಲ್ಲೇ ಸಾಗುತ್ತಿದ್ದುವು – ಪ್ರಬಲ, ಪ್ರಬಲತರ, ಪ್ರಬಲತಮ ನ್ಯೂಕ್ಲಿಯರ್ ಅಸ್ತ್ರಗಳ ನಿರ್ಮಾಣದಲ್ಲಿ ಬಲಿಷ್ಠ ರಾಷ್ಟ್ರಗಳ ನಡುವೆ ಪೈಪೋಟಿ ಎದ್ದಿತ್ತು. ಆಗ, ಅಂದರೆ 1954 ಉರುಳುತ್ತಿದ್ದಾಗ, ಇಂಗ್ಲೆಂಡಿನ ದಾರ್ಶನಿಕ ವಿಜ್ಞಾನಿ ಲಾರ್ಡ್ ಬರ್ಟ್ರೆಂಡ್ ರಸಲ್, ಸರ್ಕಾರಗಳ ಈ ಹುಚ್ಚು ಪಂದ್ಯದ ಪರಿಣಾಮವಾಗಿ ಪ್ರಪಂಚಕ್ಕೆ ಒದಗಲಿರುವ ಘೋರ ವಿಪತ್ತನ್ನು ಜನತೆಗೆ ಲಿಖಿತ ಪ್ರಣಾಳಿಕೆಯ ಮೂಲಕ ತಿಳಿಯಪಡಿಸಬೇಕೆಂದು ಬಯಸಿ ತಮ್ಮ ಯೋಜನೆಗೆ ಐನ್‌ಸ್ಟೈನರ ಬೆಂಬಲ ಯಾಚಿಸಿದರು (ಫೆಬ್ರವರಿ 1955). ಐನ್‌ಸ್ಟೈನ್ ಬರೆದ ಉತ್ತರ ಮಾರ್ಮಿಕವಾಗಿದೆ "ಇಂಥ ವಿಚಾರಗಳನ್ನು ನೀವು ಚೆನ್ನಾಗಿ ತಿಳಿದುಕೊಂಡಿದ್ದೀರಿ. ನೀವು ದಳವಾಯಿ. ನಾನೋ? ಸಿಪಾಯಿ ಮಾತ್ರ. ಹುಕುಂ ಚಾಲೂ ಮಾಡಿ, ಅಸ್ಸಲ್ ಹಿಂದೆ ನಾನಿದ್ದೇನೆ."

ಮುಂದೆ ರಸಲರಿಂದ, ತರುವಾಯದ ದಿನಗಳಲ್ಲಿ ಐನ್‌ಸ್ಟೈನ್–ರಸಲ್ ಘೋಷಣೆ ಎಂಬ ಅಭಿಧಾನದಿಂದ, ಪ್ರಕಟವಾದ ಪ್ರಣಾಳಿಕೆಯ ಕರಡು ಪ್ರತಿ ಬಂದಿತು. ಮರಣಶಯ್ಯೆಯಲ್ಲಿ ಮಲಗಿದ್ದ ಐನ್‌ಸ್ಟೈನ್, 1955 ಏಪ್ರಿಲ್ 11ರಂದು, ನೋವನ್ನು ನುಂಗಿ ನಲವನ್ನು ಬೀರಿ ಅದಕ್ಕೆ ರುಜು ಹಾಕಿದರು. ಆದರೆ ಇದು ಏಳು ದಿವಸಗಳ ಬಳಿಕ, 18ನೆಯ ತೇದಿಯಂದು, ಪ್ಯಾರಿಸ್ಸಿನಲ್ಲಿ ರಸಲರ ಕೈ ಸೇರುವ ಅದೇ ಕೆಲವು ಗಂಟೆಗಳ ಮೊದಲು ಶಾಂತಿದೂತ ಐನ್‌ಸ್ಟೈನ್ ಚಿರಶಾಂತಿ ಅರಸಿ ನಿಸರ್ಗದಲ್ಲಿ ಲೀನವಾಗಿ ಹೋಗಿದ್ದರು.

"ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ರಕ್ತಮಾಂಸಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬರಲಿರುವ ಪೀಳಿಗೆಗಳು ಸಂದೇಹಿಸುವುದು ಸಾಧ್ಯ." ಮಹಾತ್ಮ ಗಾಂಧಿಯವರನ್ನು ಕುರಿತು ಐನ್‌ಸ್ಟೈನ್ 1939ರಲ್ಲಿ ಬರೆದ ಈ ಮಾತು ಇವರನ್ನು ಕುರಿತಂತೆಯೂ ಅಷ್ಟೇ ನಿಜ.

ಐನ್‌ಸ್ಟೈನ್ ವಾಣಿ

ಗಾಂಧೀಜಿಯನ್ನು ಕುರಿತು 2–10–1939ರಂದು ನೀಡಿದ ಹೇಳಿಕೆ: ತನ್ನ ಜನತೆಯ ನಾಯಕ, ಯಾವುದೇ ಬಾಹ್ಯ ಬಲದ ಬೆಂಬಲವಿರದಾತ; ಈ ರಾಜಕಾರಣಿಯ ಯಶಸ್ಸು ಚಮತ್ಕಾರವನ್ನಾಗಲಿ ತಾಂತ್ರಿಕ ಕೌಶಲಗಳಲ್ಲಿ ಗಳಿಸಿರುವ ಪ್ರಾವೀಣ್ಯವನ್ನಾಗಲಿ ಅವಲಂಬಿಸಿಲ್ಲ, ಬದಲು, ಮನವೊಲಿಸಬಲ್ಲ ಸ್ವಂತ ವ್ಯಕ್ತಿತ್ವದ ಸಾಮರ್ಥ್ಯವನ್ನು ಮಾತ್ರ ಅವಲಂಬಿಸಿದೆ; ಬಲಪ್ರಯೋಗವನ್ನು ಸದಾ ತಿರಸ್ಕರಿಸಿದ ಯಶಸ್ವೀ ಹೋರಾಟಗಾರ; ವಿವೇಕ ವಿನೀತತೆಗಳಿಂದ ಕೂಡಿದ ಪುರುಷ: ದೃಢ ನಿರ್ಧಾರ ಮತ್ತು ಅಚಲಸ್ಥೈರ್ಯದಿಂದ ಸಜ್ಜುಗೊಂಡು ಸಕಲತ್ರಾಣವನ್ನೂ ತನ್ನ ಜನರ ಉದ್ಧಾರ ಹಾಗೂ ಸ್ಥಿತಿಗತಿಗಳ ಸುಧಾರಣೆಗಾಗಿ ಅರ್ಪಿಸಿದಾತ; ಯೂರೊಪಿನ ಅಮಾನುಷ ಕ್ರೌರ್ಯವನ್ನು ಸರಳ ವ್ಯಕ್ತಿಯ ಗಾಂಭೀರ್ಯದಿಂದ ಎದುರಿಸಿ ಎಲ್ಲ ಸಂದರ್ಭಗಳಲ್ಲಿಯೂ ಶ್ರೇಷ್ಠತೆಯಿಂದ ಕಂಗೊಳಿಸಿದಾತ. ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ರಕ್ತಮಾಂಸಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬರಲಿರುವ ಪೀಳಿಗೆಗಳು ಸಂದೇಹಿಸುವುದು ಸಾಧ್ಯ.

ಗಾಂಧೀಜಿಗೆ ಎಪ್ಪತ್ತು ತುಂಬಿದಾಗ, 2–10–1939ರಂದು, ಅವರಿಗೊಂದು ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು. ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಅದರ ಗೌರವ ಸಂಪಾದಕರು. ಆ ಗ್ರಂಥದಲ್ಲಿ ಪ್ರಕಟವಾಗಿರುವ ಐನ್‌ಸ್ಟೈನ್ ಲೇಖನ:

ರಾಜಕೀಯ ಇತಿಹಾಸದಲ್ಲಿ ಗಾಂಧಿ ಅದ್ವಿತೀಯ. ದಬ್ಬಾಳಿಕೆಗೆ ಈಡಾದ ಜನಸಮೂಹದ ಬಿಡುಗಡೆಯ ಹೋರಾಟಕ್ಕೆ ಅವರೊಂದು ಪೂರ್ಣ ನೂತನ ತಂತ್ರವನ್ನು ಸೃಷ್ಟಿಸಿ ಅದನ್ನು ಅಧಿಕ ಶಕ್ತಿ ಶ್ರದ್ಧೆಯಿಂದ ಕಾರ್ಯರೂಪಕ್ಕೆ ಇಳಿಸಿದ್ದಾರೆ. ಪಾಶವೀಬಲದ ಮೇಲೆ ಅವಧಾರಣೆ ಹೇರಿರುವ ವರ್ತಮಾನಯುಗದಲ್ಲಿ ನಾಗರಿಕ ಪ್ರಪಂಚದ ಮೂಲಕ ಚಿಂತನಶೀಲ ವ್ಯಕ್ತಿಗಳ ಮೇಲೆ ಗಾಂಧಿ ಬೀರಿರುವ ವರ್ಚಸ್ಸು ಮೇಲು ನೋಟಕ್ಕೆ ಕಂಡುಬರುವುದಕ್ಕಿಂತ ಅದೆಷ್ಟೊ ಹೆಚ್ಚು ಬಾಳು ಪರಿಣಾಮಕಾರಿಯಾದದ್ದು. ಏಕೆಂದರೆ ರಾಜ್ಯನೀತಿಜ್ಞರ ಕಾರ್ಯ ಅವರು ತಮ್ಮ ವೈಯಕ್ತಿಕ ನಿದರ್ಶನ ಮತ್ತು ಬೋಧಕ ಪ್ರಭಾವಗಳಿಂದ ತಮ್ಮ ಜನರ ನೈತಿಕ ಬಲಗಳನ್ನು ಬಡಿದೆಬ್ಬಿಸುವಷ್ಟರ ಮಟ್ಟಿಗೆ ಮಾತ್ರ ಶಾಶ್ವತ. ನಾವು ಭಾಗ್ಯವಂತರು. ಮುಂಬರಲಿರುವ ಪೀಳಿಗೆಗಳಿಗೆ ದಾರಿದೀಪವಾಗಿರುವ ಈ ಸಮಕಾಲೀನ ದಿವ್ಯಜ್ಯೋತಿಯನ್ನು ವಿಧಿ ನಮಗೆ ಅನುಗ್ರಹಿಸಿರುವುದಕ್ಕೆ ನಾವು ಕೃತಜ್ಞರಾಗಿರಬೇಕು.

ಅನು : ಜಿ. ಟಿ. ಎನ್

ಸಂಗ್ರಹ : ಎಚ್. ಎಸ್. ಸುಜಾತಾ

ಎಂ ಎಸ್ ಪುಟ್ಟಣ್ಣನವರ ಇನ್ನೆರಡು ಲೇಖನಗಳು

[ಎಂ. ಎಸ್. ಪುಟ್ಟಣ್ಣನವರು (1854–1930) ಹೊಸಗನ್ನಡ ಸಾಹಿತ್ಯಕ್ಕಾಗಿ ದುಡಿದ ಹಿರಿಯ ಮಹನೀಯರಲ್ಲಿ ಒಬ್ಬರು. ಅವರು ಕಾದಂಬರಿ, ಜೀವನಚರಿತ್ರೆ, ಅನುವಾದ, ಸಂಶೋಧನೆ, ಬಾಲ ಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿ ಹೆಸರು ಮಾಡಿದರು. ಜೊತೆಗೆ 'ಹಿತಬೋಧಿನಿ' ಎಂಬ ಮಾಸಪತ್ರಿಕೆಯನ್ನು ಕೆಲವು ಕಾಲ ನಡೆಸಿದರು. 'ಹಿತಬೋಧಿನಿ' ಯಲ್ಲೂ ಇತರ ಹಲವು ಪತ್ರಿಕೆಗಳಲ್ಲೂ ಅನೇಕ ಬಿಡಿಲೇಖನಗಳನ್ನು ಬರೆದರು.

ಹಿತಬೋಧಿನಿಯಲ್ಲಿ ಪ್ರಕಟವಾದ, ಪುಟ್ಟಣ್ಣನವರ ಎರಡು ಲೇಖನಗಳನ್ನು ಇಲ್ಲಿ ಕೊಡಲಾಗಿದೆ. 'ಪ್ರಜಾಪ್ರತಿನಿಧಿಗಳ ಸಭೆ' (ಸಂಪುಟ ೧, ಸಂಚಿಕೆ ೨ : ೧೮೮೩) ಎಂಬ ಲೇಖನದಲ್ಲಿ ಪುಟ್ಟಣ್ಣನವರು ಪ್ರಜಾಪ್ರತಿನಿಧಿಸಭೆ ಪ್ರಾರಂಭವಾದ ಉದ್ದೇಶವನ್ನು ಕುರಿತು ಹೇಳಿದ್ದಾರೆ. 'ಮೈಸೂರು ಪ್ರಜಾಪ್ರತಿನಿಧಿಗಳ ಸಭೆ' (ಸಂಪುಟ ೧, ಸಂಚಿಕೆ ೨ ; ೧೮೮೩) ಎಂಬ ಲೇಖನ ಅಂತಹ ಒಂದು ಸಭೆಯ ಕಾರ್ಯಕಲಾಪಗಳನ್ನು ತಿಳಿಸುತ್ತದೆ. ಕನ್ನಡಿಗರ ಗಮನಕ್ಕೆ ಬರಲೆಂಬ ಉದ್ದೇಶದಿಂದ ಈಗ ಈ ಎರಡು ಲೇಖನಗಳನ್ನು ಇಲ್ಲಿ ಪುನರ್ಮುದ್ರಿಸಲಾಗಿದೆ—**ಎಚ್. ಎಸ್. ಸುಜಾತಾ.**]

ಪ್ರಜಾಪ್ರತಿನಿಧಿಗಳ ಸಭೆ

ಪ್ರತಿ ಕುಟುಂಬದಲ್ಲಿಯೂ ಒಬ್ಬ ಯಜಮಾನನು ಇರುವನಷ್ಟೆ. ಈ ಯಜಮಾನನ ಕೈ ಕೆಳಗೆ ಇವನ ಹೆಂಡತಿ, ಹೆಣ್ಣುಮಕ್ಕಳು, ಗಂಡುಮಕ್ಕಳು, ಸಹೋದರರು, ಇತರ ಬಂಧುಗಳು, ಮುಂತಾದವರು ಇರುವುದು ಸರಿಯಷ್ಟೆ. ಇವರೆಲ್ಲರನ್ನೂ ಕುಟುಂಬದಲ್ಲಿ ಒಟ್ಟಿಗೆ ಇಟ್ಟುಕೊಂಡು ಯಜಮಾನನು ಸಂಸಾರವನ್ನು ನಡಿಸುವಾಗ, ಎಲ್ಲಾ ಕೆಲಸವನ್ನೂ ತಾನೇ ನೋಡುತ್ತಾ, ಯಾರಿಗೂ ಸ್ವಲ್ಪ ಸ್ವಾತಂತ್ರ್ಯವನ್ನೂ ಕೊಡದೆ, ಮಾತುಮಾತಿಗೂ ಕೋಪಮಾಡಿ ಎಲ್ಲರನ್ನೂ ದಂಡಿಸುತ್ತಾ ಇದ್ದರೆ, ಇಂಥಾ ಯಜಮಾನನಲ್ಲಿ ಮನೆಯ ಜನರೆಲ್ಲರಿಗೂ ಪ್ರೀತಿ ತಪ್ಪುವುದು ; ಮತ್ತು ಈ ಜನರು ತಿಳುವಳಿಕೆಯುಳ್ಳವರಾಗಿಯೂ ವಿದ್ಯಾವಂತರಾಗಿಯೂ ಇದ್ದಲ್ಲಿ, ಇಂಥಾ ಯಜಮಾನನಿಗೆ ಅವರ ಮರ್ಯಾದೆಯೂ ತಪ್ಪುವದು. ಆದರೆ ಈ ಯಜ

ಮಾನನು ಒಬ್ಬರನ್ನೂ ಕ್ರೂರವಾಗಿ ಕಾಣದೆ, ಎಲ್ಲರಲ್ಲಿಯೂ ಒಂದೇ ವಿಧವಾದ ಅಭಿಮಾನವನ್ನು ಇಟ್ಟುಕೊಂಡು, ತಾರತಮ್ಯವರಿತು ಅವರವರ ಕೈಯಲ್ಲಿ ಆಗುವ ಕೆಲಸವನ್ನು ಅವರ ಮೂಲಕವೇ ಮಾಡಿಸುತ್ತಾ, ತಪ್ಪಿದರೆ ಅವರ ತಪ್ಪನ್ನು ಅವರಿಗೇ ತಿಳಿಯಪಡಿಸಿ ತಿದ್ದುತ್ತಾ, ಗೃಹಕೃತ್ಯದ ವಿಷಯವಾಗಿ ಕೆಲವು ಮುಖ್ಯವಾದ ಸಂದರ್ಭಗಳಲ್ಲಿ ಅವರ ಅಭಿಪ್ರಾಯವನ್ನು ಕೇಳಿ ಅವರ ಮಾತು ಯುಕ್ತವಾಗಿದ್ದಲ್ಲಿ ಅವರಂತೆಯೇ ಕೆಲಸವನ್ನು ಜರಗಿಸುತ್ತಾ, ಸಕಲ ವಿಷಯದಲ್ಲಿಯೂ ಕುಟುಂಬದ ಜನರಿಗೆ ಸೌಖ್ಯವನ್ನು ಹೆಚ್ಚಿಸುತ್ತಾ ಇದ್ದರೆ, ಈ ಯಜಮಾನನು ತನ್ನ ಜನರ ಪ್ರೀತಿಗೆ ಪಾತ್ರನಾಗುವನು; ಮತ್ತು ಆ ಸಂಸಾರಕ್ಕೆ ಎಲ್ಲಾ ಭಾಗ್ಯಗಳೂ ಹೆಚ್ಚುವವು.

ಒಂದು ರಾಜ್ಯಭಾರವನ್ನು ಇಂಥಾ ಒಂದು ಕುಟುಂಬದ ಆಡಳಿತಕ್ಕೆ ಹೋಲಿಸಬಹುದು. ಧೊರೆಯನ್ನು ಕುಟುಂಬದ ಯಜಮಾನನ ಹಾಗೂ, ಪ್ರಜೆಗಳನ್ನು ಮಕ್ಕಳೇ ಮೊದಲಾದ ಸಂಬಂಧಿಗಳ ಹಾಗೂ ಭಾವಿಸಬಹುದು. ಮನೆಗೆ ಕಳ್ಳರೇ ಮೊದಲಾದ ಇತರ ಜನರ ಬಾಧೆ ಇಲ್ಲದಂತೆಯೂ, ಮನೇಜನಗಳಲ್ಲಿ ಪರಸ್ಪರ ಜಗಳವಿಲ್ಲದಂತೆಯೂ ಯಜಮಾನನು ನೋಡಿಕೊಳ್ಳುತ್ತಾ, ತಾನು ಒಬ್ಬರಲ್ಲಿಯೂ ಪಕ್ಷಪಾತವಿಡದೆ ಎಲ್ಲರನ್ನೂ ಒಂದೇ ರೀತಿಯಾಗಿ ಕಾಣುತ್ತಾ ಇದ್ದರೆ, ಮನೇಜನರ ಕ್ಷೇಮಲಾಭವು ಹೆಚ್ಚುವದಕ್ಕೆ ಕಾರಣವಾಗುವದು. ಹೀಗೆಯೇ ದೊರೆಯು ಅನ್ಯದೇಶದವರಿಂದ ತನ್ನ ದೇಶಕ್ಕೆ ಕಾಟಕಾಯಗಳು ಇಲ್ಲದಂತೆಯೂ, ಒಳದೇಶದಲ್ಲಿಯೇ ನುಂಪಪ್ಪು ಪ್ರಜೆಗಳು ಒಬ್ಬರಿಗೊಬ್ಬರು ಜಗಳವಾಡಿ ರಾಜ್ಯವನ್ನು ಹಾಳುಮಾಡದಂತೆಯೂ ನೋಡಿಕೊಳ್ಳುತ್ತಾ, ಜನಗಳ ಪ್ರಾಣಕ್ಕಾಗಲಿ ಆಸ್ತಿಗಾಗಲಿ ಯಾವ ಭಯವೂ ಇಲ್ಲದಂತೆ ಏರ್ಪಾಡುಗಳನ್ನು ಮಾಡಿ ನಿಷ್ಪಕ್ಷಪಾತವಾಗಿ ಆಳಿದರೆ, ಪ್ರಜೆಗಳಿಗೆ ಸೌಖ್ಯವುಂಟಾಗುವದಕ್ಕೆ ಆಕರವಾಗುವುದು ಇದಕ್ಕಾಗಿ ಧೊರೆಯು ದಂಡ:, ಪೋಲೀಸ್ ಅಥವಾ ಕಂದಾಚಾರ, ಜುಡಿಷಲ್ ಅಥವಾ ನ್ಯಾಯವಿಚಾರ, ಅದೇ ಮುಂತಾದ ಅನೇಕ ಇಲಾಖೆಗಳನ್ನು ಇಟ್ಟುಕೊಂಡು, ಅವುಗಳಿಗೆ ತಕ್ಕ ಅಧಿಕಾರಿಗಳನ್ನು ನೇಮಿಸಿ ವಿವೇಕಿಯಾದ ಮಂತ್ರಿಯ ಮೂಲಕ ಎಲ್ಲಾ ಆಡಳಿತಗಳನ್ನೂ ನಡಿಸಬೇಕು. ಇಂಥಾ ಏರ್ಪಾಡುಗಳ ವೆಚ್ಚಕ್ಕಾಗಿ ಬಹುದ್ರವ್ಯ ಬೇಕಾಗುವದು. ಪ್ರಜೆಗಳು ಭೂಮಿಯ ಕಂದಾಯವಾಗಿಯೂ ಮತ್ತು ಇತರ ತೆರಿಗೆಯಾಗಿಯೂ ಕೊಡುವ ಹಣದಿಂದ ಈ ವೆಚ್ಚವೆಲ್ಲಾ ಕಳೆಯಬೇಕು. ಹೀಗೆ ಪ್ರಜೆಗಳಿಂದ ಶೇಖರ ಮಾಡಿದ ಹಣವನ್ನು ಪ್ರಜೆಗಳ ಸೌಖ್ಯಕ್ಕೋಸ್ಕರ ವೆಚ್ಚ ಮಾಡತಕ್ಕದ್ದು ಮಂತ್ರಿಯೇ ಮೊದಲಾದ ಅಧಿಕಾರಿಗಳ ಕೆಲಸವಾಗಿದೆ.

ಲೋಕದಲ್ಲಿ ಜನರು ತಮ್ಮ ತಮ್ಮ ಹಣವನ್ನು ಎಷ್ಟೇ ವಿವೇಕದಿಂದ ತಾವೇ ಖರ್ಚು ಮಾಡಿದರೂ, ಒಂದೊಂದು ಕಾಲದಲ್ಲಿ ಇದು ದುರ್ವ್ಯಯವಾಗಿ ಹೋಗಬಹುದು; ಈ ಹಣವನ್ನು ಇತರರೇ ವೆಚ್ಚಮಾಡಿದರೆ, ಇಂಥಾ ದುರ್ವ್ಯಯವು ಮತ್ತೂ ಹೆಚ್ಚುವದಕ್ಕೆ ಸಂದರ್ಭಗಳು ವಿಶೇಷವಾಗಿರುವವು. ಸರಕಾರದ ಅಧಿಕಾರಿಗಳು ಪ್ರಜೆಗಳಿಂದ ಬಂದಿರುವ ಸುವರ್ಣಾದಾಯವನ್ನು ಒಳ್ಳೇ ಕೆಲಸಗಳಲ್ಲಿಯೇ ಯಾವಾಗಲೂ ಸರಿಯಾಗಿ ಉಪಯೋಗಿಸುವರೋ ಇಲ್ಲವೋ ತಿಳಿಯದು: ಈ ಅಧಿಕಾರಿಗಳು ಕೆಟ್ಟವರಾದರೆ ಅವರಿಂದ ಜನಗಳಿಗೆ ವಿಧವಿಧವಾದ ತೊಂದರೆ ಸಂಭವಿಸಬಹುದು; ಸರಕಾರದವರಿಗೆ ಕೆಲಸವು ಹೆಚ್ಚಾಗಿರುವದರಿಂದ, ರಾಜ್ಯಾಂಗ ವಿಚಾರದಲ್ಲಿ ಪ್ರತಿವಿಷಯದ ಒಳ್ಳೇದು ಕೆಟ್ಟದ್ದನ್ನು ಚನ್ನಾಗಿ ಯೋಚಿಸಿ ಕಾರ್ಯಗಳನ್ನು ಜರಗಿಸಲು ಬಹಳ ಕಷ್ಟವಾಗಬಹುದು; ಅಥವಾ ಚನ್ನಾಗಿ ಯೋಚಿಸಿದರೂ ಪ್ರಜೆಗಳು ತಮ್ಮ ವಿಷಯವನ್ನು ತಾವೇ ಯೋಚಿಸುವ ರೀತಿಯಲ್ಲಿ ಸರಕಾರದವರು ಅವರ ವಿಷಯವನ್ನು ಕುರಿತು ಯೋಚಿಸಲಾರದೆ ಹೋಗಬಹುದು. ಇಂಥಾ ಸಂದರ್ಭಗಳಲ್ಲಿ ಪ್ರಜೆಗಳೇ ಒಟ್ಟಿಗೆ ಸೇರಿ ಧೊರೆಯ ಸಮೀಪದಲ್ಲಿ ತಮ್ಮ ಸಂಗತಿಗಳನ್ನು ಚನ್ನಾಗಿ ತಿಳಿಯಪಡಿಸುವದು ಯುಕ್ತವಾಗಿದೆ.

ಆದರೆ ಅನೇಕ ಜನರಿರುವ ದೊಡ್ಡ ದೊಡ್ಡ ದೇಶಗಳಲ್ಲಿ ಪ್ರಜೆಗಳೆಲ್ಲರೂ ತಮ್ಮ ತಮ್ಮ ನಿತ್ಯಗಟ್ಟಲೇ ಕೆಲಸಗಳನ್ನು ಬಿಟ್ಟು ಈ ಕಾರ್ಯಕ್ಕೋಸ್ಕರ ರಾಜನ ಸಮೀಪದಲ್ಲಿ ಸೇರುವುದು ಸುಲಭವಲ್ಲ; ಅಥವಾ ಸೇರಿದರೂ ಪ್ರತಿಯೊಬ್ಬ ಮನುಷ್ಯನ ಅಭಿಪ್ರಾಯವನ್ನೂ ಕೇಳಿ ಸರಿಯಾದ ಪರ್ಯಾಲೋಚನೆಯಿಂದ ರಾಜ್ಯಭಾರವನ್ನು ನಡಿಸಲು ಸರಕಾರಕ್ಕೆ ಬಹಳ ಶ್ರಮವೂ ಸಾವಕಾಶವೂ ಆಗುವುದು. ಆದ್ದರಿಂದ ವಿವೇಕವುಳ್ಳವರಾಗಿಯೂ, ಮತ್ತು ತಮಗೆ ಕ್ಷೇಮಚಿಂತೆಯನ್ನು ಮಾಡಿ ತಮ್ಮ ಸಂಕಟಗಳನ್ನು ಪರಿಹಾರ ಮಾಡುವವರಾಗಿಯೂ, ತಮ್ಮಲ್ಲಿ ಮುಖಂಡರಾಗಿಯೂ ಇರುವವರನ್ನು ಧೊರೆಯ ಸಮೀಪಕ್ಕೆ ಪ್ರಜೆಗಳೇ ಕಳುಹಿಸಿಕೊಡಬೇಕು. ಹೀಗೆ ಪ್ರಜೆಗಳಿಗೆ ಬದಲಾಗಿ ಧೊರೆಯ ಸಭೆಗೆ ಬರತಕ್ಕ ಈ ಮುಖಂಡರಿಗೆ ಪ್ರಜಾಪ್ರತಿನಿಧಿಗಳೆಂದು ಹೆಸರು. ಈ ಪ್ರತಿನಿಧಿಗಳು ಸಭೆಯಲ್ಲಿ ಮಾಡತಕ್ಕ ಕೆಲಸಗಳನ್ನು ಪ್ರಜೆಗಳೇ ಮಾಡಿದ ಹಾಗೆ ಆಗುವುದು. ಈ ರೀತಿಯಲ್ಲಿ ಒಂದು ದೇಶದ ಪ್ರಜೆಗಳು ಸರಕಾರದವರಿಗೆ ರಾಜ್ಯಭಾರ ವಿಚಾರದಲ್ಲಿ ಹಲವು ಬಗೆಯಿಂದಲೂ ಸಹಾಯ ಮಾಡಲು ಶ್ರದ್ಧೆಯನ್ನು ತೋರಿಸುತ್ತಲೇ ಇದ್ದರೆ, ಆ ದೇಶವು ವೃದ್ಧಿಯಾಗುವುದಕ್ಕೆ ಸಂಶಯವೇ ಇಲ್ಲ. ಪ್ರಜೆಗಳ ಅನುಮತಿಯಿಲ್ಲದ ರಾಜ್ಯಭಾರವು ಆಚಂದ್ರಾರ್ಕವಾಗಿರಲಾರದು.

ಜನಗಳು ತಮ್ಮ ದೇಶದ ಯೋಗಕ್ಷೇಮದಲ್ಲಿ ಇಂಥಾ ಚಟುವಟಿಕೆಯನ್ನು ತೋರಿಸುತ್ತಿರಲು, ಧೊರೆಯಾಗಲಿ ಅಥವಾ ಮಂತ್ರಿಯಾಗಲಿ ಪ್ರಜೆಗಳಿಗೆ ಇಂಥಾ ಸ್ವಾತಂತ್ರ್ಯವನ್ನು ಕೊಟ್ಟು, ಅವರ ಯುಕ್ತವಾದ ಅಭಿಪ್ರಾಯವನ್ನು ಅನುಸರಿಸಿ ಅವರಿಗೆ ಹಿತವನ್ನು ಕೋರಬೇಕು. ಹಾಗಲ್ಲದೆ ಸರಕಾರದ ಉದ್ಯೋಗಸ್ಥರು ಜನರ ಕಷ್ಟಸುಖಗಳನ್ನು ತಿಳಿಯದೆ ಮನಸ್ಸು ಬಂದಂತೆ ಕಾರ್ಯಗಳನ್ನು ನಡಿಸಿದರೆ, ಒಂದು ಸಂಸಾರದಲ್ಲಿ ಇರತಕ್ಕವರ ಕ್ಷೇಮಚಿಂತೆಯನ್ನು ಮಾಡದೆ ಮನಸ್ಸಿಯಾಗಿ ಆಡಳಿತವನ್ನು ನಡಸತಕ್ಕ ಯಜಮಾನನಂತೆ, ಧೊರೆಯು ಪ್ರಜೆಗಳ ಪ್ರೀತಿಯನ್ನು ಕಳೆದುಕೊಳ್ಳುವನು; ಕ್ರಮೇಣ ರಾಜ್ಯದ ಬಿಗಿ ತಪ್ಪಿ ಪ್ರಜೆಗಳು ನಾನಾ ವಿಧದಲ್ಲಿ ಕೆಡುವ ಹೊತ್ತು ಬರಬಹುದು. ಆದಕಾರಣ ರಾಜನೂ ಪ್ರಜೆಗಳೂ ಏಕವಾಗಿ ದೇಶದ ಆಡಳಿತಗಳನ್ನು ನಡಿಸಿದ ಹೊರತು ರಾಜ್ಯಕ್ಕೆ ಕ್ಷೇಮ ದೊರೆಯುವುದು ಕಷ್ಟ. ಆದ್ದರಿಂದಲೇ ಸರಕಾರದ ಆಡಳಿತದಲ್ಲಿ ಪ್ರಜೆಗಳ ಅನುಮತಿಯು ಸೇರಿದ್ದರೆ, ಅಂಥಾ ರಾಜ್ಯಭಾರವೇ ಉತ್ತಮವಾದದ್ದು. ಮುಂದಿನ ಸಂಚಿಕೆಗಳಲ್ಲಿ ಈ ವಿಷಯವನ್ನು ಇನ್ನೂ ವಿಶದವಾಗಿ ಹೇಳುವೆವು.

ಈ ಸಂಗತಿಗಳನ್ನೆಲ್ಲಾ ಚನ್ನಾಗಿ ಪರ್ಯಾಲೋಚಿಸಿ ಪ್ರಜೆಗಳಿಗೆ ಸಕಲ ವಿಷಯದಲ್ಲಿಯೂ ಸೌಖ್ಯ ಉಂಟಾಗಬೇಕೆಂದು ಇಂಥಾ ಪ್ರಜಾಪ್ರತಿನಿಧಿಸಭೆಯು ಮೈಸೂರಲ್ಲಿ ಪ್ರತಿವರುಷವೂ ಸೇರುವಂತೆ ಮಹಾರಾಜಶ್ರೀ ದಿವಾನ್ ರಂಗಾಚಾರ್ಯರವರು ವಿಷು ಸಂವತ್ಸರದ ನವರಾತ್ರಿಯಲ್ಲಿ ಏರ್ಪಾಡು ಮಾಡಿದ್ದು ಸರಿಯಷ್ಟೆ. ಈಗ ಮೂರುವರುಷದಿಂದಲೂ ಇದು ಸಾಂಗವಾಗಿ ನಡೆದು ಬರುವುದು. ಜನರ ಸೌಖ್ಯವನ್ನೇ ಯಾವಾಗಲೂ ಚಿಂತಿಸುತ್ತಾ ಇಂಥಾ ಏರ್ಪಾಡನ್ನು ಮಾಡಿದ ಪ್ರವೀಣರಾದ ಇವರ ವಿವೇಕವೂ ದೂರದೃಷ್ಟಿಯೂ ಸರ್ವರಿಂದಲೂ ಶ್ಲಾಘಿಸಲ್ಪಡತಕ್ಕದ್ದಾಗಿದೆ. ದೊಡ್ಡ ಪಂಡಿತರಾಗಿ, ವಿದ್ಯಾಪಕ್ಷಪಾತಿಗಳಾಗಿ, ಬಹಳ ಅನುಭವಶಾಲಿಗಳಾಗಿ, ದೇಶಾಂತರದಲ್ಲಿಯೂ ಪ್ರಸಿದ್ಧರಾಗಿದ್ದ ಇವರು ಮೈಸೂರಲ್ಲಿಯೇ ಕಳೆದ ೧೫ ವರುಷದಿಂದಲೂ ಇದ್ದುಕೊಂಡು ನಮ್ಮ ಮಹಾರಾಜರನ್ನು ಸಕಲ ವಿಷಯದಲ್ಲಿಯೂ ಮುಂದಕ್ಕೆ ತಂದು, ಕೊನೆಗೂ ಈ ರಾಜ್ಯದ ಕ್ಷೇಮಚಿಂತೆಯಲ್ಲಿಯೇ ದೈವಾಧೀನರಾದರು. ಇಂಥಾ ಮಂತ್ರಿಗಳು ನಮ್ಮ ಹಿಂದೂಸ್ಥಾನದಲ್ಲಿ ರಾಜ್ಯದ ಆಡಳಿತಗಳನ್ನು ನಡಿಸುತ್ತಿದ್ದರೆ ನಮ್ಮ ಹಿಂದೂ ದೇಶದಲ್ಲಿ ನಾಗರಿಕತೆಯೂ ಸೌಖ್ಯವು ವೃದ್ಧಿಯಾಗಲು ಸಂದೇಹವೇ ಇಲ್ಲ. ತಾವು ಮಾಡಿದ ಈ ಪ್ರಜಾಪ್ರತಿನಿಧಿಸಭೆಯ ಏರ್ಪಾಡುಗಳು ಇನ್ನೂ ವೃದ್ಧಿಯಾದದ್ದನ್ನು ಅವರು ಕೊಂಚ ದಿವಸವಿದ್ದು ನೋಡಿ ಸಂತೋಷ

ಪಡುವುದಕ್ಕೆ ಇಲ್ಲದ ಹಾಗೆ ದೈವವು ಮುನಿದು ಅವರನ್ನು ಹೀಗೆ ಅಕಾಲದಲ್ಲಿ ಕರೆದುಕೊಂಡು ಹೋದದ್ದಕ್ಕಾಗಿ ನಮ್ಮ ದೇಶದ ಪ್ರಜೆಗಳು ತಮ್ಮ ದುರದೃಷ್ಟವನ್ನು ಬೈದುಕೊಂಡು ಎಷ್ಟು ಸಂಕಟಪಟ್ಟರೂ ಸ್ವಲ್ಪವೇ ಇದೆ!

ಮೈಸೂರು ಪ್ರಜಾಪ್ರತಿನಿಧಿಗಳ ಸಭೆ

ಕಳೆದ ನವರಾತ್ರಿಯಾದ ಕೂಡಲೆ ಆಶ್ವಯುಜ ಶುದ್ಧ ದ್ವಾದಶೀದಿನ ಮೈಸೂರು ಪ್ರಜಾಪ್ರತಿನಿಧಿಗಳ ಸಭೆಯು ರೆಸಿಡೆನ್ಸೀ ಬಂಗಲಿಯಲ್ಲಿ ಸೇರಿತು. ದೇಶದ ಎಲ್ಲಾ ತಾಲ್ಲೂಕಿನಿಂದಲೂ ಮುಖಂತರಾದ ದೊಡ್ಡ ಮನುಷ್ಯರು ಸುಮಾರು ೨೦೦ ಜನದ ಮಟ್ಟಿಗೆ ಬಂದಿದ್ದರು. ರೆಸಿಡೆನ್ಸ್, ಚೀಫ್ ಜಡ್ಜ್, ಮಹಾರಾಜರ ಸಭಿಕರೇ ಮೊದಲಾದ ಅನೇಕ ದೊಡ್ಡ ಉದ್ಯೋಗಸ್ಥರು ದಯಮಾಡಿಸಿದ್ದರು. ಆ ದಿನ ಮಧ್ಯಾಹ್ನ ಮೂರೂವರೆ ಘಂಟೆಗೆ ಸರಿಯಾಗಿ ದಿವಾನರು ಸೆಕ್ರಿಟರಿಯವರೊಡನೆ ದಯಮಾಡಿ ಆಸನವನ್ನು ಅಲಂಕರಿಸಿ ಹೋದ ವರುಷದಲ್ಲಿ ನಡೆದ ಮತ್ತು ಈ ವರುಷದಲ್ಲಿ ನಡೆಯುತ್ತಿರುವ ರಾಜ್ಯಭಾರದ ಸಂಗತಿಯನ್ನು ಪ್ರತಿನಿಧಿಗಳ ಮುಂದೆ ಓದಿದರು. ಇದು ಇಂಗ್ಲಿಷ್ ಭಾಷೆಯಲ್ಲಿ ಇದ್ದ ಕಾರಣ, ಎಲ್ಲರಿಗೂ ತಿಳಿಯುವಂತೆ ಇದರ ಕನ್ನಡದ ತರ್ಜುಮೆಯನ್ನು ದಿವಾನರ ಸೆಕ್ರಿಟರಿಯವರು ಓದಿದರು. ಅವರು ಅಪ್ಪಣೆ ಕೊಡಿಸಿದ ಮುಖ್ಯ ವಿಚಾರಗಳು ಯಾವವೆಂದರೆ—

ಲೋಕಲ್‌ಫಂಡ್ ಬೋರ್ಡ್‌ಬಿಲ್ ಅಂದರೆ ಆಯಾ ಸ್ಥಳ ವಿಚಾರಗಳನ್ನು ನೋಡಿಕೊಳ್ಳಲು ಏರ್ಪಾಡಾಗುವ ಬೋರ್ಡ್ ಅಥವಾ ಸಮಾಜಗಳ ವಿಷಯವಾಗಿ ಬಂದು ನಿಬಂಧನೆಯು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಿದೆ. ಮಹಾರಾಜರ ಸಭಿಕರು ಇದನ್ನು ಒಪ್ಪಿದ ಕೂಡಲೆ ಈ ನಿಬಂಧನೆಗಳು ಪ್ರಚಾರಕ್ಕೆ ಬರುವವು. ಇದರಿಂದ ಪ್ರತಿ ತಾಲ್ಲೂಕಿನಲ್ಲಿಯೂ ಪ್ರಮುಖರಾದ ಸ್ಥಳವಂದಿಗರ ಒಂದು ಸಭೆಯು ಏರ್ಪಾಡಾಗುವುದು. ಆ ತಾಲ್ಲೋಕಿನಲ್ಲಿರತಕ್ಕ ಅನ್ನಸತ್ರಗಳು, ಧರ್ಮಶಾಲೆಗಳು, ತೋಪುಗಳು, ಸಾಲು ಮರಗಳು, ನೀರಿನ ಸರಬರಾಜು, ಬಾಲಶಿಕ್ಷೆ, ವೈದ್ಯಶಾಲೆ ಮುಂತಾದವುಗಳನ್ನು ನೋಡಿಕೊಳ್ಳುವಂತೆ ಈ ಸಭೆಯವರಿಗೆ ಅಧಿಕಾರ ದೊರೆಯುವುದು. ಅಲ್ಲಿನ ಕೆರೆಗಳ ಕಾಮಗಾರಿಯೂ ಇವರಿಗೆ ಸೇರುವುದು. ಈ ಬೋರ್ಡಿನವರಿಗೆ ಸರಕಾರದವರ ಸಹಾಯವೂ, ಸದ್ಯಕ್ಕೆ ಅವರ ಮೇಲು ವಿಚಾರಣೆಯೂ ಇರುವದು.

ರೆವಿನ್ಯೂಕೋಡ್‌ಬಿಲ್ ಅಂದರೆ ಮುಲ್ಕೀಬಾಬಿನ ವಿಷಯವಾಗಿ ಕೆಲವು ನಿಬಂಧನೆಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗಲ್ಪಟ್ಟವೆ. ಇದರಲ್ಲಿ ಜನರು ತಿಳಿಯಬೇಕಾದ ಅಂಶಗಳು ಬಹಳವಾಗಿವೆ. ವಾಯಿದೇ ಕಂದಾಯ ಸಾಗುವಳೀ ಚೀಟಿಲ್ಲದೆ ೧೨ ವರುಷದವರಿಗೂ ಒಬ್ಬ ರೈತನು ಭೂಮಿಯನ್ನು ವ್ಯವಸಾಯ ಮಾಡುತ್ತಿದ್ದರೆ, ಆ ಭೂಮಿಯ ಸಾಗುವಳಿಯ ಹಕ್ಕು ಅವನಿಗೆ ನಿರಂತರವಾಗಿರಬೇಕೆಂಬು ಇದರಿಂದ ವ್ಯಕ್ತವಾಗಿದೆ. ಈ ನಿಬಂಧನೆಗಳಲ್ಲದೆ ಪಟ್ಟಣದ ರಸ್ತೆಗಳು, ಕಚರಾ ಸಂಬಂಧವಾದ ವಿಚಾರಣೆಗಳು, ಇವೇ ಮೊದಲಾದ ವಿಷಯಗಳನ್ನು ಕ್ರಮಪಡಿಸತಕ್ಕ ಮ್ಯುನಿಸಿಪಲ್ ನಿಬಂಧನೆಯೂ ಸ್ವಲ್ಪ ದಿವಸದಲ್ಲಿಯೇ ಪ್ರಕಟನೆಯಾಗುವುದು.

ಮೈಸೂರು ಸೀಮೆಯ ಆದಾಯವ್ಯಯಗಳ ವಿಷಯವನ್ನು ಓದಿದರು. ಹೋದ ವರುಷದಲ್ಲಿ ಆದಾಯವು ೧, ೦೩, ೩೮೩೬೧, ರೂಪಾಯಿಗಳಾಗಿಯೂ ವ್ಯಯವು ೧, ೦೨, ೧೯, ೪೬೫ ರೂಪಾಯಿಗಳಾಗಿಯೂ ವಿವರಿಸಲ್ಪಟ್ಟಿತು.

ಬರುವ ಜನವರೀ ತಿಂಗಳಿಂದ ಹೈಕೋರ್ಟಿನಲ್ಲಿ ಮೂರು ಜನ ಜಡ್‌ಜಿ ಅಥವಾ ನ್ಯಾಯಾಧಿಪತಿಗಳು ಇರುವಂತೆ ಏರ್ಪಾಡಾಗುವುದು. ಹೈಕೋರ್ಟ್ ಜಡ್ಜಿಗಳಲ್ಲಿ ಒಬ್ಬರು ಮಾತ್ರ ಬೆಂಗಳೂರಿನ ಸೆಷನ್ ಜಡ್ಜಿಯ ಕೆಲಸವನ್ನೂ ನೋಡಿಕೊಳ್ಳುವರು. ಆಗ ಎರಡು ಸಬ್ಜಡ್ಜಿಗಳ ಕೋರ್ಟುಗಳು ತೆಗೆದು ಹಾಕಲ್ಪಡುವುವು.

ಶ್ಯಾನುಭೋಗರ ಮತ್ತು ಪಟೇಲರ ಮಿರಾಶೆಯನ್ನು ಸರ್ವೇ ಇಲಾಖೆಯವರ ಸಲಹಾದಂತೆ ಹಣವಾಗಿ ಕೊಟ್ಟಲ್ಲಿ ಸರಕಾರಕ್ಕೆ ೭ ಲಕ್ಷ ರೂಪಾಯಿನ ಮಟ್ಟಿಗೂ ಹೆಚ್ಚು ವೆಚ್ಚವಾಗುವುದು. ಆದ್ದರಿಂದ ಈ ಶ್ಯಾನುಭೋಗ ಪಟೇಲರಿಗೆ ಕಂದಾಯವಿಲ್ಲದೆ ಭೂಮಿಯನ್ನು ಮಾನ್ಯವಾಗಿ ಕೊಡುವದಾಗಿಯೂ, ಈ ಮಿರಾಶೆಯನ್ನು ತಗೆದುಕೊಂಡು ಸರಕಾರದ ಕೆಲಸವನ್ನು ಅವರು ಸರಿಯಾಗಿ ನೋಡಬೇಕೆಂದೂ ನಿಷ್ಕರ್ಷೆಯಾಗುವದು.

ಇನ್ನು ಮೇಲೆ ರೇಲ್ ರಸ್ತೇ ಹೆಚ್ಚಿಸತಕ್ಕ ವಿಷಯವನ್ನು ಹೇಳಿದರು. ಇದನ್ನು ಈ ಸಂಚಿಕೆಯ ಇನ್ನೊಂದು ಕಡೆಯಲ್ಲಿ ವಿಸ್ತಾರವಾಗಿ ಹೇಳುವೆವು.

ಬೊಂಬಾಯಿ ಮತ್ತು ಬಳ್ಳಾರಿ ವರ್ತಕರು ಬೆಂಗಳೂರಲ್ಲಿ ಎರಡು ಹತ್ತೀನೂಲಿನ ಕಾರ್ಖಾನೆಗಳನ್ನು ಸ್ಥಾಪಿಸುವದಕ್ಕಾಗಿ ಯತ್ನಿಸಿದಾರೆ. ಇವರಿಗೆ ಸರಕಾರದವರು ಸಹಾಯ ಮಾಡುವದಾಗಿ ವಾಗ್ದಾನ ಮಾಡಿದಾರೆ. ಈ ಹತ್ತಿನೂಲಿನ ಕಾರ್ಖಾನೆಗಿಂತಲೂ ತುಪುಟದ ಕಾರ್ಖಾನೆಯು ಈ ದೇಶಕ್ಕೆ ಬಹಳ ಉಪಯೋಗವಾದದ್ದು. ಇದರಿಂದ ಹೆಚ್ಚು ಲಾಭವೂ ದೊರೆಯಬಹುದು. ಇದನ್ನು ಏರ್ಪಾಡು ಮಾಡಬೇಕೆಂದಿರುವ ವರ್ತಕರಿಗೆ ಸರಕಾರದ ಸಹಾಯವೂ ಸಿಕ್ಕುವದರಲ್ಲಿ ಸಂಶಯವಿಲ್ಲ. ಈ ದೇಶದಲ್ಲಿ ರೇಷ್ಮೆಯ ಹುಳುಗಳು ವಿಶೇಷವಾಗಿ ವೃದ್ಧಿಯಾಗುತ್ತಲಿವೆ. ಚೆನ್ನಾಗಿರತಕ್ಕ ಹುಳುಗಳನ್ನು ದೇಶಾಂತರದಿಂದ ತರಿಸುವದಕ್ಕೆ ಏರ್ಪಾಡಾಗುತ್ತಲಿದೆ. ಇವುಗಳನ್ನು ಹೆಚ್ಚಾಗಿ ಸಾಕತಕ್ಕ ಜನರಿಗೆ ಉಪ್ಪು ನೀರಲೇ ಗಿಡದ ವ್ಯವಸಾಯಕ್ಕಾಗಿ ಸರಕಾರದವರು ಭೂಮಿಯನ್ನು ಕಮ್ಮೀ ಕಂದಾಯಕ್ಕೆ ಕೊಡುವರು.

ಕೊನೆಯಲ್ಲಿ ಈ ವರುಷದ ಮಳೆಯು ಸ್ವಲ್ಪಕಾಲ ಮೀರಿ ಬಂದದ್ದರಿಂದ ಮಹಾರಾಜರಿಗೆ ಮನಸ್ಸಿಗೆ ವ್ಯಾಕುಲವಾಗಿತ್ತು. ಆದರೆ ಚಿತ್ತೇಮಳೆಯು ವಿಶೇಷವಾಗಿ ಹುಯಿದ ಕಾರಣ ಬೆಳೆಯು ಅನೇಕ ಕಡೆಯಲ್ಲಿ ಕೆಡದೆ ದೇಶದಲ್ಲಿ ಸುಭಿಕ್ಷ ಉಂಟಾದದ್ದಕ್ಕಾಗಿ ಮಹಾರಾಜರಿಗೆ ಬಹಳ ಹರ್ಷ ಉಂಟಾಗಿದೆ.

ಆ ದಿವಸ ಸಭೆಯು ೫ ಗಂಟೆಗೆ ಮುಗಿಯಿತು. ಪ್ರತಿನಿಧಿಗಳು ಮಾಡತಕ್ಕ ಚರ್ಚೆಯು ಮಾರನೇ ದಿವಸ ನಡೆಯಬಹುದೆಂದು ದಿವಾನರು ಅಪ್ಪಣೇ ಕೊಡಿಸಿದರು.

ಮಾರನೇ ದಿವಸ ಯಥಾಪ್ರಕಾರ ಸಭೆಯು ಸೇರಿತು. ಆ ಮಧ್ಯಾಹ್ನ ಒಂದು ಘಂಟೆಗೆ ದಿವಾನರು ದಯಮಾಡಿಸಿದರು. ತರುವಾಯ ಪ್ರತಿನಿಧಿಗಳು ತಮಗೆ ಬೇಕಾದ ವಿಷಯಗಳನ್ನು ಹೇಳುವದಕ್ಕೆ ಮೊದಲು ಮಾಡಿದರು. ಅವರು ಹೇಳಿಕೊಂಡ ಅಂಶಗಳಲ್ಲಿ ಮುಖ್ಯವಾದವುಗಳನ್ನು ಕೆಳಗೆ ಸೂಚಿಸಿದೇನೆ.

(೧) ಪ್ರತಿವರ್ಷದಲ್ಲಿಯೂ ಸೀಮೆಗೆ ಬರತಕ್ಕ ಆದಾಯವು ಸ್ವಲ್ಪ ಹೆಚ್ಚು ಕಡಮೆಯಾಗಿ ವೆಚ್ಚಕ್ಕೆ ಸರಿಯಾಗಿದೆ. ಆದ್ದರಿಂದ ಸರಕಾರಕ್ಕೆ ಇರತಕ್ಕ ೮೦ ಲಕ್ಷರೂಪಾಯಿ ಸಾಲವು ತೀರುವ ಬಗೆ ಹ್ಯಾಗೆ? ಇದಕ್ಕೆ ದಿವಾನರು—ವರ್ಷಕ್ಕೆ ಸೇಕಡ ೫ ರೂಪಾಯಿನ ಮೇರೆ ಕೊಡುತ್ತಿದ್ದ ಬಡ್ಡಿಯನ್ನು ೪ ರೂಪಾಯಿಗೆ ಇಳಿಸಿದೇವೆ; ಮತ್ತು ಇಂಡಿಯಾ ಸರಕಾರದವರಿಗೆ ವರ್ಷಕ್ಕೆ ಸುಮಾರು ೫ಲಕ್ಷ ರೂಪಾಯನ್ನು ಕೊಡುತ್ತ ಬರುವೆವು. ಇದರಲ್ಲಿ ಬಡ್ಡಿಗಾಗಿ ಸ್ವಲ್ಪ ವಸೂಲು ಹಾಕಿಕೊಂಡು, ಉಳಿದಿದ್ದನ್ನು ಅಸಲಿಗೆ ಸಲೆ ಹಾಕಿಕೊಳ್ಳುವೆವೆಂದು ಇಂಡಿಯಾ

ಸರಕಾರದವರು ಒಪ್ಪಿದಾರೆ. ಈ ಏರ್ಪಾಡಿನಿಂದ ಸಾಲವು ಸುಮಾರು ೪೧ ವರ್ಷಗಳಲ್ಲಿ ತೀರಿ ಹೋಗಬಹುದು. ಆದ್ದರಿಂದ ಇದರ ವಿಷಯವಾದ ಬಾಧೆಯು ಸರಕಾರಕ್ಕೆ ಏನೂ ಇಲ್ಲ, ಎಂದು ಅಪ್ಪಣೆ ಕೊಡಿಸಿದರು. ಇದಲ್ಲದೆ ಪ್ರತಿನಿಧಿಗಳು ಕೇಳಿದ ಇತರ ಅಂಶಗಳು ಯಾವ ವೆಂದರೆ—

(೨) ಈಗ ತರೀಜಮೀನುಗಳಿಗೆ ಸರಿಯಾಗಿ ನೀರು ಹಾಯದೆ ಹೋದರೆ ಆ ವರ್ಷದಲ್ಲಿ ಅರ್ಧ ಕಂದಾಯವನ್ನು ಸರಕಾರದವರು ವಸೂಲು ಮಾಡುತ್ತಾರೆ; ಮತ್ತು ಅಂಥಾ ಭೂಮಿಯಲ್ಲಿ ರೈತರು ರಾಗಿ ಮೊದಲಾದ ಯಾವ ಖುಷ್ಕೀ ಬೆಳೆಯನ್ನು ಮಾಡಿದಾಗ್ಯೂ ತರೀಕಂದಾಯವನ್ನೇ ವಸೂಲು ಮಾಡುತ್ತಾರೆ; ಮತ್ತು ಅಂಥಾ ಭೂಮಿಯಲ್ಲಿ ಯಾವ ವ್ಯವಸಾಯವೂ ಇಲ್ಲದೆ ಪಾಳು ಬಿಟ್ಟುಕೊಂಡು ಅರ್ಧ ತರೀಕಂದಾಯವನ್ನು ಕೊಟ್ಟರೆ ರೈತರಿಗೆ ನಷ್ಟವಾಗುವದು. ಬಿದ್ದಲು ಬೆಳೆಯನ್ನು ಮಾಡಿದರೂ ಪೂರಾ ತರೀಕಂದಾಯವನ್ನು ವಸೂಲು ಮಾಡುವರು. ಆದಕಾರಣ ಇಂಥಾ ಭೂಮಿಯಲ್ಲಿ ಖುಷ್ಕೀಪೈರನ್ನು ಮಾಡಿಕೊಳ್ಳುವಂತೆಯೂ ಇದಕ್ಕೆ ತರೀಕಂದಾಯದಲ್ಲಿ ಅರ್ಧವಾಗಲಿ ಅಥವಾ ಬೆಂಗಾರ್ ತರೀ ದರವಾಗಲಿ ವಸೂಲು ಮಾಡುವಂತೆಯೂ ಅಪ್ಪಣೆಯಾಗ ಬೇಕು.

(೩) ತರೀಜಮೀನುಗಳನ್ನು ಉತ್ತಮ, ಮಧ್ಯಮ, ಅಧಮ, ಎಂದು ವಿಂಗಡಿಸಿ ಅವುಗಳ ಯೋಗ್ಯತಾನುಸಾರ ಹೆಚ್ಚು ಕಡಮೇ ಕಂದಾಯವನ್ನು ಹಾಕಿದ್ದರು. ಈಗ ಸರ್ವೇ ಇಲಾಖೆ ಯವರು ಭೂಮಿಗಳ ತಾರತಮ್ಯವನ್ನು ನೋಡದೆ ಎಕರೆ ೧ಕ್ಕೆ ೭ ರೂಪಾಯಿ ಪ್ರಕಾರ ಸರಾಸರಿ ಒಂದೇ ದರವನ್ನು ಹಾಕಿದಾರೆ. ಇದರಿಂದ ಉತ್ತಮವಾದ ಭೂಮಿಯುಳ್ಳವರಿಗೆ ಅನುಕೂಲ ವಾಯಿತು. ಕನಿಷ್ಠ ತರದ ಭೂಮಿಯುಳ್ಳವರು ಅವುಗಳಿಗೆ ರಾಜೀನಾಮೆಯನ್ನು ಕೊಡ ಬೇಕಾಗಿದೆ. ಆದಕಾರಣ ಪೂರ್ವದಲ್ಲಿದ್ದಂತೆ ಭೂಮಿಯ ತಾರತಮ್ಯವನ್ನರಿತು ಕಂದಾಯವನ್ನು ಹಾಕುವ ಹಾಗೆ ಅಪ್ಪಣೆಯಾಗಬೇಕು.

(೪) ಅಮಲ್‌ದಾರರಿಗೆ ೧೦೦ ರೂಪಾಯಿನ ಒಳಗಿರತಕ್ಕ ಸಿವಿಲ್ ಮೊಕದ್ದಮೆಗಳನ್ನು ಹಿಡಿಯುವಂತೆ ಅಧಿಕಾರವನ್ನು ಕೊಡಿಸಬೇಕು.

(೫) ಜೋಡೀಗ್ರಾಮದ ಕೆರೆ, ಕಾಲುವೆ, ಮುಂತಾದವುಗಳ ಮರಾಮತ್ತನ್ನು ಎನ್‌ಜಿ ನಿಯರ್ ಇಲಾಖೆಯವರೇ ಮಾಡುತ್ತಲಿದಾರೆ. ಅದನ್ನು ತಪ್ಪಿಸಿ ಪೂರ್ವದಲ್ಲಿದ್ದ ಹಾಗೆ ಜೋಡೀ ದಾರರೇ ಮಾಡಿಸಿಕೊಳ್ಳುವಂತೆ ಅಪ್ಪಣೆಯಾಗಬೇಕು.

(೬) ಈ ಸೀಮೆಯಲ್ಲಿ ರೇಷ್ಮೆಯನ್ನು ವಿಸ್ತಾರವಾಗಿ ತೆಗೆಯುವ ಕಾರಣ, ಮಣುವಿಗೆ ೨ ರೂಪಾಯಿನ ಪ್ರಕಾರ ತೆರಿಗೆಯನ್ನು ಹಾಕಿದರೆ ಸರಕಾರಕ್ಕೆ ತುಂಬಾ ಆದಾಯವಾಗುವದು. ಪ್ರಜೆಗಳಿಗೂ ನಷ್ಟವಿಲ್ಲ.

(೭) ಇನಾಂ ಗ್ರಾಮಗಳಲ್ಲಿರತಕ್ಕ ಈಚಲುಮರವನ್ನು ಇನಾಂದಾರರು ಇಷ್ಟವಿದ್ದರೆ ಸರಕಾರದ ಅಬ್‌ಕಾರೀ ಇಜಾರ್‌ದಾರರಿಗೆ ಗುತ್ತಿಗೆಗೆ ಕೊಡಬಹುದು. ಇಲ್ಲದಿದ್ದರೆ ತಾವೇ ಅದರಿಂದ ಹೆಂಡವನ್ನು ತೆಗಿಸಿ ಮಾರಿಸುವಂತೆ ಅಪ್ಪಣೆಯಾಗಬೇಕು.

(೮) ಕಂದಾಯವನ್ನು ಸುಗ್ಗಿಯಾದ ತರುವಾಯ ಜೂನ್ ಅಥವಾ ಜುಲೈ ತಿಂಗಳಲ್ಲಿ ವಸೂಲು ಮಾಡಿದರೆ ರೈತರಿಗೆ ಒಳ್ಳೆಯದು.

(೯) ಜನರು ಹಣವನ್ನು ಸಾಲವಾಗಿ ತೆಗೆದುಕೊಂಡು, ಸಾಹುಕಾರರಿಗೆ ಮೋಸಮಾಡ ಬೇಕೆಂಬ ತಾತ್ಪರ್ಯದಿಂದ ತಮಗೆ ಗತಿ ಇಲ್ಲವೆಂದು ಕೋರ್ಟುಗಳಲ್ಲಿ ವಾಗ್ಮೂಲ ಕೊಟ್ಟು,

ಇನ್‌ಸಾಲ್ವೆಂಟ್ ಅಂದರೆ ಗತಿಯಿಲ್ಲದವರೆನ್ನಿಸಿಕೊಳ್ಳುತ್ತಾರೆ. ಹೀಗೆ ಅವರು ದಿವಾಳಿಯಾಗುವದರಿಂದ ಸಾಹುಕಾರರಿಗೆ ನಷ್ಟವಾಗುವದು. ಆದಕಾರಣ ಈ ಇನ್‌ಸಾಲ್ವೆಂಟ್ ಪದ್ಧತಿಯನ್ನು ತಪ್ಪಿಸಬೇಕು.

(೧೦) ಸ್ವಂತಭೂಮಿಯಲ್ಲಿರತಕ್ಕ ಮರಗಳನ್ನು ಸರಕಾರದ ಲೈಸೆನ್ಸ್ ಅಥವಾ ಅಪ್ಪಣೆಯಿಲ್ಲದೆ ಕಡಿಯಕೂಡದೆಂದು ಈಗ ನಿರ್ಬಂಧವಿದೆ. ಇದನ್ನು ತಪ್ಪಿಸಿದರೆ ಬಹಳ ಒಳ್ಳೆಯದು.

(೧೧) ಹಣಸಾಲದ ಪತ್ರಕ್ಕೆ ಮೂರುವರ್ಷದ ವಾಯಿದೆ ಇದೆ. ಈ ವಾಯಿದೆಯನ್ನು ಇನ್ನೂ ಹೆಚ್ಚು ಮಾಡಿಸಬೇಕು.

(೧೨) ಗ್ರಾಮದ ಸುತ್ತಲೂ ಇರತಕ್ಕ ಬಂಜರ ಜಮೀನಿನಲ್ಲಿ ಬೆಳೆಯುವ ಹುಲ್ಲನ್ನು ಅಮಲ್‌ದಾರರು ಪ್ರತಿವರುಷವೂ ಹರಾಜುಹಾಕಿ ಗುತ್ತಿಗೆಗೆ ಕೊಡುತ್ತಾರೆ. ಗ್ರಾಮಸ್ಥರ ದನಕುರಿಗಳು ಈ ಜಮೀನಿನಲ್ಲಿ ಹೋಗಿ ಮೇಯಿದರೆ, ಗುತ್ತಿಗೆದಾರನು ಅವುಗಳನ್ನು ಹಿಡಿದು ದೊಡ್ಡಿಗೆ ಕೂಡುತ್ತಾನೆ; ಅಥವಾ ರಾಸಿಗೆ ಎರಡು ಅಥವಾ ನಾಲ್ಕಾಣೇ ಪ್ರಕಾರ ವಸೂಲು ಮಾಡುತ್ತಾನೆ. ಗುತ್ತಿಗೆದಾರನಿಗೆ ಬಹಳ ಫಾಯಿದೆಯಾಗಿ ಗ್ರಾಮಸ್ಥರಿಗೆ ಹಿಂಸೆಯಾಗಿದೆ. ಆದಕಾರಣ ಈ ಗ್ರಾಮದ ಹುಲ್ಲು ಬಂದಿಯ ಜಮೀನನ್ನು ಹರಾಜು ಹಾಕದೆ ರಾಸಿಗೆ ಒಂದು ಆಣೆಪ್ರಕಾರ ಸರಕಾರದವರೇ ರೈತರಿಂದ ವಸೂಲು ಮಾಡಿಕೊಳ್ಳುವಂತೆ ಅಪ್ಪಣೆಯಾಗಬೇಕು.

(೧೩) ಖುಷ್ಕೀ ಜಮೀನುಗಳಲ್ಲಿ ಕೊಳ ಅಥವಾ ಭಾವಿಗಳನ್ನು ತೆಗೆದು ಕಪಿಲೆಯಿಂದಾಗಲಿ ಯಾತದಿಂದಾಗಲಿ ನೀರು ಹಾಯಿಸಿ ಆ ಭೂಮಿಯಲ್ಲಿ ತರೀ ಸಾಗುವಳಿಯನ್ನು ಮಾಡಿದರೆ, ಅದಕ್ಕೆ ಸರಕಾರದವರು ನೀರು ಸರದೀಕಂದಾಯವನ್ನು ವಸೂಲು ಮಾಡುತ್ತಾರೆ. ಅವರವರೇ ತಮ್ಮ ಸ್ವಂತದ್ರವ್ಯದಿಂದ ತೋಡಿಸಿದ ಭಾವಿಗಳಿಗೆ ಇಂಥಾ ಕಂದಾಯ ಇಲ್ಲದಂತೆ ಅಪ್ಪಣೆಯಾಗಬೇಕು.

(೧೪) ಕೆರೆಗಳು ನಾಲೆಗಳು ಎನ್‌ಜಿನಿಯರ್ ಇಲಾಖೆಯವರ ಗೋಜಿಲ್ಲದೆ ಮುಲ್ಕೀ ಇಲಾಖೆಯವರ ವಶದಲ್ಲಿರುವಂತೆ ಅಪ್ಪಣೆಯಾಗಬೇಕು.

(೧೫) ಸರ್ವೇ ಇಲಾಖೆಯವರು ತರೀಜಮೀನಿನ ಮಧ್ಯೇ ದೊಡ್ಡ ದೊಡ್ಡ ಬಾಂದುಗಳೆಂಬ ಮಣ್ಣುಜಗಲಿಗಳನ್ನು ಹಾಕಿದಾರೆ. ಇದರಲ್ಲಿ ಇಲಿಗಳು ಸೇರಿಕೊಂಡು ಸುತ್ತಲೂ ಇರುವ ಪೈರನ್ನು ಹಾಳುಮಾಡುವವು. ಈ ಜಗಲಿಗಳು ಉಳಮೆ ಮುಂತಾದ್ದಕ್ಕೆ ಅಡಚಣೆಯಾಗಿದೆ. ಈ ಜಗಲಿಯನ್ನು ತೆಗೆಸಿ ಯಲ್ಲೀಕಲ್ಲುಗಳನ್ನು ಹಾಕಿಸುವಂತೆ ಅಪ್ಪಣೆಯಾಗಬೇಕು.

(೧೬) ಗತಿಗೆಟ್ಟು ಹೋಗಿರುವ ರೈತರಿಗೆ ತಕಾವಿ ಮೊಬಲಗನ್ನು ಮುಂಗಡವಾಗಿ ಕೊಟ್ಟು ಅವರು ವ್ಯವಸಾಯವನ್ನು ಮಾಡುವಂತೆ ಪ್ರೋತ್ಸಾಹಿಸಲು ಬ್ಯಾಂಕುಗಳು ಇಡಿಸುವಂತೆ ಅಪ್ಪಣೆಯಾಗಬೇಕು.

(೧೭) ಇಂಗ್ಲಿಷ್‌ನಲ್ಲಿ ಇರತಕ್ಕ ಮತ್ತು ನಮ್ಮ ಜನಗಳಿಗೆ ಉಪಯೋಗವಾದ ಕೆಲವು ಗ್ರಂಥಗಳನ್ನೂ ಶಾಸ್ತ್ರಗಳನ್ನೂ ಕನ್ನಡದಲ್ಲಿ ತರ್ಜುಮೆ ಮಾಡಿಸಬೇಕು.

(೧೮) ಬೇಚಿರಾಕಾಗಿ ಹೋಗಿರತಕ್ಕ ಗ್ರಾಮಗಳನ್ನು ಆಬಾದ್ ಮಾಡಿ ಜನರು ಅಲ್ಲಿ ಬಂದು ವಾಸಮಾಡುವಂತೆ ಸಹಾಯ ಮಾಡಬೇಕು.

(೧೯) ಒಬ್ಬ ಶ್ಯಾನುಭೋಗನಿಗೆ ಅನೇಕ ಗ್ರಾಮಗಳು ಸೇರಿದ್ದರೆ ಅವನಿಗೆ ಒಂದು ಗ್ರಾಮವನ್ನು ಉಳಿಸಿ ಮಿಕ್ಕಗ್ರಾಮಗಳಿಗೆ ಬೇರೇ ಜನರನ್ನು ನೇಮಿಸಕೂಡದು. ಎಲ್ಲಾ ಗ್ರಾಮ

ಗಳಿಗೂ ಅವನ ಹಕ್ಕನ್ನೇ ಖಾಯಂ ಮಾಡಿ ಬೇರೆಬೇರೇ ಸ್ಥಳಗಳಲ್ಲಿ ಅವನ ಗುಮಾಸ್ತರನ್ನು ಇಡುವಂತೆ ಅಪ್ಪಣೆ ಆಗಬೇಕು.

(೨೦) ತಾಲ್ಲೋಕು ಅಮಲ್‌ದಾರರು ಇರುವ ಊರಿಗೆ ೨೪ ಮೈಲೀ ಅಚೆ ಡೆಪ್ಯುಟಿ ಅಮಲ್‌ದಾರರು ಇರದಂತೆ ಅಪ್ಪಣೇ ಆಗಬೇಕು. ಡೆಪ್ಯುಟೀ ಅಮಲ್‌ದಾರರು ಕೆಲವು ಕಡೆ ಸಮೀಪವಾದ ಊರುಗಳಲ್ಲಿದಾರೆ. ಆದು ಅನಾವಶ್ಯಕ.

(೨೧) ಸೀಮೆಯಲ್ಲೆಲ್ಲಾ ಸಸ್ತೆಯು ಆಗಿರುವ ಕಾರಣ ತಾಲ್ಲೋಕು ಕಚ್ಚೇರಿಯ ಮುಲ್ಕೀ ಇಲಾಖೇ ಜನಗಳಿಗೆ ವಿಶೇಷ ಕೆಲಸವಿಲ್ಲ. ಆದಕಾರಣ ಮುಲ್ಕೀ ಶಿಬ್ಬಂದಿಯನ್ನು ಸ್ವಲ್ಪ ಕಡಮೇ ಮಾಡಬಹುದು.

(೨೨) ಯೂರಪ್ಪಿಯನ್ ಜನರು ಈ ದೇಶದಲ್ಲಿ ಈಗ ವಿಶೇಷ ಸಂಚಾರ ಮಾಡುವದಿಲ್ಲ. ಆದಕಾರಣ ಮುಖ್ಯವಾದ ಸ್ಥಳಗಳಲ್ಲಿ ವಿನಾ ಉಳಿದ ಕಡೆಯಲ್ಲಿ ಇರತಕ್ಕ ಮುಸಾಫರ ಬಂಗಲೆಗಳ ಲವಾಜಮೆಯನ್ನು ಕಮ್ಮಿಮಾಡಿ ಇವಕ್ಕೆ ಬದಲಾಗಿ ಮುಸಾಫರ ಛತ್ರಗಳನ್ನು ಏರ್ಪಡಿಸಬೇಕು.

(೨೩) ಚೀಫ್‌ಕೋರ್ಟಿನಲ್ಲಿ ಮೂರುಜನ ಜಡ್ಜಿಗಳಿರಬೇಕು ಮತ್ತು ಚೀಫ್‌ಜಡ್ಜಿಯವರು ಈ ದೇಶಮರ್ಯಾದೆಯನ್ನು ಚೆನ್ನಾಗಿ ತಿಳಿವ ಒಬ್ಬ ಹಿಂದೂ ದೊಡ್ಡಮನುಷ್ಯರಾಗಿಯೇ ಇದ್ದರೆ ಒಳ್ಳೆಯದು.

(೨೪) ಚೀಫ್‌ಕೋರ್ಟಿನಲ್ಲಿ ಆದ ಫೈಸಲ್ಮೇಲೆ ಮಹಾರಾಜರವರ ಸಭೆಯಲ್ಲಿ ಅಪ್ಪೀಲಾಗುವಂತೆ ಏರ್ಪಾಡು ಮಾಡಬೇಕು.

(೨೫) ಸರಕಾರದ ವೈದ್ಯಶಾಲೆಗೋಸ್ಕರ ಆಗುವ ಖರ್ಚಿನಲ್ಲಿ ಡಾಕ್ಟರ್, ಅಪಾತಿಕೆರಿ, ಮುಂತಾದವರ ಸಂಬಳಕ್ಕೆ ಹೆಚ್ಚು ಹಣವೂ, ಔಷಧಕ್ಕಾಗಿ ಸ್ವಲ್ಪ ಹಣವೂ ಖರ್ಚಾಗುವುದು. ಇದರಿಂದ ಬಡವರಾದ ರೋಗಿಗಳಿಗೆ ಔಷಧವು ಸಿಕ್ಕುವದು ಕಷ್ಟ. ಆದಕಾರಣ ಸಂಬಳಕ್ಕಾಗಿ ಕಮ್ಮೀ ಹಣವೂ ಔಷಧಕ್ಕಾಗಿ ಹೆಚ್ಚು ಹಣವೂ ವ್ಯಯವಾಗುವಂತೆ ಅಪ್ಪಣೆ ಆಗಬೇಕು.

(೨೬) ಒಣಗಿಹೋದ ಈಚಲುಸೋಗೆಯನ್ನು ಜನರು ತೆಗೆದುಕೊಂಡು ಚಾಪೆ, ಕುಕ್ಕೆಗಳು, ಮಾಡಿಕೊಳ್ಳುವ ಪದ್ಧತಿಯುಂಟು. ಈ ಸೋಗೆಯನ್ನು ಮುಟ್ಟಕೂಡದೆಂದು ಅಬ್ಕಾರಿ ಇಜಾರೆದಾರರು ನಿರ್ಬಂಧ ಮಾಡುತ್ತಾರೆ. ಇದರಿಂದ ಬಡವರಾದ ರೈತರಿಗೆ ಹಿಂಸೆಯಾಗಿದೆ. ಈಚಲುಮರದಿಂದ ಸತ್ತುಬಿದ್ದ ಗರಿಗಳನ್ನು ಇಜಾರೆದಾರರ ತೊಂದರೆ ಇಲ್ಲದ ಹಾಗೆ ಜನರು ತೆಗೆದುಕೊಳ್ಳುವಂತೆ ಅಪ್ಪಣೆ ಆಗಬೇಕು.

ಇವೇ ಮೊದಲಾಗಿ ಇನ್ನೂ ಅನೇಕ ಅಂಶಗಳನ್ನು ಪ್ರತಿನಿಧಿಗಳು ಸಭೆಯಲ್ಲಿ ಚರ್ಚಿಸಲು, ದಿವಾನರವರು ಇವುಗಳಲ್ಲಿ ಅನೇಕ ಸಂಗತಿಗಳಿಗೆ ಸಮಂಜಸವಾದ ಉತ್ತರಗಳನ್ನು ಕೊಟ್ಟು, ಉಳಿದ ವಿಷಯವಾಗಿ ತಾವು ಪರ್ಯಾಲೋಚಿಸುವೆವೆಂದು ಅಪ್ಪಣೇ ಕೊಡಿಸಿದರು. ಇವುಗಳ ವಿಷಯವಾಗಿ ನಾವು ಆಗಾಗ್ಗೆ ತಿಳಿಯಪಡಿಸುವೆವು. ತರುವಾಯ ಅಸಾಂ ದೇಶದಿಂದ ತರಿಸಿದ್ದ ರೇಷ್ಮೆಹುಳುವಿನ ಮಾದ್ರಿಯನ್ನೂ, ಮಾರನೇ ದಿನ ಬೆಳಿಗ್ಗೆ ಪಂಪ್ ಎಂಬ ಯಂತ್ರದಿಂದ ಮೇಲಕ್ಕೆ ನೀರನ್ನು ಎತ್ತುವ ರೀತಿಯನ್ನೂ ಪ್ರತಿನಿಧಿಗಳಿಗೆ ತೋರಿಸಿದರು. ಹೀಗೆ ನಮ್ಮ ಜನರು ಅರಿಯದ ಉಪಯುಕ್ತವಾದ ವಿಷಯಗಳನ್ನು ಅವರಿಗೆ ಆಗಾಗ್ಗೆ ತೋರಿಸುತ್ತಿದ್ದರೆ, ನಮ್ಮವರು ಇವೆಲ್ಲವನ್ನೂ ಕಲಿತುಕೊಂಡು ನಾಗರಿಕರಾಗಲು ಸಂಶಯವಿಲ್ಲ.

ಸಿ. ವಿ. ರಂಗಸ್ವಾಮಿ

ವಾತಾಪಿ ಚಾಲುಕ್ಯ ಸಾಮ್ರಾಜ್ಯದ ಆಡಳಿತ ವಿಭಾಗಗಳು ಮತ್ತು ಅವುಗಳ ಆಡಳಿತವ್ಯವಸ್ಥೆ

ಚಾಲುಕ್ಯ ಸಾಮ್ರಾಜ್ಯವು ತನ್ನ ಅತ್ಯುನ್ನತ ಶಿಖರಕ್ಕೇರಿದ್ದ ಕಾಲದಲ್ಲಿ ಉತ್ತರದಲ್ಲಿ ನರ್ಮದೆ ನದಿಯ ದಂಡೆ ಮತ್ತು ನೌಸಾರಿಯುವರೆಗೂ, ದಕ್ಷಿಣದಲ್ಲಿ ಪಲ್ಲವರಾಜ್ಯ ಮತ್ತು ನೆಲ್ಲೂರು ಜಿಲ್ಲೆಯಲ್ಲಿರುವ ನರಸರಾವ್‌ಪೇಟೆಯುವರೆಗೂ ವಿಸ್ತರಿಸಿದ್ದಿತು. ಈ ಸಾಮ್ರಾಜ್ಯದ ಅರಸರು ಪೂರ್ವ ಮತ್ತು ದಕ್ಷಿಣ ಸಮುದ್ರತೀರಗಳಿಂದಾವೃತವಾಗಿದ್ದ ಪ್ರದೇಶವನ್ನು ಆಳುತ್ತಿದ್ದರೆಂಬುದು ಅವರ ಶಾಸನದಲ್ಲಿ ಕಂಡುಬರುವ 'ತ್ರಿಸಮುದ್ರ ಮಧ್ಯವರ್ತಿ ಭುವನಮಂಡಲಾಧೀಶ್ವರ'[1] ಎಂಬ ಶಾಸನೋಕ್ತಿಯಿಂದ ವ್ಯಕ್ತವಾಗುತ್ತದೆ. ಈ ಅರಸರ ಶಾಸನಗಳು ಲಾಟ, ಆಂಧ್ರ, ಕೊಂಕಣ ವಿದರ್ಭ, ಸತಾರ, ಪುಣೆ ಮತ್ತು ಕರ್ನಾಟಕದ ಹಲವಾರು ಭಾಗಗಳಲ್ಲಿ ದೊರಕಿವೆ. ಈ ವಿವಿಧ ಭಾಗಗಳಲ್ಲಿ ದೊರಕಿರುವ ಶಾಸನಗಳಲ್ಲಿ ಭೂದಾನ (ಉಂಬಳಿ) ನೀಡಿದ ಉಲ್ಲೇಖಗಳು ಕಂಡು ಬರುತ್ತವೆ. ಈ ವಿವರಗಳಿಂದ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಚಾಲುಕ್ಯ ಅರಸರು ನಿರ್ಮಾಣ ಮಾಡಿದ ಸಾಮ್ರಾಜ್ಯದ ವಿಸ್ತಾರವು ತಿಳಿದು ಬರುತ್ತದೆ.

ಸಾಮ್ರಾಜ್ಯದ ಬೆಳವಣಿಗೆ ಮತ್ತು ಪ್ರಾಂತ ಆಡಳಿತ ವ್ಯವಸ್ಥೆಯ ಅಗತ್ಯ

ಸಾಮ್ರಾಜ್ಯದ ಬೆಳವಣಿಗೆಗೆ ಅನೇಕ ಸಂದರ್ಭಗಳು ಸಹಕಾರಿಯಾಗಿವೆ. (೧) ದಕ್ಷಿಣ ಭಾರತದ ಪಶ್ಚಿಮದಲ್ಲಿ ನಾಲ್ಕು ಆಡಳಿತ ವಿಭಾಗಗಳನ್ನೊಳಗೊಂಡಿದ್ದ ಕದಂಬ ರಾಜ್ಯವನ್ನು ಚಾಲುಕ್ಯರು ಗೆದ್ದು ತಮ್ಮ ಸಾಮ್ರಾಜ್ಯದಲ್ಲಿ ಅಳವಡಿಸಿಕೊಂಡದ್ದು. (೨) ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಿಲು ಚಾಲುಕ್ಯ ಅರಸರ ದಿಗ್ವಿಜಯ ಹಾಗೂ ಸಾಮ್ರಾಜ್ಯ ವಿಸ್ತರಣೆಯ ನೀತಿ.

ಪ್ರಾಂತ ಆಡಳಿತ ವ್ಯವಸ್ಥೆಗೆ ಈ ಕೆಳಗಿನವುಗಳು ಕಾರಣವಾದವೆಂದು ಹೇಳಬಹುದು :

1. ಚಾಲುಕ್ಯ ಅರಸರು ತಾವು ಗೆದ್ದುಕೊಂಡಿದ್ದ ಪ್ರದೇಶಗಳ ಸುವ್ಯವಸ್ಥಿತ ಮತ್ತು ಭದ್ರವಾದ ಆಡಳಿತ ಸ್ಥಾಪನೆಗಾಗಿ.

2. ಸ್ವಲ್ಪಮಟ್ಟಿಗೆ ಕೇಂದ್ರದ ಆಡಳಿತದಲ್ಲಿ ವಿಕೇಂದ್ರೀಕರಣಕ್ಕಾಗಿ.

3. ಯುದ್ಧನೀತಿಯಿಂದಾಗಿ ಸೋಲನ್ನೊಪ್ಪಿದ ಅರಸರು ಚಾಲುಕ್ಯರೊಡನೆ ಒಪ್ಪಂದ ಮಾಡಿಕೊಂಡು ಅವರ ಪ್ರಭುತ್ವವನ್ನು ಒಪ್ಪಿಕೊಂಡು ಕಪ್ಪಕಾಣಿಕೆಯನ್ನು ಸಲ್ಲಿಸುವುದು.

ಪ್ರಾಂತಗಳ ಅಧಿಕಾರಿಗಳೊಡನೆಯೂ, ಸಾಮಂತ ಅರಸರ ಮತ್ತು ಸ್ವತಂತ್ರರೆನಿಸಿದ್ದ ಮಿತ್ರರೊಡನೆಯೂ ಚಾಲುಕ್ಯ ಅರಸರು ಹೊಂದಿದ್ದ ಸಂಬಂಧವನ್ನು ಪರಿಶೀಲಿಸಿದಾಗ ಅವರ ಸಾಮ್ರಾಜ್ಯದ ಪ್ರಾಂತಾಡಳಿತವು ಉತ್ತಮ ವ್ಯವಸ್ಥೆಯಿಂದ ಕೂಡಿತ್ತೆಂಬ ಅಂಶವು ಕಂಡು ಬರುತ್ತದೆ.

ಆಡಳಿತ ವಿಭಾಗಗಳು

ಆಡಳಿತ ವಿಭಾಗಗಳಿಗೆ ವಿಷಯ, ನಾಡು, ರಾಷ್ಟ್ರ, ಮಂಡಲ ಎಂಬ ಹೆಸರುಗಳಿದ್ದವು. ಚಿಕ್ಕಪುಟ್ಟ ಗ್ರಾಮಗಳಿಗೆ ಅಥವಾ ಭಾಗಗಳಿಗೆ ಭೋಗ, ದೇಶ, ಠಾಣಾ, ಗ್ರಾಮ, ಪೇಡ ಮತ್ತು ಖಂಡ ಎಂಬ ಹೆಸರುಗಳೂ ಇದ್ದವು. ಸಂಖ್ಯಾಸೂಚಕ ಪದಗಳನ್ನೊಳಗೊಂಡ ಬನವಾಸಿ 12000 ಎಂಬ ಭಾಗಗಳು ದೊಡ್ಡ ಆಡಳಿತಭಾಗಗಳಾಗಿದ್ದವೆಂದು ಊಹಿಸಬಹುದು.

ಚಾಲುಕ್ಯರ ಶಾಸನಗಳಲ್ಲಿ 30 ವಿಷಯಗಳ, 2 ರಾಷ್ಟ್ರಗಳ, 2 ಭೋಗಗಳ ಮತ್ತು ಕೆಲವು ಅತ್ಯಂತ ಸಣ್ಣ ಭಾಗಗಳ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆ. ದೊಡ್ಡ ಪ್ರಮಾಣದ ಸುಮಾರು 105 ಚಾಲುಕ್ಯ ಶಾಸನಗಳಿಂದ ದೊರೆಯುವ ಅಂಶಗಳನ್ನು ಮತ್ತು ಅವು ಹೆಸರಿಸುವ ಭಾಗಗಳನ್ನು ಇಂದು ನಕಾಶೆಯಲ್ಲಿ ಗುರುತಿಸುವ ಪ್ರಯತ್ನದಲ್ಲಿ ಒದಗಿ ಬಂದಿರುವ ತಜ್ಞರ ಅಭಿಪ್ರಾಯಗಳನ್ನು ಆಧಾರವನ್ನಾಗಿಸಿಕೊಂಡರೆ ಚಾಲುಕ್ಯ ಸಾಮ್ರಾಜ್ಯದ ಆಡಳಿತ ಭಾಗಗಳನ್ನು ಈ ಕೆಳಕಂಡಂತೆ ಗುಂಪುಗಳನ್ನಾಗಿ ಮಾಡಬಹುದು.

ಆಡಳಿತ ವಿಭಾಗದ ಹೆಸರು	ಆಕರ	ಸ್ಥಳ ನಿರ್ದೇಶ
ಉತ್ತರ ಭಾಗವಲ್ಲಿ		
1. ದಾಹಿರಿಕ ವಿಷಯ	ಒಂದನೆ ವಿಕ್ರಮಾದಿತ್ಯನ ನೌಸಾರಿ ತಾ.ಶಾ.[2]	ನೌಸಾರಿಯ ಸುತ್ತಣ ಪ್ರದೇಶವಾದ ಕುಂದಲ್ಪ ಹಾರ
2. ಕುಂದಲಿಕಾಮುಲ ವಿಷಯ	ಒಂದನೆ ವಿಕ್ರಮಾದಿತ್ಯನ ಸೇಂದ್ರಕ ತಾ.ಶಾ.[3]	ಸೇಣಾಣಕ ಮತ್ತು ಸುತ್ತಣ ಪ್ರದೇಶ
3. ತ್ರೇಯಣಾಹಾರ ವಿಷಯ	ಒಂದನೆ ವಿಕ್ರಮಾದಿತ್ಯನ ಬಾಗುಮ್ರಾ ತಾ.ಶಾ.[4]	ಬಾರ್ದೋಲಿಯ ಸಮೀಪದ ತೇನ್
4. ಪಳಯತ್ತಾಣ ವಿಷಯ	ವಿನಯಾದಿತ್ಯನ ಜೆಜೂರಿ ತಾ.ಶಾ.[5] ಮತ್ತು ಒಂದನೆ ವಿಕ್ರಮಾದಿತ್ಯನ ಮೆಡ್‌ಲುಂಬಿ ಶಾಸನ[6]	ಇಂದಿನ ಪುಣೆಯ ಸಮೀಪದ ಫಲ್ಪನ್
5. ಅಲಕೂರು ವಿಷಯ	ವಿಜಯಾದಿತ್ಯನ ಏಲಾಪುರ ತಾ.ಶಾ.[7]	ಔರಂಗಾಬಾದ್ ಜಿಲ್ಲೆಯ ವೇರೂಳದ ಸಮೀಪ
6. ಚಿಪ್ಪಲೂನ	ಎರಡನೆ ವಿಕ್ರಮಾದಿತ್ಯನ ನರವಣ ತಾ.ಶಾ.[8]	ಸೇಂದ್ರಕ ರಾಜ್ಯದ ಚಿಪ್ಲುನ್
7. ಕಾರ್ಮಣೇಯ ವಿಷಯ	ಎರಡನೆ ವಿಕ್ರಮಾದಿತ್ಯನ ನೌಸಾರಿ ತಾ.ಶಾ.[9]	ಇಂದಿನ ಸೂರತ್ ಸುತ್ತಣಭಾಗ
8. ಕರಿವೊಡೆ ವಿಷಯ	ಎರಡನೆ ಕೀರ್ತಿವರ್ಮನ ಐನೂಲಿ ತಾ ಶಾ.[10]	ಭಾಗೀರಥಿ ನದಿಯ ಸುತ್ತಣ ಭಾಗ
9. ಮೃಗಥಣಿಕಹಾರ ವಿಷಯ	ಎರಡನೆ ಕೀರ್ತಿವರ್ಮನ ಪಟ್ಟದಕಲ್ಲು ಸ್ತಂಭ ಶಾಸನ[11]	ಗಂಗಾನದಿಯ ಉತ್ತರದಂಡೆ (ಆದರೆ ಈ ಭಾಗವು ಚಾಲುಕ್ಯ ಸಾಮ್ರಾಜ್ಯದ ಅಧೀನಕ್ಕೊಳಪಟ್ಟಿರಲಿಲ್ಲ)
10. ಅಪರೇಟಕ ವಿಷಯ	ಇಮ್ಮಡಿ ಪುಲಿಕೇಶಿಯ ಚಿಪ್ಲೂನ ತಾ.ಶಾ.[12]	ಸೇಂದ್ರಕ ವಿಭಾಗ
11. ಗೋಪರಾಷ್ಟ್ರ ವಿಷಯ	ಇಮ್ಮಡಿ ಪುಲಕೇಶಿಯ ನಿರ್ಪಾನ ತಾ.ಶಾ.[13]	ನಾಸಿಕ ಸಮೀಪದಲ್ಲಿ

ದಕ್ಷಿಣ ಭಾಗದಲ್ಲಿ

12. ಚೋಳಿಕ ವಿಷಯ	ಒಂದನೆ ವಿಕ್ರಮಾದಿತ್ಯನ ಗದ್ವಾಲ ತಾ.ಶಾ.[14]	ಕಾವೇರಿ ನದಿಯ ದಕ್ಷಿಣ ದಂಡೆಯ ಭಾಗ
13. ತುಂಡಾಕ ವಿಷಯ	ಎರಡನೆ ಕೀರ್ತಿವರ್ಮನ ವಕ್ಕಲೇರಿ ತಾ.ಶಾ.[15]	ಅಂದಿನ ಪಲ್ಲವ ರಾಜ್ಯ
14. ಎಡೆವೊಳಲ್ ವಿಷಯ	ವಿನಯಾದಿತ್ಯನ ಹರಿಹರ ತಾ.ಶಾ.[16]	ಬನವಾಸಿಯ ಈಶಾನ್ಯ ಭಾಗ
15. ವಂಗನೂರು ವಿಷಯ	ಇಮ್ಮಡಿ ವಿಕ್ರಮಾದಿತ್ಯನ ಕೊಟ್ಟೂರು ಶಾಸನ[17]	ಆಂಧ್ರ ಪ್ರದೇಶದಲ್ಲಿ
16. ಪುಂಗನೂರು ವಿಷಯ	——,,——[18]	—,,—

ಪೂರ್ವ ಭಾಗದಲ್ಲಿ

17. ಚಾಲುಕ್ಯ ವಿಷಯ	ಇಮ್ಮಡಿ ಪುಲಕೇಶಿಯ ಗಮ್ಮಯನೂರು ತಾ.ಶಾ.[19] ಮತ್ತು ಒಂದನೆ ವಿಕ್ರಮಾದಿತ್ಯನ ಕೊಲ್ಲಾಪುರ ಶಾಸನ.[20]	ಆಂಧ್ರಪ್ರದೇಶದ ಮೆಹಬೂಬ್‌ನಗರ ಜಿಲ್ಲೆ
18. ಪೆಡಕಲ್ ವಿಷಯ	ವಿನಯಾದಿತ್ಯನ ತೊಗರ್ಚೇಡು ತಾ.ಶಾ.[21]	ಹಂಪೆಯ ಸುತ್ತಣ ಭಾಗ
19. ಬೆಳ್ವೊಲ ವಿಷಯ	ಒಂದನೆಯ ವಿಕ್ರಮಾದಿತ್ಯನ ಕುರ್ತಕೋಟಿ ತಾ.ಶಾ.[22] ಮತ್ತು ಇಮ್ಮಡಿ ಕೀರ್ತಿವರ್ಮನ ಅಣ್ಣಿಗೇರಿ ಶಾಸನ.[23]	ಗದಗು ಮತ್ತು ಸುತ್ತಣ ಭಾಗ
20. ಪಾನುಂಗಲ್ ವಿಷಯ	ಇಮ್ಮಡಿ ಕೀರ್ತಿವರ್ಮನ ವಕ್ಕಲೇರಿ ತಾ.ಶಾ.[24] ಮತ್ತು ವಿನಯಾದಿತ್ಯನ ಬಳ್ಳಿಗಾವೆ ಶಾಸನ[25]	ಇಂದಿನ ಹಾನಗಲ್; ಸೋಲಾಪುರ ಜಿಲ್ಲೆಯಲ್ಲಿ ಭೀಮಾ ನದಿ ದಂಡೆಯ ಮೇಲಿನ ಭಂಡಾರಗವಿಟ್ಟಗೆ ಎಂಬ ಗ್ರಾಮವನ್ನು ಹೆಸರಿಸುತ್ತದೆ. ಬಳ್ಳಿಗಾವೆ, ಬಲಿಪುರ ಮತ್ತು ಶಿವಮೊಗ್ಗ ಜಿಲ್ಲೆಯ ಎಲೇಹಳ್ಳಿ
21. ಉಚ್ಚಶೃಂಗ ವಿಷಯ	ಅಭಿನವಾದಿತ್ಯನ ನೆಲ್ಕುಂಟ ತಾ.ಶಾ.[26]	ಬಳ್ಳಾರಿಯ ಸಮೀಪ

22. ನಳವಾಡಿ ವಿಷಯ	ಒಂದನೆ ವಿಕ್ರಮಾದಿತ್ಯನ ಕರ್ನೂಲ ತಾ.ಶಾ.[27] ಮತ್ತು ವಿನಯಾದಿತ್ಯನ ದಯ್ಯಮದಿನ್ನೆ ತಾ.ಶಾ.[28]	ಇಂದಿನ ಬಳ್ಳಾರಿ ಮತ್ತು ಕರ್ನೂಲ ಜಿಲ್ಲೆಗಳು.
23. ಕುಂದಿಜ್ಜ ವಿಷಯ	ವಿನಯಾದಿತ್ಯನ ಕೂಟ ಶಾಸನ[29]	ವಗಡಿಗೆ 70ರ ಸಮೀಪ
24. ತೋರವಾರ ವಿಷಯ	ಒಂದನೆ ವಿಕ್ರಮಾದಿತ್ಯನ ಕೊಂಡಪಲ್ಲಿ ಶಿಲಾ ಶಾಸನ.[30]	ಇಂದಿನ ಗುತ್ತಿಯ ಪ್ರದೇಶ
25. ಕಣ್ಣ ವಿಷಯ	ಒಂದನೆ ಪುಲಕೇಶಿಯ ಹೈದರಾಬಾದ್ ತಾ.ಶಾ.[31] (ತೇದಿಯಿಲ್ಲದ ಕೂಟಶಾಸನ)	ಇಂದಿನ ಬಿಜಾಪುರದ ಸುತ್ತಣ ಭಾಗ
26. ಬಾವಿಹಾರ ವಿಷಯ	ವಿಜಯಾದಿತ್ಯನ ನಾಯಲೂರು ತಾ.ಶಾ.[32]	ಆಂಧ್ರಪ್ರದೇಶದಲ್ಲಿ
ಪಶ್ಚಿಮ ಭಾಗದಲ್ಲಿ		
27. ರೇವತಿ ದ್ವೀಪ ಮತ್ತು ನಾಲ್ಕು ವಿಷಯಗಳು	ಮಂಗಲೇಶನ ಗೋವಾ ತಾ.ಶಾ.[33]	ರತ್ನಗಿರಿ ಜಿಲ್ಲೆಯ ಸಮೀಪದಲ್ಲಿರುವ ಇಂದಿನ ರೇಡಿ [ಲಾಟ ಪ್ರದೇಶವು ಕೆಲಕಾಲ ನಾಲ್ಕು ವಿಷಯಗಳಲ್ಲಿ ಒಂದಾಗಿದ್ದಿತು]
28. ಖೇಟಾಹಾರ ವಿಷಯ	——,,——[34]	ಇಂದಿನ ಖೇಡ್ ಜಿಲ್ಲೆಯ ಅದೇ ಹೆಸರಿನ ತಾಲೂಕು
29. ಕುಹುಂಡಿ ವಿಷಯ	ಒಂದನೆ ಕೀರ್ತಿವರ್ಮನ ಕೂಟ ಶಾಸನ.[35]	ಸೇಂದ್ರಕ ರಾಜ್ಯ ಅಥವಾ ರಟ್ಟರಾಜ್ಯದ ಒಂದು ಭಾಗ. ಇಂದಿನ ಬೆಳಗಾವಿ ಭಾಗ
30. ಕೊಂಕಣ ವಿಷಯ	ಒಂದನೆ ವಿಕ್ರಮಾದಿತ್ಯನ ಸಂಜಾನ ತಾ.ಶಾ[37] ಮತ್ತು ವಿಜಯಾದಿತ್ಯನ ನೆರೂರು ತಾ.ಶಾ.	ಕುಲಾಬ ಜಿಲ್ಲೆಯ ಪಿಸುಕ ಅಥವಾ ಪೇಣ ಮತ್ತು ಅಪರಾಂತ ಅಥವಾ ಕೊಂಕಣದ ನೇರೂರು
31. ತಾಲಿತಟಾಹಾರ ವಿಷಯ	ವಿಜಯಾದಿತ್ಯನ ರಾಯಗಡ ತಾ.ಶಾ.[38]	ಕೊಂಕಣದ ಹತ್ತಿರ

32. ಇರಿದಿಗೆ ವಿಷಯ	ವಿಜಯಾದಿತ್ಯನ ನೆರೂರು ತಾ.ಶಾ.[39]	ಸಾಮಂತವಾಡಿ ಸಂಸ್ಥಾನದ ರತ್ನಗಿರಿ ಜಿಲ್ಲೆಯಲ್ಲಿ—ಅಹಮದ್‌ನಗರ ಜಿಲ್ಲೆಯ ರಾಸೀನ-ರೇಸಿನ್ ಈ ಭಾಗದೊಡನೆ ಸೇರಿತ್ತು
33. ರಾಜಧಾನಿಯ ಸುತ್ತಣ ಪ್ರಾಂತ	ಎರಡನೆ ಪುಲಕೇಶಿಯ ನೆರೂರು ತಾ.ಶಾ.[40]	ವಾತಾಪಿ (ಬಾದಾಮಿ) ಮತ್ತು ಅದರ ಸುತ್ತಣ ಭಾಗ
ಇತರ ಭಾಗಗಳು		
ಮಂಡಲ ಎಂಬ ಪದದಿಂದ ಕೊನೆಗೊಳ್ಳುವ :		
ಲಾಟ ಮಂಡಲ	ಒಂದನೆ ವಿಕ್ರಮಾದಿತ್ಯನ ನವಸಾರಿ ತಾ.ಶಾ.[41] ಮತ್ತು ವಿಜಯರಾಜನ ಕೈರಾ ತಾ.ಶಾ.	ದಕ್ಷಿಣ ಗುಜರಾತ್
ವೆಂಗಿ ಮಂಡಲ	ಇಮ್ಮಡಿ ಪುಲಕೇಶಿಯ ಕೊಪ್ಪರಂ ತಾ.ಶಾ.[42]	ಆಂಧ್ರಪ್ರದೇಶ
ವನವಾಸಿ ಮಂಡಲ	ವಿನಯಾದಿತ್ಯನ ಹರಿಹರ ತಾ.ಶಾ.[43] ಮತ್ತು ಸೊರಬ ತಾ.ಶಾ.	ಇಂದಿನ ಬನವಾಸಿ ಸುತ್ತಣ ಭಾಗ
ರಾಷ್ಟ್ರ ಎಂಬ ಪದದಿಂದ ಕೊನೆಗೊಳ್ಳುವ :		
ಕರ್ಮರಾಷ್ಟ್ರ [ಏರಿ ವಿಷಯ/ಏರಿ ನಾಡು]	ಒಂದನೆ ಪುಲಕೇಶಿಯ ಕೊಪ್ಪರಂ ತಾ.ಶಾ.[44]	ಗುಂಟೂರು ಜಿಲ್ಲೆಯ ನರಸರಾವ್‌ಪೇಟ ತಾಲೂಕು
ಗೋಪರಾಷ್ಟ್ರ	ಒಂದನೆ ಪುಲಕೇಶಿಯ ನಿರ್ಪಾನ ತಾ.ಶಾ.[45]	ನಾಸಿಕ್ ಜಿಲ್ಲೆಯ ಒಂದು ಭಾಗ
ಭೋಗ ಎಂಬ ಪದದಿಂದ ಅಂತ್ಯವಾಗುವ :		
ಶ್ರೀನಿಲಯಭೋಗ	ಒಂದನೆ ಪುಲಕೇಶಿಯ ಸತಾರೆ ತಾ.ಶಾ.[46]	

ಎಡೆವೊಳಲ್‌ಭೋಗ	ವಿನಯಾದಿತ್ಯನ ಸೊರಬ ತಾ.ಶಾ.[47]	ಬನವಾಸಿ ಪ್ರಾಂತ
ನಾಲ್/ನಾಡ ಎಂಬ ಪದದಿಂದ ಅಂತ್ಯವಾಗುವ :		
ನಾಯರಖಂಡ—70	ವಿನಯಾದಿತ್ಯನ ಸೊರಬ ತಾ.ಶಾ.[48]	ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು.
ದೇಶ ಎಂಬ ಪದದಿಂದ ಅಂತ್ಯವಾಗುವ :		
ಖೇಟಾಹಾರ ದೇಶ	ಎರಡನೆ ಪುಲಕೇಶಿಯ ಗೋವಾ ತಾ ಶಾ.[49]	
ಭಲ್ಲುಂಕಿ ದೇಶ	ಜಮುಲ್‌ಗಾಂವ್ ಶಾಸನ[49](a)	ಇಂದಿನ ಔರಂಗಾಬಾದ್ ಜಿಲ್ಲೆ
ನಗರ ಎಂಬ ಪದದಿಂದ ಅಂತ್ಯವಾಗುವ :		
ರಾಸೀನ ನಗರ	ವಿಜಯಾದಿತ್ಯನ ನೆರೂರು ತಾ.ಶಾ.[50] ಮತ್ತು ಮೊರಬ್ ಶಾಸನ.	ರಾಸೀನಪುರ ಮತ್ತು ಅಹಮದ್‌ನಗರ ಜಿಲ್ಲೆಯ ಸುತ್ತಣ ಭಾಗ
ಪುಲಿಕರ ನಗರ	ಎರಡನೆ ವಿಕ್ರಮಾದಿತ್ಯನ ಸ್ತಂಭಶಾಸನ, ಲಕ್ಷ್ಮೇಶ್ವರ	ಧಾರವಾಡ ಜಿಲ್ಲೆಯಲ್ಲಿರುವ ಇಂದಿನ ಲಕ್ಷ್ಮೇಶ್ವರ
ಗುರುತು ಸಿಗಲಾರದ ಸ್ಥಳಗಳು :		
ಬೆಣರಾ, ಧೂಲಿಪುರ, ಅಗರಿಯಪುರ ಮತ್ತು ಕೃಷ್ಣಾಪುರ.	ಪುಲಕೇಶಿಯ ಯಕ್ಕೇರಿ ಬಂಡೆಗಲ್ಲು ಶಾಸನ.[51]	

ಪ್ರಾದೇಶಿಕ ಹೆಸರಿನ ಅಂತ್ಯದಲ್ಲಿ ಸಂಖ್ಯಾಸೂಚಕ ಪದಗಳ ಬಳಕೆ :

ಆಡಳಿತ ವಿಭಾಗಗಳನ್ನು ಸಂಖ್ಯಾಸೂಚಕ ಪದಗಳಿಂದ ಉಲ್ಲೇಖಿಸುವ ಪದ್ಧತಿಯು ಚಾಲುಕ್ಯರ ಕಾಲದಲ್ಲಿಯೂ ಮುಂದುವರಿಯಿತು. ಬೆಳ್ವೊಲ 300 ಮತ್ತು ಅದರ ಪುಟ್ಟ ಭಾಗವೆನಿಸಿದ್ದ ಕುಕನೂರು[53] ಚಾಲುಕ್ಯ ಶಾಸನವೊಂದರಲ್ಲಿ ಹೇಳಲ್ಪಟ್ಟಿದೆ. ಚಾಲುಕ್ಯರ ಕಾಲದಲ್ಲಿಯೇ ಆಳಿದ ಇಂದ್ರ ಎಂಬುವನ ಶಾಸನದಲ್ಲಿ ಬನವಾಸಿ–12000ದ ಉಲ್ಲೇಖವಿದೆ. ಈ ಅರಸನ ಹೆಸರು ಕ್ರಿ.ಶ. 870ರ ವೀರಗಲ್ಲು[53] ಶಾಸನವೊಂದರಲ್ಲಿಯೂ ಉಲ್ಲೇಖಿಸಲ್ಪಟ್ಟಿದೆ. ಇದರಂತೆಯೇ ಕರಹಾಟ 4000[54]ದ ಉಲ್ಲೇಖವೂ ದೊರೆಯುತ್ತದೆ. ಇಮ್ಮಡಿ ಪುಲಕೇಶಿಯು 99000[55] ಗ್ರಾಮಗಳನ್ನೊಳಗೊಂಡ ಮಹಾರಾಷ್ಟ್ರದ ಏಕೈಕ ಪ್ರಭುವಾದನೆಂದು ಐಹೊಳೆ ಶಾಸನವು ತಿಳಿಸುತ್ತದೆ. ನಾಗರಖಂಡ–70 ವಿನಯಾದಿತ್ಯನ ಆಳ್ವಿಕೆಗೆ ಒಳಪಟ್ಟಿತ್ತೆಂದು ಸೊರಬ ಶಾಸನದಿಂದ ತಿಳಿದುಬರುತ್ತದೆ. ಇದರಂತೆ ವಿನಯಾದಿತ್ಯನ ಬಳ್ಳಿಗಾವೆ ಶಾಸನವು ಆತನು ನಾಯರಖಂಡ–70 ಮತ್ತು ಜಿಡಗೂರು ಭಾಗವನ್ನಾಳುತ್ತಿದ್ದನೆಂದು ಹೇಳುವುದಲ್ಲದೆ ಎರಡುವರ್ನಾಲ್ಕೆ ಎಂದೂ ತಿಳಿಸುತ್ತದೆ. ಅಂದರೆ ಆತನು ನಾಯರಖಂಡ–70[56] ಜಿಡಗೂರು – ಈ ಎರಡೂ ಭಾಗಗಳನ್ನು ಆಳುತ್ತಿದ್ದನೆಂಬುದು ಸುಸ್ಪಷ್ಟವಾಗುತ್ತದೆ. ವಿಜಯಾದಿತ್ಯನ ನಕಲಿ ಶಾಸನವೊಂದು ಕುಂಡಿಚ್ಚ 1000 ವಿಷಯದ ಒಂದು ಸಣ್ಣ ಭಾಗವಾದ ಪಗಡಿಗೆ–70ನ್ನು ಹೆಸರಿಸುತ್ತದೆ.

ಪ್ರಾಂತಗಳ ಆಡಳಿತ ವ್ಯವಸ್ಥೆ

ಚಾಲುಕ್ಯ ಸಾಮ್ರಾಜ್ಯದ ಪ್ರಾಂತಗಳ ಆಡಳಿತವು ರಾಜಪ್ರತಿನಿಧಿ (governor), ಸಾಮಂತ ಅಥವಾ ಸ್ವಾಯತ್ತಾಧಿಕಾರವುಳ್ಳ ಮಿತ್ರರಾಜರ (autonomous allies) ಅಧೀನಕ್ಕೆ ಒಳಪಟ್ಟಿತ್ತು. ಕೆಲವು ಶಾಸನಗಳು ಮಹಾಮಂಡಲಿಕ[57] ಅಥವಾ ಮಂಡಲಾಧಿಪತಿಯ ಹೆಸರನ್ನು ಉಲ್ಲೇಖಿಸುತ್ತವೆ. ಅವರ ಸ್ಥಾನವು ರಾಜಪ್ರತಿನಿಧಿಯ ಸ್ಥಾನಕ್ಕೆ ಸಮಾನವೆನಿಸಿತ್ತು. ಅವರನ್ನು 'ವಿಷಯಪತಿ' ಎಂತಲೂ ಕರೆಯುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರು ಅರಸುಮನೆತನಕ್ಕೆ ಸೇರಿದವರಾಗಿದ್ದರು. ಅವರು ಅರಸನ ವಿಶ್ವಾಸಕ್ಕೆ ಪಾತ್ರರಾಗಿದ್ದುದರಿಂದ ಆ ಸ್ಥಾನಕ್ಕೆ ನೇಮಿಸಲಾಗುತ್ತಿತ್ತು. ಕೆಲವು ವಿಷಯಪತಿಗಳು ತಮ್ಮ ಕಾರ್ಯಾಲಯಗಳನ್ನು ಪಟ್ಟಣ ಅಥವಾ ಅಧಿಷ್ಠಾನಗಳಲ್ಲಿ ಸ್ಥಾಪಿಸಿಕೊಂಡಿದ್ದರು. ಆಡಳಿತದಲ್ಲಿ ನೆರವಾಗಲು ಅವರಿಗೆ ಅಧೀನ ಅಧಿಕಾರಿಗಳೂ ಗಣಕಾಧಿಕಾರಿಗಳೂ ಇರುತ್ತಿದ್ದರು.

ಹೀಗೆ ಅರಸನಿಂದ ನೇಮಕಗೊಳ್ಳುತ್ತಿದ್ದ ಪ್ರಾಂತ ಪ್ರತಿನಿಧಿಗಳು ಅರಸನ ಪರವಾಗಿ ಆ ಪ್ರಾಂತದಲ್ಲಿ ಆಡಳಿತ ನಡೆಸುತ್ತಿದ್ದರು. ಆದರೂ ಚಾಲುಕ್ಯ ಸಾಮ್ರಾಜ್ಯವು ಅಂದಿನ ಕಾಲಕ್ಕೆ ಅರ್ವಾಚೀನ ಪ್ರಾಂತ್ಯಾಡಳಿತ ಪದ್ಧತಿಯನ್ನನುಸರಿಸಿ ಕ್ರಮವರಿತು ವ್ಯವಸ್ಥೆಗೊಳ್ಳುವಂತಹ ವ್ಯವಸ್ಥೆಯಾಗಿರಲಿಲ್ಲ. ಯಾವುದಾದರೊಂದು ಭಾಗವನ್ನು ಆಡಳಿತ ಭಾಗವೆಂದು ನಿರ್ಧರಿಸುವ ಮುನ್ನ ಅರಸನು ಆ ಭಾಗವು ತನ್ನ ಸಾಮ್ರಾಜ್ಯಕ್ಕೆ ಸೇರಿದ ಬಗೆ, ಆ ಭಾಗದ ರಾಜನಿಗೂ ಅರಸನಿಗೂ ಇರುವ ಸಂಬಂಧ, ಸಾಮ್ರಾಜ್ಯ ರಕ್ಷಣೆಯ ದೃಷ್ಟಿಯಿಂದ ಆ ಭಾಗವು ಆಯಕಟ್ಟಿನ ಪ್ರದೇಶವೇ ಅಥವಾ ಇಲ್ಲವೇ ಮತ್ತು ರಾಜನೀತಿ ನಿಯಮಗಳಿಗೂ, ಸೈನಿಕ ಅನುಕೂಲತೆಗಳಿಗೂ ಸರಿಹೊಂದುವುದೋ ಇಲ್ಲವೋ ಎಂಬ ಅಂಶಗಳನ್ನು ಪರಿಗಣಿಸುವ ಪದ್ಧತಿ ಇತ್ತು.

ಎ. ಪ್ರಾಂತಾಧಿಪತಿ (Governor)

ರಣರಾಗನ ಕಾಲದಲ್ಲಿ :

ರುದ್ರನೀಲ ಸೇಂದ್ರಕ ವಂಶಕ್ಕೆ ಸೇರಿದ ಸೇಂದ್ರಕ ರಾಜ್ಯದ ಆಡಳಿತಕ್ಕೊಳಪಟ್ಟಿದ್ದ

ಸಾಮಿಯರ ಎಂಬುವನು ರಣರಾಗನ ಪರವಾಗಿ ಕುಹುಂಡಿ ವಿಷಯವನ್ನಾಳುತ್ತಿದ್ದನೆಂದು ಚಿಪ್ಪಲೂನ ತಾಮ್ರ ಶಾಸನವು[58] ತಿಳಿಸುತ್ತದೆ.

ಮಂಗಲೇಶನ ಕಾಲದಲ್ಲಿ :

ರೇವತಿ ದ್ವೀಪವನ್ನು[59] ತನ್ನ ಪರವಾಗಿ ಆಳಲು ಮಂಗಲೇಶನು ತನ್ನ ಬಂಧುವಾಗಿದ್ದ ಸ್ವಾಮಿರಾಜನೆಂಬುವನು ರಾಜ್ಯನಿಷ್ಠೆಯನ್ನು ಕಳೆದುಕೊಂಡದ್ದರಿಂದ, ಅತನ ಸ್ಥಾನದಲ್ಲಿ ಧ್ರುವರಾಜ ಇಂದ್ರವರ್ಮನೆಂಬುವನನ್ನು ನೇಮಿಸಿದನು.

ಇಮ್ಮಡಿ ಪುಲಕೇಶಿಯ ಕಾಲದಲ್ಲಿ :

ಬಪ್ಪುರ ವಂಶಕ್ಕೆ ಸೇರಿದ ಸತ್ಯಾಶ್ರಯ ಧ್ರುವರಾಜ ಇಂದ್ರವರ್ಮನು ರೇವತಿ ದ್ವೀಪದ ನಾಲ್ಕು ವಿಷಯಗಳನ್ನು ಸಾಮಂತನಾಗಿ (ಮಾಂಡಲಿಕನಾಗಿ) ಆಳುತ್ತಿದ್ದನೆಂದು ಗೋವೆಯ ತಾ.ಶಾ. ತಿಳಿಸುತ್ತದೆ. ಈ ಭಾಗವು ಪುಲಕೇಶಿಯ ಆಳ್ವಿಕೆಯ ಪೂರ್ವದಲ್ಲಿ ಅಂದರೆ ಮಂಗಲೇಶ, ಕೀರ್ತಿವರ್ಮರ[60] ಕಾಲದಲ್ಲಿ ಚಾಲುಕ್ಯ ವಂಶದ ರಾಜಪ್ರತಿನಿಧಿಯ ಆಡಳಿತಕ್ಕೊಳಪಟ್ಟಿತ್ತು.

ಒಂದನೆ ವಿಕ್ರಮಾದಿತ್ಯನ ಕಾಲದಲ್ಲಿ :

ಕುರ್ತಕುಂಟಿ (ಇಂದಿನ ಕುರ್ತಕೋಟಿ)ಯನ್ನು ಲೋಕೇತಿನಿಮ್ಮಡಿ ಎಂಬ ಅಧಿಕಾರಿಯು ಆಳುತ್ತಿದ್ದನೆಂದು ಕುರ್ತಕೋಟಿ ತಾ. ಶಾ. 61 ತಿಳಿಸುತ್ತದೆ. ಈ ಅಂಶವನ್ನು ಗದಗ ತಾಲೂಕಿನ ಕುರ್ತಕೋಟಿಯಲ್ಲಿರುವ ಕಲ್ಮೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಶಿಲಾಶಾಸನವು ಪುಷ್ಟೀಕರಿಸುತ್ತದೆ. ಈ ಶಾಸನವು ವಿನಯಾದಿತ್ಯನ ಆಳ್ವಿಕೆಯ ಕಾಲದ್ದಾಗಿದ್ದು ಕುರ್ತಕುಂಟಿಯನ್ನು ಲೋಕೇತಿನಿಮ್ಮಡಿಯು ಆಳುತ್ತಿದ್ದನೆಂದು ಹೇಳುತ್ತದೆ. ಕುರ್ತಕೋಟಿಯಲ್ಲಿ ದೊಡ್ಡ ಪ್ರಮಾಣದ ಒಂದು ದೇವಾಲಯವನ್ನು ನಿರ್ಮಿಸಿ ಅದಕ್ಕೆ ದತ್ತಿಯಾಗಿ ಭೂದಾನ ಮಾಡಿದ ಮುಪ್ಪಿನ ಎಂಬಾತನ ಹೆಸರನ್ನು ಮತ್ತು ಅದರ ಕಾರ್ಯವನ್ನು ಉಲ್ಲೇಖಿಸುತ್ತದೆ.

ಬಿ. ಸಾಮಂತ ರಾಜರು

ಯುದ್ಧನೀತಿಯ ಪರಿಣಾಮವಾಗಿ ಗೆಲ್ಲಲ್ಪಟ್ಟ ಅಥವಾ ಮೈತ್ರಿ ಒಪ್ಪಂದವೇರ್ಪಟ್ಟಿದ್ದ ಪ್ರದೇಶಗಳ ಆಡಳಿತವನ್ನು ಸಾಮಂತರಿಗೆ ವಹಿಸಿಕೊಡಲಾಗುತ್ತಿತ್ತು. ಅವರನ್ನು 'ಮಾಂಡಲಿಕ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಕೆಲವು ಸಾಮಂತರನ್ನು 'ಮಹಾಸಾಮಂತ' ಎಂದೂ ಕರೆಯಲಾಗುತ್ತಿತ್ತು. ಅವರು ತಮ್ಮ ಕಕ್ಷೆಯಲ್ಲಿ ಬರುವ ಪ್ರಮುಖ ನಾಯಕರನ್ನು ತಮ್ಮ ನಿಯಂತ್ರಣಕ್ಕೊಳಪಡಿಸಿಕೊಳ್ಳುವುದು, ಆಡಳಿತ ಭಾಗದ ಮೇಲ್ವಿಚಾರಣೆ ಮುಂತಾದ ಕಾರ್ಯಗಳನ್ನು ಹೊಂದಿರುತ್ತಿದ್ದರು. ಸಾಮಾನ್ಯವಾಗಿ ಅವರ ನೇಮಕವು ವಂಶಾನುಕ್ರಮವಾಗಿ ನಡೆದು ಬಂದಿತ್ತು. ಅವರು ಅರಸನಿಗೆ ಅಗತ್ಯ ಬಿದ್ದಾಗ ಸೈನ್ಯಸಹಾಯವನ್ನು ಸಲ್ಲಿಸಬೇಕಿತ್ತು. ಇಂತಹ ಸಾಮಂತರನ್ನೇ ಮುಂದೆ 'ಮಹಾಮಂಡಲೇಶ್ವರ'ರೆಂದು ಕರೆಯುವುದು ರೂಢಿಗೆ ಬಂದಿತು. ಕೊಕ್ಕಲಿ ವಿಕ್ರಮಾದಿತ್ಯನ ಅಧೀನದಲ್ಲಿ ಕುಂದಗೋಳದಿಂದ ಮುಳಗುಂದ ಪ್ರಾಂತವನ್ನು ದೋಸಿರಾಜ[62] ಎಂಬುವನು ಆಳುತ್ತಿದ್ದನು. ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಯಲ್ಲಿನ ಸ್ತಂಭದ ಉತ್ತರ ಮುಖಕ್ಕೆ ಹೊಂದಿಕೊಂಡಂತಿರುವ ಶಾಸನವೊಂದು ಪುಟ್ಟಮಾಣಿಗ[63] ಎಂಬಾತನು ನೀಡಿದ ಭೂದಾನವನ್ನು ಉಲ್ಲೇಖಿಸುತ್ತದೆ ಮತ್ತು ಈ ಶಾಸನವು ಎರ್ರೆ ಎಂಬ ಮಹಾಸಾಮಂತನ

ಹೆಸರನ್ನು ಹೇಳುತ್ತದೆ. ಈ ದೇವಾಲಯದ ಕಂಬಕ್ಕೆ ಸಂಬಂಧಿಸಿದಂತೆ ಶಾಸನವೊಂದನ್ನು ಎರ್ರೆಯು ಹೊರಡಿಸಿದನೆಂದೂ ಹೇಳುತ್ತದೆ. ಈ ಶಾಸನವು 1,066ರ ಶ್ರೇಣಿಗೆ ಸಂಬಂಧಿಸಿದುದಾಗಿದೆ.

ಸಾಮಂತನಿಗೆ ಆತನು ನೇಮಕಗೊಂಡನಂತರ ಅಥವಾ ಅವನ ರಾಜ್ಯವನ್ನು ಗೆದ್ದುಕೊಂಡು ಪುನಃ ಅವನ ಆಳ್ವಿಕೆಗೆ ಒಪ್ಪಿಸಿದ ನಂತರ ಅವನಿಗೆ ತನ್ನ ರಾಜ್ಯದ ಒಳಾಡಳಿತದಲ್ಲಿ ಸಂಪೂರ್ಣ ಸ್ವಾಯತ್ತತೆಯನ್ನು ಕೊಡಲಾಗಿತ್ತು. ಆ ರಾಜ್ಯದಲ್ಲಿ ಅರಸನು ತನಗೂ ಸಾಮಂತನಿಗೂ ನಡುವೆ ಕೆಲವು ಸಹಾಯಕ ಅಧಿಕಾರಿಗಳನ್ನು ನೇಮಿಸುತ್ತಿದ್ದನು. ಇಂತಹ ಅಧಿಕಾರಿಗಳನ್ನು ಇಂದಿನ ರಾಜಕೀಯ ಪ್ರತಿನಿಧಿಗಳೆಂದು ಕರೆಯಬಹುದು. ಅರಸು ಮನೆತನದ ಬಾಂಧವ್ಯದಿಂದ ನೇಮಕಗೊಂಡಿದ್ದ ಪ್ರಾಂತಾಧಿಪತಿಗಳು ಅರಸನಿಗೆ ಅಲ್ಲಿನ ಸುಭದ್ರ ಹಾಗೂ ಸುರಕ್ಷಿತ ಆಡಳಿತದ ಬಗೆಗೆ ಪೂರ್ಣ ಆಶ್ವಾಸನೆಯನ್ನು ನೀಡುತ್ತಿದ್ದರು. ಸಾಮಂತರು ಅರಸನಿಗೆ ರಾಜನಿಷ್ಠೆಯಿಂದಲೂ ಮತ್ತು ಶತ್ರುಗಳ ದಾಳಿಯಿಂದ ಶಾಂತಿಗೆ ಭಂಗವುಂಟಾದಾಗ ಅಗತ್ಯವಾಗಿ ಬೇಕಿದ್ದ ಸೈನಿಕ ನೆರವನ್ನು ಕೊಡಬೇಕಿತ್ತು. ರಾಜ್ಯದ ಗಡಿರಕ್ಷಣೆ, ಆಕ್ರಮಣಕಾರರನ್ನು ಹೊರದೂಡಿಸುವುದು ಮುಂತಾದ ನಿಷ್ಠ ಕಾರ್ಯಗಳನ್ನು ನೆರವೇರಿಸುವುದೇ ಕೇಂದ್ರ ಸರಕಾರದ ವಿಶ್ವಾಸಾರ್ಹ ಸಾಮಂತರು ನಡೆಸಬೇಕಾದ ಕರ್ತವ್ಯವಾಗಿತ್ತು.

ಚಾಲುಕ್ಯ ಅರಸರ ಸಾಮಂತರಲ್ಲಿ ಸೇಂದ್ರಕರು, ಆಲುಪರು, ಕದಂಬರು, ನಳರು ಬೋಧನದ ಚಾಲುಕ್ಯರನ್ನು ಹೇಳಬಹುದು. ಇವರಲ್ಲಿ ಸೇಂದ್ರಕರು ಮತ್ತು ಆಲುಪರು ಅತ್ಯಂತ ಪ್ರಮುಖರಾದ ಸಾಮಂತರಾಗಿದ್ದರು. ಅರಸನಷ್ಟೇ ಸಮಾನ ಸ್ಥಾನ ಗೌರವದಿಂದ ಇವರನ್ನು ನೋಡಲಾಗುತ್ತಿತ್ತು. ಭೋಜರು, ಅಭೀರರು ಮತ್ತು ಬೋಧನದ ಚಾಲುಕ್ಯರು ಸಾಮಂತರಾಗಿದ್ದರೆನ್ನಲು ಸಾಕಷ್ಟು ಆಧಾರಗಳಿಲ್ಲ.

ಕೆಲವು ಆಡಳಿತ ಭಾಗಗಳು ಅರಸನ ಬಂಧುವರ್ಗದವರ ಅಧೀನದಲ್ಲಿದ್ದವು. ಧಾರಾಶ್ರಯ ಜಯಸಿಂಹನು ಲಾಟ ಪ್ರದೇಶವನ್ನೂ ಚಂದ್ರಾದಿತ್ಯನು ಸಾಮಂತವಾಡಿ ಪ್ರದೇಶವನ್ನೂ ಆದಿತ್ಯನು ಗುಂಟೂರು ಭಾಗವನ್ನೂ ಆಳುತ್ತಿದ್ದರೆಂಬ ಸಂಗತಿಯನ್ನು ಚಾಲುಕ್ಯರ ಶಾಸನಗಳಿಂದ ಗ್ರಹಿಸಬಹುದಾಗಿದೆ. ಪ್ರಾಯಶಃ ಯುವರಾಜ ವಿಕ್ರಮಾದಿತ್ಯನು (ಮುಂದೆ ಒಂದನೆ ವಿಕ್ರಮಾದಿತ್ಯ) ತನ್ನ ತಂದೆಯಾದ ಇಮ್ಮಡಿಪುಲಕೇಶಿಯೊಡನೆ ರಾಜ್ಯಾಡಳಿತದಲ್ಲಿ ನೆರವಾಗಿರಬೇಕು.

ಸಿ. ಸ್ವಾಯತ್ತಾಧಿಕಾರವುಳ್ಳ ಮಿತ್ರರ ಆಡಳಿತ ಭಾಗಗಳು

ಗುಜರಾತಿನ ಚಾಲುಕ್ಯರು ವೆಂಗಿಯ ಚಾಲುಕ್ಯರು ಅರಸು ಮನೆತನದ ಬಂಧುವರ್ಗಕ್ಕೆ ಸೇರಿದವರಾದ್ದರಿಂದ ಅವರಿಗೆ ಆಡಳಿತದಲ್ಲಿ ಸ್ವಾಯತ್ತತೆಯನ್ನು ನೀಡಲಾಗಿತ್ತು.

ದುರ್ಗ :

ಸೈನಿಕ ಕಾರ್ಯಾಚರಣೆಯ ಅನುಕೂಲದಿಂದಲೋ ಅಥವಾ ಆಯಕಟ್ಟಿನ ಪ್ರದೇಶಗಳಾಗಿಯೋ ಇದ್ದ ಪ್ರದೇಶಗಳನ್ನು ಪ್ರತ್ಯೇಕ ಆಡಳಿತ ಭಾಗವನ್ನಾಗಿ (ದುರ್ಗ) ಏರ್ಪಡಿಸಿ ಅದರ ಆಡಳಿತವನ್ನು ವಿಶ್ವಾಸಾರ್ಹ ಅಧಿಕಾರಿಗಳಿಗೆ ವಹಿಸಿಕೊಡಲಾಗಿತ್ತು. ಚಾಲುಕ್ಯರಿಗೆ ದುರ್ಗಗಳ ರಚನೆ ತಿಳಿದಿತ್ತು. ಐಹೊಳೆ ಶಾಸನವು ಬಾದಾಮಿಯನ್ನು ಗಿರಿದುರ್ಗವೆಂದು ಉಲ್ಲೇಖಿಸುತ್ತದೆ.

ಚಾಲುಕ್ಯ ಅರಸರಂತೆಯೇ ಪ್ರಾಂತ ಅಥವಾ ಪ್ರಾದೇಶಿಕ ಅಧಿಪತಿಗಳು ದುಷ್ಟನಿಗ್ರಹ ಮತ್ತು ಶಿಷ್ಟಪರಿಪಾಲನಾ ಕಾರ್ಯವನ್ನು ತಮ್ಮ ಮುಖ್ಯ ಕರ್ತವ್ಯವೆಂದು ತಿಳಿದು ಆಡಳಿತವನ್ನು ನಡೆಸಬೇಕಿತ್ತು.

ದಕ್ಷಿಣ ಭಾರತದಲ್ಲಿ ತಮ್ಮ ಸಾಮ್ರಾಜ್ಯದ ಪ್ರಾದೇಶಿಕ ಭಾಗದ ಆಡಳಿತವನ್ನು ಸುವ್ಯವಸ್ಥಿತ ರೀತಿಯಲ್ಲಿ ಚಾಲುಕ್ಯರು ಏರ್ಪಡಿಸಿದ್ದರು. ಪ್ರಾದೇಶಿಕ ಅಧಿಪತಿಗಳು ತಮಗೂ ಮತ್ತು ಕೇಂದ್ರ ಸರಕಾರಕ್ಕೂ ನೆಲೆಸಿದ್ದ ಸಂಬಂಧವನ್ನವಲಂಬಿಸಿ ತಮ್ಮ ಸ್ಥಾನ ಗೌರವವನ್ನು ಪಡೆದು ಕರ್ತವ್ಯಗಳನ್ನು ಪಾಲಿಸುತ್ತಿದ್ದರು.[65]

ಗ್ರಂಥಟಿಪ್ಪಣಿ

[1] *EI*, XIX, p. 64 ; D. C. Sircar, : *Studies in the Geography of Ancient and Medieaval India.*

[2] *JBBRAS.*, XVI, p. 228,

[3] ಭಾರತ ಇತಿಹಾಸ ಸಂಶೋಧಕ ಮಂಡಲ, ತ್ರೈಮಾಸಿಕ ಪತ್ರಿಕೆ, 1834, p. 169.

[4] *IA*, XVIII, p. 265

[5] *EI*, XXXVIII

[6] ಅದೇ, XIX, p. 62

[7] *Indian Historical Quarterly*, IV, 425

[8] *EI.*, III. p. 30

[9] *Proceedings of the Aryan Section of the Seventh International Congress of Orientalists*, p. 225

[10] *ASMAR.*, 1909, p. 93

[11] *EI*, III, p. 1

[12] ಅದೇ, p. 30

[13] *IA*, IX, p. 123

[14] *EI*, X, p. 100

[15] *IA*, VIII, p. 23 ; *EI.*, V, pp. 200ff.

[16] *EI*, VII, p. 300

[17] ಅದೇ, XXX, No. 1

[18] ಅದೇ

[19] *A. P. Archaeological Series, No. 6. V-1*

[20] *IA*, IV, p. 9-12

[21] *JBBRAS*, XVI, 232-42., *EI*, XXX, No. 1.

[22] *IA*, VII, p. 217

[23] *EI*, III, 1 ; *IA*, VIII, pp. 23ff : *EI*, V, pp. 200ff.

[24] *IA*, VIII, p. 23 ; *EI*, V, pp. 200ff,

[25] *IA*, XIX, p. 142

[26] *EI*, XXXII, pp. 213ff

[27] *JBBRAS*, XVI, p. 229-40

[28] *EI*, XXII, pp. 24ff

[29] Rangaswami. C. V : *Government and Administration under the Chalukyas of Badami* (Thesis. KUL, Dharwad, 1971) p. 141-42

[30] *MER*, 1924, No. 364

[31] *IA*, VI, p. 73

[32] *EI*, XXXIII, p. 311

[33] *JBBRAS*, X, p. 348

[34] ಅದೇ

[35] *IA*, IX, p. 293 : VII, p. 209 : *Dynasties of Kannada Districts*, p. 344, note 5

[36] *EI*, XLV, pp. 144 ff.

[37] *IA*, IX, p. 125

[38] *EI*, IX, p. 125

[39] *IA*, IX, p. 125

[40] ಅದೇ VIII. p. 43

[41] ಅದೇ VIII, p. 300

[42] *EI*, XVIII, p. 357, *Annals of the Bhandarkar Oriental Institute*, IV, p. 43

[43] *IA*, VII, p. 300

[44] *EI*, XVIII, p. 357

[45] *IA*, IX, p. 123

[46] ಅದೇ VIII, p. 43

[47] ಅದೇ XIX, p. 146

[48] ಅದೇ

[49] *JBBRAS*, X, p. 348

[49] *Progress of Archaeology in Karnataka*, 1956-72 (ed) Nagaraja Rao, M. S., p. 39

[50] *IA*, IX, p. 125, *EI*, XXXVI, pp. 333, ff. Karnataka

[51] *EI*, V, p. 7

[52] *EC*, VII, Hl-13

[53] *IA*, VI, p. 10

[54] ರಾವ್. ಎನ್. ಎಲ್. ಮತ್ತು ಪಂಚಮುಖಿ, ಆರ್. ಎಸ್: ಕರ್ನಾಟಕದ ಅರಸು ಮನೆತನಗಳು

[55] *IA*, VII, p. 10

[56] *IA*, XIX, p. 142

[57] *IA*, X, p. 105

[58] *IA*, VII, p. 217; Desai. Z. A. (ed) *Studies in Indian Epigraphy*, Vol. *I*, p. 50-51; p. 109-110

[59] ರಾವ್, ಎನ್ ಎಲ್. ಮತ್ತು ಪಂಚಮುಖಿ ಆರ್. ಎಸ್. : ಕರ್ನಾಟಕದ ಅರಸು ಮನೆತನಗಳು

[60] *JBBRAS*, X, p. 348

[61] *IA*, VII, p. 217

[62] *AIR*, 1960-61, p. 406

[63] *IA*, X, p. 105; Desai, Z. A. (ed.) *Studies in Indian Epigraphy*, Vol. I, p. 111-113

[64] *EI*, XVIII, p. 257

[65] Rangaswami, C. V. *Government and Administration under the Chalukyas of Badami* (Thesis K.U.L. Dharwad, 1971)

ಪ್ರಾಂತೀಯ ವಿಭಾಗಗಳಲ್ಲಿನ ಆಡಳಿತ ನಿರ್ವಹಣೆಗಾಗಿ ಹಲವು ಹುದ್ದೆದ ಅಧಿಕಾರಿಗಳು ಇರುತ್ತಿದ್ದರು. ಇವರಲ್ಲಿ ಮುಖ್ಯರಾದವರು ಮಂಡಲಿಕರು. ಒಂದು ಅಥವಾ ಹಲವು ನಾಡುಗಳ ಮೇಲೆ ಇವರ ಆಧಿಪತ್ಯ ಇರುತ್ತಿತ್ತು. ಆಡಳಿತ ರೀತಿ, ನಿರ್ವಹಣೆಯಲ್ಲಿ ಇವರು ರಾಜನ ತದ್ರೂಪರಾಗಿದ್ದರು. ಪ್ರಾಂತೀಯ ಆಡಳಿತದಲ್ಲಿ ಹೆಚ್ಚು ಕಡಿಮೆ ಸ್ವತಂತ್ರರಾಗಿದ್ದರು. ರಾಜ ಪರಮೋಚ್ಚನಾಗಿದ್ದು, ಇವರು ಅವನ ಸಾಮಂತರಾಗಿ ಅವನಿಗೆ ಕಾಲಕಾಲಕ್ಕೆ ಪೊಗದಿಯನ್ನೂ ಸಮಯ ಬಿದ್ದಾಗ ಸೈನ್ಯ ಸಹಾಯವನ್ನೂ ನೀಡಬೇಕಾಗಿದ್ದುದಷ್ಟೇ ವ್ಯತ್ಯಾಸ. ಈ ಪ್ರಾಂತ್ಯಾಧಿಕಾರಿಗಳಲ್ಲಿ ಕೆಲವರು ಕುಲಪರಂಪರೆಯಲ್ಲಿ ತಮ್ಮದೇ ಆದ ಭಾಗದಮೇಲೆ ಆಡಳಿತವನ್ನೂ ನಡೆಸುತ್ತಿದ್ದರು. ಹಾಗೆ ಇದ್ದ ಸಾಮಂತ ರಾಜಮನೆತನಗಳಲ್ಲಿ ಕೇಕಯ, ಸೇಂದ್ರಕ, ಸಾನ್ತರ, ಆಳುಪ, ನೊಳಂಬ, ಪತಾರ್ಯ. ಸಳ, ಬಾಣ ಮುಂತಾದವರನ್ನು ಹೆಸರಿಸಬಹುದು. ಕೆಲವು ಪ್ರಾಂತ್ಯಗಳ ಆಡಳಿತವನ್ನು ನಡೆಸಲು ರಾಜ ತನ್ನ ಸ್ವಂತ ಬಂಧುಗಳನ್ನೋ, ನಿಷ್ಠಾವಂತರಾದ ಸಮರ್ಥ ಅಧಿಕಾರಿಗಳನ್ನೋ ನಿಯಮಿಸುವ ರೂಢಿಯಿತ್ತು............

ಕನ್ನಡ ಅಧ್ಯಯನ ಸಂಸ್ಥೆಯ
ಕನ್ನಡ ಸಾಹಿತ್ಯ ಚರಿತ್ರೆ
ಎರಡನೆಯ ಸಂಪುಟ, ಪು. ೩೮೨

ಕೆ. ರಘುಪತಿ ಭಟ್ಟ

ಆರು, ಆಲು(=ನೀರು)—ಊರುಗಳು: ಒಂದು ಸ್ಥಳನಾಮಾಧ್ಯಯನ

ಮನುಷ್ಯನ ಜೀವನಾವಶ್ಯಕ ವಸ್ತುಗಳಲ್ಲಿ ನೀರು ಅತ್ಯಂತ ಮುಖ್ಯಸ್ಥಾನ ಪಡೆಯುತ್ತದೆ. ಮನುಷ್ಯನ ಚರಿತ್ರೆಯನ್ನು ಪರಿಶೀಲಿಸಿದರೆ, ಆದಿಯ ಜನಾಂಗವು ಆಹಾರಕ್ಕಾಗಿ, ನೀರಿಗಾಗಿ ಹುಡುಕುತ್ತಾ ಇದ್ದು ಕೊನೆಗೊಮ್ಮೆ ಯೋಗ್ಯ ಎಡೆ ಸಿಕ್ಕಾಗ, ಅಲ್ಲಿ ನೆಲೆಗೊಂಡು ಕೃಷಿ–ಪಶುಪಾಲನೆ ಮುಂತಾದವನ್ನು ಕಲಿತುಕೊಂಡುದನ್ನೂ ಆ ಮೂಲಕ ನಾಗರಿಕತೆ ಬೆಳೆದುಬಂದುದನ್ನೂ ಕಾಣುತ್ತೇವೆ. ಇಂಥ ಜನ ಪ್ರಕೃತಿಯ ಶಿಶುಗಳಾಗಿ ಮಣ್ಣಿನ ಮಕ್ಕಳಾಗಿ ಅಕೃತ್ರಿಮ ನಡತೆಯವರಾಗಿದ್ದರು; ನಿರಾಡಂಬರಿಗಳಾಗಿದ್ದರು. ಇದಕ್ಕೆ ಈಗಲೂ ಸ್ಥಳನಾಮಗಳ ಪೈಕಿ ಅಧಿಕ ಸಂಖ್ಯೆಯಲ್ಲಿರುವ ಜಲವಾಚಕ ಸ್ಥಳನಾಮಗಳು (hydronyms) ಉತ್ತಮ ನಿದರ್ಶನಗಳಾಗಿವೆ.

ಜಲಾಧಿಕ್ಯವನ್ನು ಸೂಚಿಸುವ ಪದಗಳಲ್ಲಿ ಆಲ್, ಆರ್ ಮತ್ತು ಅವುಗಳ ರೂಪಭೇದಗಳು ವಿಶಿಷ್ಟವಾದುವು. ಮೊದಲು ಇವು ಹೇಗೆ ಬೇರೆ ಬೇರೆ ರೂಪತಳೆದಿವೆ ಹಾಗೂ ಅರ್ಥಲಂಬನ ಹೊಂದಿವೆ ಎಂಬುವನ್ನು ಶಬ್ದಕೋಶಗಳ ಆಧಾರದಿಂದ ತಿಳಿಯುವ.

I 'ಸಮುದ್ರ' ಎಂಬರ್ಥ ಕೊಡುವ 'ಆಲ್' ದ್ರಾವಿಡ ಭಾಷೆಗಳಲ್ಲಿ ಹೀಗೆ ರೂಪವ್ಯತ್ಯಾಸ ಪಡೆದಿದೆ:

ಅಟಿಕ್ಕಾರ್ (ತ) ಅಟಿಕ್ಕ (ಮ) cf. ಅಟಿಕ್ಕವಣ್ಣಂ[1]

ಆಳಿ (ತ) ಆಳಿ (ಮ) ಅಟಿ (ಕ) [1a]

'ಆತ್ರಿ', 'ಆಳಿವೆ', 'ಆಲಿಕಲ್', 'ಆಲವಾಲ' 'ಆಳ್(=ಜಲಮಗ್ನೇ)', 'ಆಳ (?)' 'ಆವಲ್', 'ಅಲರ್' ಮುಂತಾದುವು ಪ್ರಾಯಃ 'ಆಲ್' ಎಂಬ ಮೂಲಪದದಿಂದಲೇ ನಿಷ್ಪನ್ನವಾಗಿವೆ. ಇವುಗಳ ವಿವಿಧ ರೂಪ ಹೀಗಿದೆ:

Wave : ಅಲೈ (ತ) ಅಲ (ತೆ) ಅಲ (ಮ), ಅಲೆ (ಕ, ತು.) ;[2]

Seashore : ಅಲೈವಾಯ್, (ತ) ಅಲವಾಯ್, ಅಲ್ವಾಯ್ (ಮ), ಅಳಿವೆ (ಕ. ತು.)[3]

Hailstone : ಆಲಂಕಟ್ಟಿ (ತ), ಆಲಿಪ್ಪಾಳಂ (ಮ), ಆಲಿಕಲ್ (ಕ, ತು.)[4]

ಆಳವಾಳ/ಆಲವಾಲ (ಆವಾಲ) : A basin for water round the root of a tree (ಕಟ್ಟೆ Sm. 89. ಮಡಿ G.)[3] a bridge (?) ; or, a hollow or pit[5].

ಅಲ = ಅಣ, ಅಳ (perhaps Tbh of ಅಲಯು ; but cf. ಅಲ$_2$, No. 3 and ಅಳ see ಅನ್ತರಾಲ)[6]

ಅಲ = ಅಬಲ್, the red water-lily (ಚೆಂಗಲವೆ, ಚೆನ್ನೈದಿಲ್ ; T. ಅಲ, an open flower ; Ta, Te, ಅಲ್ಲಿ, a water lily...)[7]

Blue Nelumbo : ಕುವಳೈ (ತ), ಕುವಲ (ತೆ), ಕೂವಲ (ಮ), ಕುವಲ (ತ),[8] ಕೋಳೆ (ತು).

Lotus : ಅಲರ್ (ತ), ಅಲರಿನ್, ಅಲಮೇಲು ಮಂಗ (ತೆ), ಅಲರ್ (ಮ, ಕ.)[9]

Water lily : ನೈತಲ್, ಅಂಪಲ್ (ತ), ನೈತಲ್, ಅಂಪಲ್ (ಮ) ; ನೆಯ್ದಾಲ್ ಅಬಲ್ (ತ); ನೆಯ್ದಾಲ್, ಅಂಬಲ್ (ತು)[10].

Tender wild jack : ಅರಂತಾಲ್ (ತ), (ಮ); ಅಲಂಗಿ (ತ);[11]

ಅಲ$_2$ = ಅಲ, any discharge of venomous matter from poisonous animals....[12]

ಕನ್ನಡದ ಅಲಂಬು, ಅಲಂಪು (ಪ್ರೀತಿ, ಸಂತೋಷ, ಅತಿಶಯ, ಮೇಲ್ಮೆ ಇ.), ಅಲಕ್ತ್ರ (ಅಲತಿಗೆ, ಅರಗು: ತುಟಿಗೆ ಸವರುವ ಬಣ್ಣ), ಅಲವಲಸು, ಅಲವರು (ಹಂಬಲಿಸು ಇ.) ಅಲಿ (ೞಿ) (ಮದ್ಯ), ಅಲಿಂಜರ (ನೀರಿನ ಹರವಿ: ಗುಡಾಣ), ಅಲುಗು, ಅಲ್ಲೋಲ ಕಲ್ಲೋಲ: ಆಲ್ (ನೀರಿನ ಹೂಜಿ, ಸಣ್ಣಪಾತ್ರೆ), ಆಲೂಗೆಡ್ಡೆ, ಆಲಾಸ್ಯ (ಮೊಸಳೆ), ಆಲೀಢ, (ರುಚಿ ಸವಿದ), ಆಲುಕ (ನೀರಿನ ಹೂಜಿ, ಆದಿಶೇಷ,), ಆಲೀನ (ಕರಗಿಸಿದ), ಆಲೆ (ಗಾಣ, ಕಬ್ಬಿನ ರಸ ತೆಗೆವ ಯಂತ್ರ), ಆಲೇಪನ, ಆಲೋಡನ:[13] ಆಳಂಬೆ (ನಾಯಿ ಕೊಡೆ), ಆಳ (ಗಭೀರ, ಗಾಢತೆ, ಬೆಳಗು, ಮರ್ಮ): ಆಟಿತ್ತ (ಮುಳುಗುವಿಕೆ); ಆಳ್ವಾರುಗಳು (ಭಗವಂತನ ಭಕ್ತಿಯಲ್ಲಿ ಮುಳುಗಿದ ತಮಿಳ್ನಾಡಿನ ವಿಷ್ಣುಭಕ್ತರು)[14]; ಅಲಿ (ಕಣ್ಣೀರು) ಇ.

'ಅಲ್' ಎಂಬುದು ಸ್ಥಳನಾಮಗಳ ಸಮಸ್ತ ಪದದಲ್ಲಿ ಪೂರ್ವ ಅಥವಾ ಉತ್ತರ ಭಾಗದಲ್ಲಿ ಜಲಾಧಿಕ್ಯ ಸೂಚಕವಾಗಿ ಅಥವಾ ನದೀವಾಚಕವಾಗಿ ಬಂದಿರುವುದಕ್ಕೆ ದ್ರಾವಿಡ ಭಾಷಾವರ್ಗದಿಂದ ಕೆಲವು ಉದಾಹರಣೆಗಳು:

ಅಂಗಾಲ, ಅರ್ಕಳ, ಅರಳ, ಅಂಬದಾಲ, ಅಂಬಾಲ, ಅಂಚಾಲ, ಕಾಗಲ್, ತೆನಗಾಲ್, ಕುಡಾಲ್, ಮಂಗಾಲ್, ಮೈಖಿಲ್, ಮುಹಾಲ್, ಕೆದ್ರಾಲ್, ಕೇರಳ, ಸುತ್ನಾಲ್, ಪಕಳ, ಪೈನಾಲ್, ಪಾಚಾಲ್, ಅರಾಳ, ಅಕಾಳ, ಐತಳ್ಳ, ಗುಜರ್ಾಲ್ಲ, ಕರ್ಮಾಳ, ಕೋವಾಳ, ಕಟಾಲ, ಕೊಡಲಾಳ, ಕಂಗಾಳ, ಮಂಗಾಳ, ಮದಾಳ, ಮುಗಾಳ್ಳ, ಮಿರಿಯಾಳ, ಮಂಚಾಳ, ನೀರಾಳ; ಇಂಗಾಳ, ಪಕಳಾಲ, ತೆನ್ನಾಳ, ತೀರ್ತಾಳ, ತಿಸಿವಾಳ, ಮನಾಳ, ತುರಿನೆಲ್ಲ, ತುರ್ನೆಳ್ಳ, ತುರ್ಮೆಲ್ಲ ಇತ್ಯಾದಿ.[15]

ಬಾಸ್ಕ್ ಭಾಷೆಯ ಕೆಲವು ಉದಾ :

Artizem-al, Mirug-al, Ronk-al, Esrn-al, Uz-al, Air-ala, Arrizala, Birg-ala, Ek-ala, In-ala, Urdin-ala, Ortigy-ala, Urd-ala, Est-ala, Zab-alla. Za-illa, Est-ella, Unz-ella, Unz-illa, Est-illa, Ar-illa, Ub-illa, Erz-illa, Esp-illa, Isp-illa, etc-[16]

ತುಳು ಭಾಷೆಯಲ್ಲಿ ವ್ಯವಹಾರದಲ್ಲಿ 'ಅಲ್-ನೀರು' ಎಂಬುದು ಅಷ್ಟಾಗಿ ಪ್ರಚುರ ನಾಗಿರದಿದ್ದರೂ,[17] ಇದು ಸ್ಥಳನಾಮಗಳಲ್ಲಿ ಗಣನೀಯ ಪ್ರಮಾಣದಲ್ಲಿ ದೊರೆಯುತ್ತಿರುವುದು ಈ ಪದದ ಪ್ರಾಚೀನತೆಯ ಗುರುತಾಗಬಲ್ಲುದು. ತುಳುನಾಡಿನ 'ಅಲ್-ಊರು'ಗಳು :

ಪೂರ್ವಪದ ಸ್ಥಾನದಲ್ಲಿ :

ಅಲಂದಟ್ಟೆ, ಅಲಂಕಾರು, ಅಲಂತಾಯ, ಅಲತ್ತಾಡಿ, ಅಲದಂಗಡಿ; ಅಲ್ಲಿಯ, ಅಲೆಕ್ಕಾಡಿ ಅಲೆವೂರು, ಅಲ್ಪಾಡಿ, ಅಲ್ಸಾಡಿ, ಅಲಂತಡ್ಕ, ಅಲಕುದ್ರು, ಅಲಡ್ಕ, ಅಲದ ಕಮರಕೂರು(?), ಅಲೂರು, ಅಲೆಟ್ಟೆ, ಅಳಜಿ, ಅಳತ್ತ ಇತ್ಯಾದಿ.

ಉತ್ತರಪದ ಸ್ಥಾನದಲ್ಲಿ :

ಅಂಬಾಲ, ಅಣ್ಣಾಲು, ಅಯೆಂಗಾಲು, ಅರಳ, ಅವ್ರಾಲ, ಅಂಗಳ, ಅಂಡಾಳೆ, ಉಬರಾಳೆ, ಉರ್ವಾರ್ಲ್, ಉಳ್ಳಾಲ, ಕನ್ನಾಳೆ, ಕನ್ಯಾಳ, ಕರಿಂದಾಳ, ಕುಂಜಾಲ, ಕುರ್ಕಾಲ್, ಕುತ್ಯಾಳ, ಕುಳಾಲ, ಕೊಡಿಯೊಳ, ನೆಕ್ಕರಾಳ, ಪಣಿಯಾಲು, ಪರ್ನಾಲು, ಬಂಟವಾಳ, ಬಜಾಲು, ಬೆಳಾಲು, ಬೇಳಾಲ, ಬೊಂಡಾಲ, ಮಾರ್ದಾಳ, ಮ್ಯೆಯಾಲ, ಮೊಗ್ರಾಲ, ಹಜಾಲ, ಹೇರಂಜಾಲು, ಬೆಳ್ಯಾಲ ಇ.

II 'ಹೊಳೆ, ನದಿ, ನೀರು' ಎಂಬರ್ಥದಲ್ಲಿ 'ಅರ್' ಹೀಗೆ ಬೇರೆ ಬೇರೆ ರೂಪ ತಳೆಯುತ್ತದೆ:

ಅರ್, also ತಾರ್, ಸಾರ್, ಹಾರ್, a river stream.[18]

ಅರ್ : ಅದ್, etc. to be immersed, etc. Pp. ಅರ್ದು (Tu, ಅರ್ದು)[19]

ಅಱು, ಅಱ,-ಅಱಗೆಱಿ-ಕೆಱಿ, a dry tank (ಅಱುನೀರ್-water left after evaporation);[20] ಅಱ್= ಅಱ್ (ಅರ್ತು ಅಱುತು), ಅಱತು, to be dried, to be dried up; to disappear, ಅಱತುದು (ಬಱತುದು) cf. ಅಟ್ಟು, ಅವ್ಟು-ಅಱಕೆರ್ದೆ,[21]; ಅಱ= ಅಱು, ಅಱಬು, etc, drought, famime (ಬಱಗಾಲ) (Tu. ಅರೆಗಾಲ, summer) ; ಅಱ= ಅಱು, vishu, charity, alms, law cf. ಅರವಟಿಕೆ-ಹಟಿಕೆ= ಅಱವಟಿಕೆ, etc. (ಪ್ರಪೆ, ಪಾನೀಯಶಾಲಿಕೆ....);[22] ಅರ್ದು= ಅಱ್ದು, to plunge, to dive; ಅಬ್ಬಿ : constant descent of water, waterfall. (T-ಅರುವಿ Tu-ಅಬ್ಬಿ) (cf. ಪೇರಬ್ಬಿ, a large waterfall) ;[23] ಅೞ್= ಅದ್, ಅೞ್, to sink in a field, to be immersed (ಆವ್ depth); ಅರುವೆ ಅಳುವೆ, ಅೞುವೆ : the mouth of a river in which the tide ebbs & flows...[24]; ಅರ್= ಅರ್, ಅೞ್. to immerse, to dive ;[25] ಅಱಟ/ಅಱಾಟ : immersion or bathing of an idol in a river or tank on the last day of a temple festival (T; M; Tu; ಅಱು, a river)[26]

ಅರಂಟು (ಅಲೆಯುತ್ತ ಹುಡುಕು), ಅರಕ (ಬಟ್ಟೆಯಿಳಿಸುವುದು), ಅರಗಟ್ಟ (ನೀರೆತ್ತುವ ರಾಟೆ), ಅರಗು (ಮುದ್ರೆ ಮಾಡಲು ಬಳಸುವ ಒಂದು ದ್ರವ್ಯ, ಲಾಕ್ಷ), ಅರಮುಂಕೆ (ತೆರೆ);[27] ಅರ (ಚೋಹಾಲ್ಲು), ಅರಂಬ (ಬೇಸಾಯ), ಅರನಾಳ (ಗಂಜಿ);[28] ಅರೋಗಣೆ (ಊಟ), ಅರ್ದ್ರ (ತೇವವಾದ, ಒದ್ದೆ (ಸ್ಥ) ?)[29]

ಮೇಲಿನ ಉದಾಹರಣೆಗಳನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿದರೆ, 'ರ್' ಕಾರದ ಸ್ಥಾನದಲ್ಲಿ ಪರ್ಯಾಯವಾಗಿ 'ಳ' ಕಾರ ಬರುವುದನ್ನೂ ಹಾಗೆ ಬಂದರೂ ಸಾಮಾನ್ಯವಾಗಿ ಅರ್ಥ ಏಕರೀತಿಯಾಗಿ ಉಳಿಯುವುದನ್ನೂ ಕಂಡುಕೊಳ್ಳಬಹುದು.

ಮೇಲಿನ ಅರ್ಥದಲ್ಲಿ ಆರ್, ಅರ್–ಎಂಬ ಜಲವಾಚಕವು ಸ್ಥಳನಾಮಗಳಲ್ಲಿ ಹೀಗೆ ಪ್ರವರ್ತಿಸಿದೆ.

ಅತ್ತಾರ್, ಅಜರ್ರ್, ಅಡ್ಯಾರು (ಈ ಹೆಸರಿನ ಹಲವಾರು ಸ್ಥಳಗಳಿವೆ), ಅಡಾರ್, ಅಗಾರ್, ಅರಾರ್, ಕೆಂಜಾರ್, ಕೊರಾರ್, ಕುಂದಾರ್, ಲಾಷ್ಕಾರ್, ಮದಾರ್, ಮಲ್ಸಾರ್, ಮಲ್ಲಾರ್, ಮುಂದಾರ್, ಮಂಧಾರ್, ಮಸಾರ್, ಅಗಾರ, ಅಬರ್ರ. ಚಿಟಾರ, ಚಿಗ್ಗಾರ, ಭಂಡಾರ, ಕಂದಾರ, ಕೊಪ್ಪಾರ, ಕುಂಡಾರ, ಕುಳಿಯಾರ್. ಕುಮಾರ, ಕುಕುನ್ದಾರ, ಮಲಾರ, ಮುಮ್ಮಿಯಾರ, ಮಂಗಾರ, ಮರಾರ. ಮೆಕ್ಕಾರ, ಮಲ್ಲಾರ, ಪುಲ್ಲಿಯಾರ, ಪುಲಿಸಾರ, ತಲಾರ ತಲ್ಲಾರ, ತಂಕಾರ, ಥೇವಾರ, ಜೆಯ್ಯಾರ, ಅಸಾರ, ಅಚಾರ. ಅಗ್ಗಾರ, ಅಂತಾರ, ಅಮ್ದಾರ, ಅಯ್ಯಾರ, ಇತ್ಯಾದಿ,[30] ಮಣಿಯಾರ್, ಅರಸಲಾರ್, ಪಾಲಾರ್, ಮುಂ.

ಬಾಸ್ಕ್ ಭಾಷೆಯಲ್ಲಿ ಇದೇ ಅರ್ಥದಲ್ಲಿರುವ ಸ್ಥಳನಾಮಗಳು: Aral-ar, Bel-ara, Beidaḳ-ar, Gal-ar, Iz-ar If-ar, Agi-ar, Goi-ar, Uiai-ar Garai-ar Kark-ar, Uk-ar, Ug-ar, Itzi-ar, Naz-ar, Lang-ara, Ob-arra.

Ulai-ar, Us-ar, Leg-ara, Osak-ar, Lisk-ar, Lesi-ar, Lespi-ar, Lask-ar,(very similar to the Drav. place-name) Laḳ-ar ; Ag-ara, (same in Drav.) Ad-arr, Ar-arra; (See Dr. Ar-ar) End-ara Eski-ara, Lang-ara, Oḳ-ara, Og-ara Orb-ara, Mendi-ara, Mend-ara Nab-arra, etc.[31]

ತುಳುನಾಡಿನ ಉದಾಹರಣೆಗಳು: ಅರಗುಡಿ, ಅರಬಿ. ಅರಳ, ಅರಿಕಾಡಿ, ಅರಿಪಾಡಿ, ಅರಿಬೈಲು, ಅರಿಯಡ್ಕ, ಅರಿಯಾಲ. ಅರುಣ, ಅರುವ, ಅಕುಳ, ಅಬ್ಬಿರ್, ಅಮರ್ರಡಿ. ಅಳ್ರಕ್ಯೊಲು, ಅರಂತೋಡು. ಅರಂತೋಡಪದವು, ಅರಂಪಾದಿ, ಅರಂಪಾಡಿ, ಅರಂಬೋಡಿ, ಅರಖಂಡನ, ಅರೂರು ?, ಅರ್ಕಾನಾ. ಅರ್ಕೋಡು, ಅರ್ಜಿಟ್ಟಹಳ್ಳಿ, ಅರ್ಜಿಟ್ಟು ?, ಅಲರ್ ಪದವು ?, ಅರಾಡಿ, ಅರ್ಯಾಪು, ಇತ್ಯಾದಿ.

ಅಂತರ, ಅಗರಿ, ಅಗ್ರ, ಬಂಟರ, ಉಜ್ಜೀರಿಯ, ಉಜ್ರೆ ?; ಅಂಜಾರು ಅಂಡಾರು, ಅಂಡಾರ, ಕೊಂಬಾರು, ಅಜಾರು, ಅಡ್ಯಾರು ಅಷ್ಯಾರು, ಅಳತ್ತಾರು, ಉಂಜಾರು, ಉತ್ತಾರ, ಉಪ್ಪಾರ, ಉರುಂಬಾರು, ಉಳಿಯಾರ, ಎಳ್ಯಾರೆ, ಐತಾರು, ಕಂಟ್ಯಾರ, ಕಡಾರಿ, ಕಣ್ಣಾರ, ಕವತಾರ, ಕುಂಟಾರು, ಕುಂಡಾರು. ಕುತ್ಯಾರು, ಕೆಂಜಾರು, ಕೊಟ್ಟಾರ, ಗಿಳಿಯಾರ, ಚಂತಾರು, ಚಂದಾರೆ, ಚಿತ್ತಾರಿ, ಚಿತ್ತಾರು, ಚೆನ್ನಾಯಿರು, ಚೇವಾರು, ಚೌಕಾರು, ದೇಯಂತಾರು. ನಾಜರ, ನೆಟ್ಟಾರು, ಪಡ್ಯಾರು, ಪಿಲಾರ, ಬಂಡಾರು, ಬಜತ್ತಾರು, ಬಾಯಿರು, ಮಟ್ಟಾರು. ಮತ್ತಾರು, ಮಲ್ಲಾರು, ಮಾಲಂದಾರು. ಮಾಲಾರು, ಮಿಜಾರ, ಮಿಯಾರು, ಮುಳಿಯಾರು, ಮೊಳೆಯಾರ, ಸಾಂತ್ಯಾರು, ಸಿರಿಯಾರ. ನೇಜಾರು, ಇತ್ಯಾದಿ.

ಇಲ್ಲಿ ಒಂದೆರಡು ಅಂಶಗಳನ್ನು ಪ್ರಸ್ತಾಪಿಸುವುದಗತ್ಯ. 'ಆರ್' ಜಲವಾಚಕ ಪ್ರತ್ಯಯವೇ 'ಊರ್' ಆಯಿತೆಂದು ಕೆಲವರು ವಾದಿಸುವುದಿದೆ. ಆದರೆ, ಇದನ್ನು ಒಂದು ನಿಯಮವನ್ನಾಗಿ ತೆಗೆದುಕೊಳ್ಳುವಷ್ಟು ಸಂದರ್ಭಗಳು ಕಾಣಸವು. ಕೆಲವು ಕಡೆ ಧ್ವನಿವ್ಯತ್ಯಾಸವಾದಲ್ಲಿ ಅಚ್ಚರಿ

ಯಿಲ್ಲ. ಇನ್ನೊಂದಂಶವೇನೆಂದರೆ, 'ಆರ'ಕ್ಕೂ 'ಆವರ'ಕ್ಕೂ ಸಂಬಂಧವಿದೆ ಎಂಬುದು 'ಆವಾರ ಆವರ' ಎಂಬ ಅಂತ್ಯಭಾಗದ ಸ್ಥಳನಾಮಗಳು, ಈ ಸ್ಥಳಗಳು ನದಿಯಿಂದ (ಕೆಲವೊಮ್ಮೆ ದೊಡ್ಡ ತೋಡೂ ಆಗಬಹುದು) (ಎರಡಕ್ಕಿಂತ ಹೆಚ್ಚು ಕಡೆ) ಆವೃತವಾಗಿರುವುದನ್ನು ಸೂಚಿಸುತ್ತವೆ. ಉದಾ. ಬ್ರಹ್ಮಾವರ, ಉದ್ಯಾವರ, ನೀಲಾವರ, ಕಾಂತಾವರ ? ಇತ್ಯಾದಿ.

ಟಿಪ್ಪಣಿಗಳು

1. Ia., Comparative Dravidian Vocabulary, p. 12.
2. *Ibid,*
3. *Ibid,*
4. *Ibid,* p, 9
5. Kittel's Kannada-English Dictionary, p. 172
6. *Ibid*, p. 171
7. *Ibid,*
8. *CDV*, p. 27
9. *Ibid,*
10. *Ibid,*
11. *Ibid,* p. 28
12. *Kittel,* p. 171
13. ಸಂಕ್ಷಿಪ್ತ ಕನ್ನಡ ನಿಘಂಟು : ಸಾಹಿತ್ಯ ಪರಿಷತ್ತು, ಪು. 88–89,
14. ಅದೇ, ಪು. 93-94.ಇದರಂಥ ಜ್ಞಾತಿಪದಗಳ ವಿವರಣೆಗೆ Lahovary ಅವರ The Dravidian Origins and The West' ಎಂಬ ಗ್ರಂಥ (ಪು. 283)ವನ್ನು ನೋಡಬಹುದು.
15. Lahovary, p. 352
16. *Ibid,*
17. ಈ ತನಕ ನಂಬಿಕೊಂಡು ಬಂದಂತೆ, ತುಳುನಾಡನ್ನು 'ಆಳ್ವಖೇಡ' ಎಂದು ಕರೆಯಲು ಕಾರಣ, ಇದನ್ನು ಆಳುಪರು ಅಥವಾ ಆಳುವರು, ಸು. 1.400 ವರ್ಷಗಳಷ್ಟು ದೀರ್ಘಕಾಲ ಆಳಿದ್ದರೆಂಬುದು. 'ಆಳುಪ' ಶಬ್ದಕ್ಕೆ 'ಆಳಿಕೆ ನಡೆಸುವುದು' 'ಪ್ರಭುತ್ವ ಮಾಡು', 'ಅಧಿಕಾರ ನಡೆಸು' ಎಂಬ ಅರ್ಥಗಳಿರುವ 'ಆಳ್' ಎಂಬ ದ್ರಾವಿಡ ಧಾತುಮೂಲ ಎಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ (ಡಾ. ಕೆ. ವಿ. ರಮೇಶ್ : ತುಳುನಾಡಿನ ಇತಿಹಾಸ ಪು. 25). ಅಗಲ ಕಿರಿದಾದ, ಕರಾವಳಿ ಪ್ರದೇಶವಾಗಿದ್ದು, ಜಲಾಶಯದ ಭೂಮಿಯಾಗಿರುವ ತುಳುನಾಡು ಹಾಗೂ ಆಳ್ವಖೇಡ ಎಂಬ ನಾಮವಾಚಕಗಳು, ಮೂಲತಃ ನಾವು ಈ ತನಕ ಚರ್ಚಿಸಿದ ಆಲ, ಆಳ = ನೀರು ನದಿ ಇ. ಎಂಬುದರಿಂದ ಉಗಮಗೊಂಡಿವೆಯೋ, ವಿಚಾರ

ಮಾಡಬೇಕಾದುದು. ಈ ಸಂದರ್ಭದಲ್ಲಿ 'ತುಳು' ಎಂಬ ಪದಕ್ಕೆ ದಿ. ಗೋವಿಂದಪೈಯವರ ಕೊಟ್ಟ ವ್ಯಾಖ್ಯಾನ ನಮ್ಮ ಸಂಶಯವನ್ನು ಇನ್ನಷ್ಟು ಬಲಗೊಳಿಸುತ್ತದೆ:

ತಮಿಳನ್ನು ಆಶ್ರಯಿಸಿ ತುಳುವಿನ ನಿಷ್ಪತ್ತಿಯನ್ನು ಕಂಡುಹಿಡಿಯುವುದಾದರೆ ನನಗೆ ಹೀಗೆನಿಸುತ್ತದೆ–

ತಮಿಳಿನಲ್ಲಿ ತುಳ್ಳಿ ಎಂದರೆ ನೀರಿನಲ್ಲಿ ಹುಟ್ಟು ಹಾಕು ಎಂದೂ ತುಳ್ಳೈ ಎಂದರೆ ಮುಳುಗು, ನೀರಿನಲ್ಲಿ ಆಡು ಎಂದೂ ತುಳ್ಳೈಯಮ್ ಎಂದರೆ ನೀರಿನಲ್ಲಿ ಆಡುವಿಕೆ ಎಂದೂ ಅರ್ಥ. ಹರಿವಂಶದಿಂದ ತುಳುನಾಡಿನ ಜನರನ್ನು ಕುರಿತು

ತಸ್ಯ ವಾಶಾ ಜಲೇಮಗ್ನಃ.... ಸಮುದ್ರೋಪರ ಚಾರಿಣಃ ಎಂದು ಮೇಲೆ ಕಂಡಿರುವಂತೆ ಕಡಲ ಕೆರೆಯ ಪ್ರದೇಶವಾಗಿದ್ದ ಈ ನಾಡಿನಲ್ಲಿ ಆ ಹಳಗಾಲದಲ್ಲಿ ಬೆಸ್ತರೂ ಅಂಬಿಗರೂ ಸಹಜವಾಗಿ ಹೇರಳವಾಗಿದ್ದು ದಾಶಭೂಯಿಷ್ಠವಾಗಿರಬೇಕಾದ ಈ ದೇಶವು ಅದೇ ಕಾರಣ ತುಲು-ತುಳು ಎಂದು ಕರೆಯಲ್ಪಟ್ಟಿರಬೇಕು....' (ತುಳುನಾಡು : ಪೂರ್ವಸ್ಮೃತಿ-'ತೆಂಕನಾಡು' ಪು. ೧೯)

18. Tulu-English Dictionary ; p. 18
19. Kittel, p. 97
20. *Ibid*, p. 109
21. *Idid*, pp. 103–04
22. *Ibid*, p. 104
23. *Ibid*, p. 109
24. *Ibid*, p. 141
25. *Ibid*, p. 166
26. *Ibid*, p. 169 : see also Lahovary, p. 267
27. ಸಂ. ಕ. ನಿ. ಪು. 53–54
28. ಅದೇ, ಪು. 85
29. ಅದೇ, ಪು. 86–87
30. Lahovary, p. 353
31. *Ibid*,

ರು. ಮಾ. ಷಡಕ್ಷರಯ್ಯ

ಕಟಗೇರಿಯ ಎರಡು ಶಾಸನಗಳು

ಕಟಗೇರಿಯು ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನ ಒಂದು ಸಣ್ಣ ಹಳ್ಳಿ. ಇಲ್ಲಿಯ ಸರ್ಕಾರಿ ಪ್ರಾಥಶಾಲೆಯಲ್ಲಿ ಶಾಸನವುಳ್ಳ ಒಂದು ವೀರಗಲ್ಲನ್ನು ನಿಲ್ಲಿಸಲಾಗಿದೆ. ಇದು ಕರಿಕಲ್ಲಿನದು. ಅಂತೆಯೇ ಸಮೀಪದ ಕೆರೆಯ ಉತ್ತರಕ್ಕೆ ಮೆಟ್ಟಲುಗಳ ಮಧ್ಯದ ಬಲ ಅಂಚಿನಲ್ಲಿ ಒಂದು ಶಿಲಾಶಾಸನವನ್ನೂ ನೆಡಲಾಗಿದೆ. ಇವೆರಡೂ ಶಾಸನಗಳು ಇದುವರೆಗೆ ಅಪ್ರಕಟಿತ. ಎಂತಲೇ ಅವುಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

೧

ವೀರಗಲ್ಲಿನಲ್ಲಿ ಉಬ್ಬು ಶಿಲ್ಪಗಳಿರುವ ಒಂದರ ಮೇಲೊಂದರಂತೆ ಮೂರು ಫಲಕಗಳಿವೆ. ಮೇಲಿನ ಫಲಕದ ಅಡ್ಡಪಟ್ಟಿಯ ಮೇಲೆ ಅಸ್ಪಷ್ಟ ಕಾಲನಿರ್ದೇಶವುಳ್ಳ ಕನ್ನಡ ಶಾಸನವಿದೆ. ಕೆಳಗಿನ ಫಲಕವನ್ನು ಎರಡು ಭಾಗವಾಗಿ ವಿಂಗಡಿಸಿದ್ದು ಅದರಲ್ಲಿ ವೀರರು ಶತ್ರುಗಳೊಡನೆ ಹೋರಾಡುತ್ತಿರುವ ಚಿತ್ರಗಳಿವೆ. ಈ ಫಲಕದ ಬಲ ಅರ್ಧಭಾಗವು ಎರಡನೇ ಫಲಕದ ಅಂಚಿನವರೆಗೆ ಒಡೆದಿದೆ. ಇದರಿಂದ ಮಧ್ಯ ಪಟ್ಟಿಯ ಮೇಲಿರುವ ಶಾಸನವು ಸ್ವಲ್ಪ ಒಡೆದಿದೆ. ಕೆಳಗಿನ ಫಲಕದ ಬಲಬದಿಯ ಚಿತ್ರದಲ್ಲಿ ಒಬ್ಬ ವೀರನು ವೈರಿಗಳೊಡನೆ ಬಿಲ್ಲು ಹಿಡಿದು ಯುದ್ಧ ಮಾಡುತ್ತಿರುವನು. ಕಂಡರಿಸಿದ ಚಿತ್ರದಲ್ಲಿ ಬಿಲ್ಲು ಮಾತ್ರ ಕಾಣುತ್ತಿದೆ. ಉಳಿದ ಭಾಗ ಒಡೆದಿದೆ. ವೈರಿಗಳ ಬಲಗೈಯಲ್ಲಿ ಈಟಿ ಇದ್ದು ಎಡಗೈಯಲ್ಲಿ ಬಿಲ್ಲು ಬಾಣಗಳಿವೆ. ಇವರು ತಮ್ಮ ತಲೆಯ ಕೂದಲನ್ನು ಹಿಂದಕ್ಕೆ ಕಟ್ಟಿದ್ದಾರೆ. ಇದೇ ಫಲಕದ ಎಡಭಾಗದಲ್ಲಿ ಇನ್ನೊಬ್ಬ ವೀರನು ವೈರಿಗಳ ಕೂಡ ಯುದ್ಧ ಮಾಡುತ್ತಿರುವ ಚಿತ್ರವಿದೆ. ವೈರಿಗಳು ಬಲಗೈಯಲ್ಲಿ ಈಟಿ ಹಿಡಿದಿದ್ದು ಎಡಗೈಯಲ್ಲಿ ಗುರಾಣಿಯನ್ನು ಹಿ[illegible] ತಲೆ ಕೂದಲನ್ನು ಹಿಂದಕ್ಕೆ ಕಟ್ಟಿರುವರು. ಮಧ್ಯದ ಫಲಕದಲ್ಲಿ ಕಾ[illegible] ಮಡಿದ ವೀರರನ್ನು—ಒಂದೊಂದು ಮಂಟಪದಲ್ಲಿ ಒಬ್ಬೊಬ್ಬರನ್ನು—ಚಾಮರಿಗಳನ್ನು ಹಿಡಿದ ದೇವಲೋಕದ ಕನ್ಯೆಯರು ಸ್ವರ್ಗಲೋಕಕ್ಕೆ ಒಯ್ಯುತ್ತಿರುವರು. ಒಬ್ಬೊಬ್ಬರ ಮಂಟಪದ ಮೇಲೆ ಎರಡೆರಡು ಮೃದಂಗಗಳನ್ನು ಅಜ್ಞಾತ ಕೈಗಳು ಬಾರಿಸುತ್ತಿವೆ. ಮತ್ತೆರಡು ಜೋಡುಕೈಗಳು ಹೂಮಳೆಗರೆಯುತ್ತಿವೆ. ವೀರರನ್ನು ದೇವಲೋಕಕ್ಕೆ ಸ್ವಾಗತಿಸಿರುವುದನ್ನು ಈ ರೀತಿ ಸಂಕೇತಿಕವಾಗಿ ಸೂಚಿಸಲಾಗಿದೆ. ವೀರಗಲ್ಲಿನಲ್ಲಿ ಕೆತ್ತಿರುವ ಈ ಎರಡು ಅಂಶಗಳು ಗಮನಾರ್ಹವಾಗಿವೆ. ಮೇಲಿನ ಫಲಕದಲ್ಲಿ ಈ ವೀರರು ಒಂದು ಶಿವಲಿಂಗದ ಎಡ ಮತ್ತು ಬಲ ಬದಿಗೆ ಕೈಜೋಡಿಸಿ ಕುಳಿತಿರುವರು. ಲಿಂಗದ ಮೇಲೆ ಪುಷ್ಪಗಳನ್ನು ಇಡಲಾಗಿದೆ. ಲಿಂಗದ ಮೇಲೆ ಬ್ರಹ್ಮಸೂತ್ರವಿರುವುದು. ಉದ್ದ ಜಡೆ ಮತ್ತು ಗಡ್ಡ ಇರುವ ಒಬ್ಬ ಯತಿಯು ಲಿಂಗದ ಪೂಜೆ ಮಾಡುತ್ತಿರುವನು. ಎಡ ಬದಿಯ ಕೊನೆಯಲ್ಲಿ ನಂದಿ ಇದೆ. ವೀರರ ಕೀರ್ತಿ ಸೂರ್ಯ ಚಂದ್ರರು ಇರುವವರೆಗೂ ಬೆಳಗುತ್ತದೆ ಎಂಬುದನ್ನು ಸೂರ್ಯ ಚಂದ್ರರ ಚಿತ್ರಗಳಿಂದ ಸೂಚಿಸಲಾಗಿದೆ.

ಶಾಸನ ಪಾಠ :

೧. . . . . ಯಾ. ೫ನೆಯ ಭಾವಸಂವತ್ಸರದ ಚಯಿತ್ರ ಬ೫ ಗುರುವಾರದಲು ಶ್ರೀಮದ ನಾದಿಯಗ್ರಹಾರಂ . . . . . ಪಟ್ಟಣಂ ಕಡಕೆಱತಿಯ ಶ್ರೀಮದ್ಯೆಸೂರ್ವರು ಸಿಂಹಾಸನದ

೨. . . . . ಚಾಮಯ್ಯ ನಾಯ್ಕನ ಮ[ಗ] ಕಲ್ಲಯಾತನ ಯಣ್ಣ ಸಮದ ಸಂಕ ಯಿಬ್ಬರು ಬಾದಾಮಿಯ ದಾರಿಯ್ಯಲು ಕಡಕೆಱತಿಯ್ಯ ಮಹಾಜನಂ

೩. [ಗಳು] . . . . ಬಾದಾರಿಯ್ಯಲು ಕಳರೊಡ[ನೆ] ಕಾದಿ ಸತ್ತಡೆ ನಾಕಯ್ಯಲು ಯಾತಂಗಳ ಪಟುತನಕ್ಕೆ ಮೆಚ್ಚಿ ಕೊಟ್ಟ ಮನ್ನಿಕ್ಕರ್ಯ್ಯ ಮನೆ

೪. . . . . ಮೂಲಸ್ತಾನ ದೇವರ ಕೆ . ಯಿಂ ಕೆಂಕ ಸೀಮೆಯ್ಯಲು ಭತ್ತ ೧೨ ಸರ್ವ್ವಬಾಧೆ ಪರಿಹಾರ ತಲೆ ಅಕ್ಕಿ ಪಡದವ್ರಿತ್ತಿಯೆ

೫. . . . . ಪಾಳಿಸುವರು ಮಂಗಳ ಮಹಾ ಶ್ರೀ ಶ್ರೀ

ಚಾಮಯ್ಯ ನಾಯ್ಕನ ಮಗ ಕಲ್ಲಯ್ಯ ಮತ್ತು ಕಲ್ಲಯನ ಅಣ್ಣ ಸಮದ (ಸೇಮದ ?) ಸಂಕ ಎಂಬಿಬ್ಬರು ಬಾದಾಮಿಯ ದಾರಿಯಲ್ಲಿ ಕಳ್ಳರೊಡನೆ ಕಾದು ಮರಣ ಹೊಂದಿದರೆಂದೂ ಕಡಕೆಱತಿಯ ಮಹಾಜನಂಗಳು ಇವರ ಪರಾಕ್ರಮಕ್ಕೆ ಮೆಚ್ಚಿ ಭೂಮಿ ದಾನಕೊಟ್ಟರೆಂದು ಈ ಶಾಸನ ತಿಳಿಸುವುದು. ಶಾಸನದ ಕಾಲ ಭಾವಸಂವತ್ಸರದ ಚೈತ್ರಮಾಸದ ಬಹುಳ ೫ ಗುರುವಾರ. ಇದು ಸುಮಾರು ೧೧-೧೨ನೆಯ ಶತಮಾನಕ್ಕೆ ಸೇರಿದ ಶಾಸನ. ಶಕ ಕಾಲದ ಉಲ್ಲೇಖವಿಲ್ಲ. ಯಾವುದೋ ಒಬ್ಬ ಅರಸನ ಆಳಿಕೆಯ ವರ್ಷವನ್ನು ಇದು ಪ್ರಸ್ತಾಪಿಸುವಂತೆ ತೋರುತ್ತದೆ. ಆದರೂ ಶಾಸನದ ಕಾಲವನ್ನು ಖಚಿತವಾಗಿ ನಿರ್ಧರಿಸಲು ಲಭ್ಯವಿರುವ ವಿವರಗಳು ಸಾಲದು. ಶಿಲಾಪಟ್ಟಿಕೆಯಲ್ಲಿ ತೋರಿಸಿರುವ ವೀರರು ಚಾಮಯ್ಯ ನಾಯ್ಕನ ಮಗ ಕಲ್ಲಯ್ಯ ಮತ್ತು ಕಲ್ಲಯ್ಯನ ಅಣ್ಣ ಸಂಕರೆಂದೂ ವೈರಿಗಳು ಕಳ್ಳರೆಂದೂ ಶಾಸನದಿಂದ ತಿಳಿದುಬರುತ್ತದೆ. ಶಾಸನದಲ್ಲಿ ಹೆಸರಿಸಲ್ಪಟ್ಟಿರುವ ಬಾದಾಮಿ ಈಗಿನ ಬಾದಾಮಿ ಹಾಗೂ ಕಡಕೆಱತಿಯು ಈಗಿನ ಕಟಗೇರಿ.

ಇದೇ ಗ್ರಾಮದಲ್ಲಿ ನೈರುತ್ಯಕ್ಕೆ ಒಂದು ಕೆರೆ ಇದೆ. ಈ ಕೆರೆಯ ಉತ್ತರಕ್ಕೆ ಅಗಲವಾದ ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಮಧ್ಯದ ಬಲ ಅಂಚಿನಲ್ಲಿ ಚಾಲುಕ್ಯರ ಅರಸನಾದ ಆರನೆಯ ವಿಕ್ರಮಾದಿತ್ಯನ ಕಾಲದ ೧೫ ಸಾಲುಗಳ ಕನ್ನಡ ಶಾಸನವನ್ನು ಪಶ್ಚಿಮಾಭಿಮುಖವಾಗಿ ನಿಲ್ಲಿಸಲಾಗಿದೆ.

ಶಾಸನ ಪಾಠ :

೧ ಸ್ವಸ್ತಿ ಶ್ರೀ ಮಚ್ಚಾಳುಕ್ಯವಿಕ್ರಮವರ್ಷ
೨ ದ ೨೧ನೆಯ ಧಾತುಸಂವತ್ಸರದ ಚೈ
೩ ತ್ರ ಸುದ್ಧ ಆದಿತ್ಯವಾರದನ್ದು ಶ್ರೀಮದ್ಯೆ
೪ ಯ್ನೂರ್ವ್ವರುಂ ತಮಗೆ ನಡೆವ ಸುಂಕವ
೫ ಪಿರಿಯಪೆಗ್ಗಱತಿಗಾಜನನ್ದ್ರಾರ್ಕತಾರಂ
೬ ಬರಂ ಬಿಟ್ಟರು ಕ್ರಮದಿಂದಿನ್ತಿದನ್ನೈದೆ
೭ ಕಾವ ಪುರುಷಂಗಾಯುಂ ಜಯಶ್ರೀಯ್ಯು
೮ ಮಕ್ಕೆ ಯಿದಂ ಕಾಯದೆ ಕಾಯ್ವಪಾಪಿಗೆ ಕು
೯ ರುಕ್ಷೇತ್ರಂಗಳೊಳು ಬಾಣರಾಶಿಯೊಳೆಕ್ಕೋ
೧೦ ಟಿ ಮುನೀಂದ್ರರಂ ಕವಿಲೆಯಂ ವೇದಾಢ್ಯರಂ ಕೊ

೧೧ ನ್ನುದೊಂದಯುಷಂ ಸಾಗುರ್ಗವಿದೆಂದು ಸಾಱಿ
೧೨ ದವುದೀ ಶೈಲಾಕ್ಷರಂ ಧಾತ್ರಿಯೊಳು ॥
೧೩ ಶ್ಲೋಕ ॥ ಸ್ವದತ್ತಂ ಪರದತ್ತಂ ವಾ । ಯೋ ಹ
೧೪ ರೇತಿ ವಸುನ್ಧರಾ । ಷಷ್ಟಿರ್ವ್ವರಿಷ ಸಹ
೧೫ ಶ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ ॥

ಈ ಶಾಸನದ ಕಾಲ ಚಾಲುಕ್ಯ ವಿಕ್ರಮವರ್ಷ ೨೧ನೆಯ ಧಾತುಸಂವತ್ಸರ ಚೈತ್ರ ಶುದ್ಧ ೭ ಆದಿತ್ಯವಾರ ಅಂದರೆ ಕ್ರಿ. ಶ. ೧೦೯೬ನೆಯ ಮಾರ್ಚ್ ೩, ಸೋಮವಾರ ಆಗುವುದು. ೩೦೦ ಮಹಾಜನರು ತಮಗೆ ಬರುವ ಸುಂಕವನ್ನು ಪಿರಿಯಪೆರ್ಗೆಱೆ ಅಂದರೆ ಹಿರಿಯಕೆರೆಗೆ ಬಿಟ್ಟರೆಂದು ಶಾಸನದಲ್ಲಿ ತಿಳಿಸಲಾಗಿದೆ. ಶಾಸನದ ಕೊನೆಯಲ್ಲಿ ಶಾಪವಾಕ್ಯಗಳಿವೆ.

ನಾನು ಈ ಊರಿಗೆ ಭೇಟಿಕೊಡುವ ಪೂರ್ವದಲ್ಲೇ ಬಾಗಲಕೋಟೆಯ ಬಸವೇಶ್ವರ ವಿಜ್ಞಾನ ಮತ್ತು ಕಲಾ ಕಾಲೇಜಿನ ಶ್ರೀ ಉಪಾಸೆಯವರ ನಿರ್ದೇಶನದಿಂದ ಎನ್. ಎಸ್. ಎಸ್. ವಿದ್ಯಾರ್ಥಿಗಳು ಶ್ರಮವಹಿಸಿ ಕೆರೆ ಪೂರ್ವಭಾಗದ ಪ್ರಾಚೀನ ನೆಲೆಯ ಮಣ್ಣನಲ್ಲಿ ಅರ್ಧಭಾಗ ಹೂತಿದ್ದ ಮತ್ತು ಅಲ್ಲಲ್ಲೆ ಬಿದ್ದಿದ್ದ ಹಲವಾರು ಸುಂದರ ಮೂರ್ತಿಗಳನ್ನು ಹೊರತೆಗೆದು ಸ್ವಚ್ಛಪಡಿಸಿ ನಂತರ ಕೆಲವನ್ನು ಬಾದಾಮಿಯಲ್ಲಿರುವ ಕೇಂದ್ರಸರ್ಕಾರದ ಪುರಾತತ್ವ ಇಲಾಖೆಯ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಕಳಿಸಿದರೆಂದೂ ಮತ್ತು ಕೆಲವನ್ನು ಅಲ್ಲಿಯ ಶಾಲೆಯ ಒಳ ಆವರಣದಲ್ಲಿ ಇರಿಸಲಾಯಿತೆಂದೂ ಗೊತ್ತಾಗಿದೆ. ಇದು ಪ್ರಶಂಸನೀಯ ಹಾಗು ಅನುಕರಣೀಯ. ಮೇಲೆ ತಿಳಿಸಿದ ಅಪರೂಪವೆನಿಸಿದ ವೀರಗಲ್ಲು ಇವುಗಳೊಡನೆ ಇವೆ. ಪ್ರಾಚ್ಯ ಸಂಶೋಧಕರು ಈ ನೆಲೆಯಲ್ಲಿ ಹೆಚ್ಚಿನ ಸಂಶೋಧನೆ ಕೈಕೊಂಡರೆ ಇನ್ನೂ ಪ್ರಾಚೀನ ವಿಗ್ರಹಗಳು, ಶಾಸನಗಳು, ನಾಣ್ಯಗಳು ಸಿಗುವುದರಲ್ಲಿ ಸಂದೇಹವಿಲ್ಲವೆಂದು ತೋರುತ್ತದೆ.

ಈ ಶಾಸನಗಳನ್ನು ಪ್ರತಿಮಾಡಲು ಹಾಗೂ ಇತರ ವಿಧಗಳಲ್ಲಿಯೂ ನೆರವು ನೀಡಿದ ಕಟಗೇರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಂಗಾರಶೆಟ್ಟರಿಗೂ, ಶಾಸನಗಳನ್ನು ಓದಿ ಲೇಖನ ಬರೆಯುವಲ್ಲಿ ನೆರವಾದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ವಿಭಾಗದ ಡಾ. ರಿತ್ತಿ ಹಾಗೂ ಮೈಸೂರು ವಿಶ್ವವಿದ್ಯಾಲಯ ದಕ್ಷಿಣ ಭಾರತೀಯ ಅಧ್ಯಯನ ವಿಭಾಗದ ಡಾ. ಬಾ. ರಾ. ಗೋಪಾಲ್‌ರವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಆ ಕಾಲದಲ್ಲಿ ಈಗಿನಂತೆ ದೇಶದ ನಾನಾ ಭಾಗಗಳಲ್ಲಿ ಆಡಳಿತವರ್ಗದಿಂದ ನೇಮಿತವಾದ ರಕ್ಷಣಾ ವ್ಯವಸ್ಥೆಯಿರಲಿಲ್ಲ. ಒಂದೊಂದು ಗ್ರಾಮದಲ್ಲೂ ಅದರ ರಕ್ಷಣೆಗಾಗಿ ಆ ಊರಿನ ಒಂದು ವೀರರ ತಂಡವೇ ಸಿದ್ಧವಾಗಿರುತ್ತಿತ್ತು. ಕಳ್ಳರು ಬಂದು ತುರುಗಳನ್ನು ಅಪಹರಿಸಿದಾಗ, ಸ್ತ್ರೀಯರ ಮಾನಭಂಗವಾದಾಗ ಊರಿಗೆ ಊರೇ ಒಗ್ಗಟ್ಟಾಗಿ ನಿಂತು ಹೋರಾಡುತ್ತಿತ್ತು. ಆ ಉತ್ಕಟ ಪರಿಸ್ಥಿತಿಯಲ್ಲಿ ಶೌರ್ಯ ಪ್ರದರ್ಶನವನ್ನು ಮಾಡದವನಿಗೆ 'ಬ್ರಹ್ಮಪೂತ ಪಾತಕ'ವು ಬರುತ್ತದೆ ಎಂದು ಶಾಸನವೊಂದು ಹೇಳುತ್ತದೆ. ಇಂತಹ ಸಂದರ್ಭಗಳಲ್ಲಿ ಒಂದು ಕಡೆ ಕರ್ತವ್ಯ ದೃಷ್ಟಿ, ಇನ್ನೊಂದು ಕಡೆ ಧರ್ಮದೃಷ್ಟಿ – ಎರಡೂ ಕೆಲಸ ಮಾಡುತ್ತಿದ್ದುವು. ಹಾಗೆ ಹೋರಾಡುತ್ತಿದ್ದವರ ಧೈರ್ಯವು ಅನುಪಮವಾದುದು. ಯುದ್ಧಗಳಲ್ಲಿ ಆದ ಗಾಯಗಳೂ ಪುರುಷರಿಗೆ ಭೂಷಣಪ್ರಾಯಗಳು ಎಂದು ಜನರು ಭಾವಿಸಿದ್ದರು.

ಡಾ. ಎಂ. ಚಿದಾನಂದಮೂರ್ತಿಗಳ
'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ದಿಂದ
(ಪು. 247-48)

ತಿರುಮಲೆ ಮಾವಿನಕುಳಿ

ಮದ್ದು ಹಾಕುವಿಕೆ ; ಗ್ರಾಮೀಣ ಬದುಕಿನ ದುರಂತ

ಮದ್ದು ಹಾಕುವಿಕೆ ಗ್ರಾಮೀಣ ಬಾಳ್ವೆಗೊಂದು ಅಭಿಶಾಪವಾಗಿ ಪರಿಣಮಿಸಿದೆ. ಈ ಮದ್ದು ಹಾಕುವಿಕೆ ಹೇಗೆ, ಎಲ್ಲಿಂದ ಹುಟ್ಟಿ ಬೆಳೆದುಬಂತು ಎಂಬುದನ್ನು ಖಚಿತವಾಗಿ ಹೇಳುವುದಕ್ಕೆ ಯಾವ ದಾಖಲೆಗಳೂ ದೊರೆಯುವುದಿಲ್ಲ. ಆದರೆ 'ಅತ್ತರೆ ಅಳಲವ್ವ ಈ ಕೂಸು ಎನಗಿರಲಿ, ಕೆಟ್ಟರೆ ಕೆಡಲಿ ಮನೆಗೆಲಸ' ಎಂಬ ಜಾನಪದ ಗೀತೆಗೆ ತದ್ವಿರುದ್ಧವಾಗಿ, 'ತಾಯಿ'ಯ ಅತ್ಯುನ್ನತ ಸ್ಥಾನ ಗೌರವವನ್ನು ಪಡೆದ ಮಹಿಳೆ, ಸಮಾಜದ ತೀರಾ ಹಸುಗೂಸುಗಳನ್ನೂ ಬಿಡದೆ ಮದ್ದು ಹಾಕಿ ಹತ್ಯೆಗೈದು ನೆಮ್ಮದಿ ಪಡುವುದು ಹೌದಾದರೆ ಅಚ್ಚರಿ–ಸಿಟ್ಟು ಎರಡೂ ಏಕಕಾಲದಲ್ಲಿ ಉಂಟಾಗುವುದು ಸಹಜ. ಸಾಮಾನ್ಯವಾಗಿ ಗಂಡಸತ್ತವರು, ಮಕ್ಕಳಾಗದಿದ್ದವರು ಮದ್ದು ಹಾಕುತ್ತಾರೆಂಬ ಪ್ರತೀತಿ ಇದೆ. ಗಂಡಸರು ಮದ್ದು ಹಾಕುತ್ತಾರೆಂಬುದನ್ನು ನಾನಂತೂ ಈವರೆಗೆ ಯಾರಿಂದಲೂ ಕೇಳಿಲ್ಲ.

ಮದ್ದು ಹಾಕುವುದರ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಸಾಧಾರಣವಾಗಿ ಈ ಕೆಳಗಣ ಕಾರಣಗಳು ನಮ್ಮ ದೃಷ್ಟಿಗೋಚರವಾಗುತ್ತವೆ. ಅಷ್ಟೇ ಅಲ್ಲ, ಅವು ಹೌದು ಅಂತಲೂ ಅನ್ನಿಸುತ್ತದೆ.

ಭಾರತೀಯರು ಪಾಪ–ಪುಣ್ಯದ ನಿಟ್ಟನಲ್ಲೇ ಬೆಳೆದುಬಂದ ಪುನೀತರು. ಆಚಾರ–ಪುರಾಣಗಳ ನಂಬಿಕೆಯನ್ನು ಕಿಂಚಿತ್ತೂ ಪ್ರಶ್ನಿಸದೇ ಮತ್ತೊಬ್ಬನಿಗೆ ಪ್ರಶ್ನಿಸಲೂ ಬಿಡದೆ ಬದುಕಿಬಂದವರು. ಪುನರ್ಜನ್ಮದ ಬಗೆಗಂತೂ ಅಪಾರವಾದ ಶ್ರದ್ಧೆ ಅವರಿಗೆ. ಹಾಗಾಗಿ ಮದ್ದು ಹಾಕಿದರೆ ಮುಂದಿನ ಜನ್ಮದಲ್ಲಿ ತಮಗೆ ಮಕ್ಕಳಾಗುತ್ತವೆಂಬುದು ಹೆಂಗಸರ ಬಲವಾದ ನಂಬಿಕೆ. ಈ ದೇಶದಲ್ಲಿ ಒಬ್ಬರನ್ನು ಕೊಲ್ಲುವುದೂ ವ್ಯಕ್ತಿಯೊಬ್ಬನಿಗೆ ಖುಷಿಕೊಡುತ್ತದೆ ಅಂದರೆ ನಗು ಬರಬಹುದು. ಆದರೆ ಅದು ಒಮ್ಮೆ ನಕ್ಕು ತಳ್ಳಿಬಿಡಬಹುದಾದ ಅಂಶವಾಗಿಲ್ಲ.

ಮಕ್ಕಳ ಹಂಬಲದಿಂದ–ವಂಶಾಭಿವೃದ್ಧಿಗಾಗಿ ಮದ್ದು ಹಾಕುತ್ತಾರೆಂದಮಾತ್ರಕ್ಕೆ ಬಂಜೆಯರು ಮಾತ್ರ ಈ ಕ್ರೂರ ಕೃತ್ಯವೆಸಗುತ್ತಾರೆಂದರೆ ಅದು ಸರಿಯಲ್ಲ. ಹಾಗೆ ನೋಡಿದರೆ ಮಕ್ಕಳನ್ನು ಹೆತ್ತವರೇ ಹೆಚ್ಚು ಪ್ರಮಾಣದಲ್ಲಿ ಈ ಕಸುಬನ್ನು ಮೈಗೂಡಿಸಿಕೊಂಡಿರುತ್ತಾರಂತೆ. ಅದಕ್ಕೆ ಕಾರಣ ಹೊಟ್ಟೆಕಿಚ್ಚು (ನೋವು). ಮದ್ದು ಹಾಕಿದರೆ ಅವರ ಹೊಟ್ಟೆನೋವು ಕಡಿಮೆಯಾಗುವುದಂತೆ ! ಅವರಿಗೆ ಯಾರೂ ಸಿಗದಿದ್ದರೆ ತಮ್ಮ ಮಕ್ಕಳಿಗೆ, ಗಂಡಂದಿರಿಗೆ, ಅಕ್ಕ–ತಂಗಿಯರಿಗೆ, ಅಂತಿಮವಾಗಿ ಕಾಗೆಗೆ ಮದ್ದು ಹಾಕಲೂ ಹೇಸುವುದಿಲ್ಲ ಎನ್ನುವುದು ನಿಜವಾದರೆ ಅಂತಃಕರಣ, ಪ್ರೀತಿ, ವಿಶ್ವಾಸ, ಸೋದರಿಕೆ ಮುಂತಾದ ಮಾನವೀಯ ಗುಣಗಳಿಗೆ ಅವರ ಬಳಿ ಸ್ಥಳವಿಲ್ಲ ಎಂದೇ ಹೇಳಬೇಕು. ಹಾಗಾಗಿ ಮತ್ತೊಬ್ಬರ ಸಾವಿನಮೇಲೆ ತಮ್ಮ ಬದುಕನ್ನು

ನಿರ್ವಿಸಿಕೊಳ್ಳುವ, ಯಾರೊಬ್ಬರ ಸೌಂದರ್ಯವನ್ನಾಗಲೀ ಅಭಿವೃದ್ಧಿಯನ್ನಾಗಲೀ ಕಂಡು ಕರುಬುವ, ಅಸೂಯೆಪಡುವ ಅವರ ಛಾತಿ, ನಮ್ಮ ಪ್ರಾಣಕ್ಕೆ ಭೀತಿ.

ರಕ್ತದ ಕೆಲವು ಗುಣಗಳು ಜೀನ್ಸ್‌ನ ಮೂಲಕ ವಂಶಪಾರಂಪರ್ಯವಾಗಿ ಹರಿದು ಬರುತ್ತವೆ ಎಂಬುದು ವೈಜ್ಞಾನಿಕ ಸಿದ್ಧಾಂತ. ಮದ್ದು ಹಾಕುವಿಕೆಯೂ ಆನುವಂಶಿಕ ಎನ್ನುವುದಾದರೆ ಅದು ತಾಯಿಯಿಂದ ಮಗಳಿಗೆ ಮಾತ್ರ ಹರಿಯಬಲ್ಲುದೇ ಹೊರತು ಮಗನಿಗಲ್ಲ ಎಂಬ ವಾದಕ್ಕೆ ಹುರುಳಿಲ್ಲ. ಅದ್ದರಿಂದಲೂ, ತಾಯಿ ತಾನು ಸಾಯುವಾಗ ತನ್ನ ಮಗಳಿಗೆ ಹೇಳಿಕೊಟ್ಟೇ ಸಾಯುತ್ತಾಳೆ ಎಂಬ ಗೌಜು ಇರುವುದರಿಂದಲೂ ಈ ಪದ್ಧತಿ ಅನುವಂಶಿಕಕ್ಕಿಂತ ಬದಲಾಗಿ ಸಾಂಪ್ರದಾಯಿಕ ಎಂಬುದೇ ಹೆಚ್ಚು ಸಮಂಜಸವಾಗುತ್ತದೆ.

ಹಿಂದೂ ಧರ್ಮದಲ್ಲಿ ಸರ್ಪಕ್ಕೊಂದು ವಿಶಿಷ್ಟ ಸ್ಥಾನವಿದೆ. ಈ ಸರ್ಪ 'ಮುದಿ'ಯಾದ ನಂತರದ ರೂಪಾಂತರವೇ ಗೋದಿನಾಗ ಎಂಬುದು ಕೆಲವರ ಅಂಬೋಣ; ಸರ್ಪ ಸತ್ತ ಮೇಲೆ ಗೋದಿನಾಗವಾಗುತ್ತೆ ಎಂಬುದು ಇನ್ನೂ ಕೆಲವರ ವಾದ. ಗೋದಿನಾಗ ಅದರಷ್ಟಕ್ಕೆ ಅದೇ ವಿಷವಲ್ಲ; ಅದು HUMAN PROTENEನೊಂದಿಗೆ ಬೆರೆತಾಗ ವಿಷವಾಗುತ್ತದೆ ಎಂಬುದು ಪ್ರಾಣಿಶಾಸ್ತ್ರಜ್ಞರ ಅಭಿಮತ. ವಿಶ್ವಕೋಶದ ಪ್ರಕಾರ ಹಲ್ಲಿಯೇ ಹಾವುಗಳಿಗೆ ಮೂಲ. ಗೋದಿನಾಗವೂ ಹಲ್ಲಿಯ ಒಂದು ಜಾತಿಯೇ. ಅದ್ದರಿಂದ ಹಾವಿನ ಮೂಲವಾದ ಅದೂ ವಿಷ ಎಂಬ ಮಾತನ್ನು ಅಷ್ಟೊಂದು ಸುಲಭವಾಗಿ ಅಲ್ಲಗಳೆಯಲಾಗುವುದಿಲ್ಲ. ಅದೇನೇ ಇರಲಿ, ಗೋದಿನಾಗವನ್ನು ಮದ್ದು ತಯಾರಿಕೆಯಲ್ಲಿ ಉಪಯೋಗಿಸುತ್ತಾರೆಂಬುದು ಇಲ್ಲಿ ಗಮನಿಸಬೇಕಾದ ಅಂಶ. ಈ ಗೋದಿನಾಗವನ್ನು ಕೊಂದು ನೇತುಹಾಕಿ ಅದು ಕೊಳೆತು ಸೋರಲು ತೊಡಗಿದಾಗ ಆ ವಿಷವನ್ನು ಶೇಖರಿಸುತ್ತಾರಂತೆ ಇಂಥ ಒಂದು ಹನಿಯನ್ನು ಹಾಕಿದರೂ ಅದು SLOW POISON ಆಗಿ ಕೆಲಸಮಾಡುತ್ತದೆ. ಅದ್ದರಿಂದ ಮದ್ದಿಡಾದ ಜನ ದಿನದಿನಕ್ಕೆ ಅಶಕ್ತರಾಗುತ್ತಾ ಕೊನೆಗೊಂದು ದಿನ ಸಾಯುತ್ತಾರೆ.

ಸ್ತ್ರೀಯರ ರಜಸ್ಸಿನ ಅಂಶ, ಇಲಿಹಿಕ್ಕೆ, ಅಕ್ಕಿಯಲ್ಲಿ ಬರುವ ಕಲ್ಲು–ಇವನ್ನೂ ಸಹ ಮದ್ದು ಎಂದು ಕರೆಯುವುದುಂಟು. ಆದರೆ ಇವುಗಳ ಬಗ್ಗೆ ಇಂಗ್ಲಿಷ್ ವೈದ್ಯರದು ಭಿನ್ನಾಭಿಪ್ರಾಯ.

ಮದ್ದು ಹಾಕುವುದೊಂದು ಕರಕುಶಲ ಕಲೆ. ಮದ್ದು ಹಾಕಿದ್ದು ಹಾಕಿಸಿಕೊಂಡವರಿಗೆ ಗೊತ್ತಾಗಕೂಡದು. ಹಾಗೇನಾದರೂ ಗೊತ್ತಾದ್ದೇ ಆದರೆ ಅದು ತನ್ನ ಪ್ರಭಾವವನ್ನು ಬೀರುವುದಿಲ್ಲ ಎಂಬುದೊಂದು ವಾಡಿಕೆ ಇದೆ. ಹಾಗಾಗಿ ಸರ್ವೇಸಾಮಾನ್ಯವಾಗಿ ಹಾಲಿನಲ್ಲೋ, ಕಾಫಿಯಲ್ಲೋ ಅಥವಾ ಮತ್ತಾವುದೋ ಪದಾರ್ಥದಲ್ಲಿಯೋ ಬೆರೆಸಿ ಅತ್ಯಂತ ಪ್ರೀತಿಯಿಂದ ಒತ್ತಾಯದೊಡನೆ ನೀಡುತ್ತಾರೆ. ಅದರ ಬಣ್ಣ ಹಸಿರಾಗುವ ಮೊದಲು ಅವರ ಪ್ರೀತಿಯ ಮಾತಿಗೆ ಮಾರುಹೋಗಿ ಮರುಳಾಗಿ ಪದಾರ್ಥವನ್ನು ಸೇವಿಸಿರುತ್ತೇವೆ. ತಡವಾಗಿ ಸೇವಿಸಿಯಾರೆಂಬ ಭಯದಿಂದ ಕೆಲವೊಮ್ಮೆ ತಣ್ಣನೆ ಪದಾರ್ಥದಲ್ಲಿ, ಇನ್ನು ಕೆಲವೊಮ್ಮೆ ಉಗುರಿನ ತುದಿಯಲ್ಲಿ ತಂದು ಆಹಾರ ನೀಡುವ ಹೊತ್ತಿಗೆ ಸರಿಯಾಗಿ ಹಾಕುವ ಅವರ ಕೈಚಳಕವನ್ನು ಒಪ್ಪುವುದಾದರೆ ಅವರ ಆ ಚಾಣಾಕ್ಷತನ ಮೆಚ್ಚುವಂಥಾದ್ದೇ! ಅದಕ್ಕಾಗಿಯೇ ಮದ್ದು ಹಾಕುವುದೊಂದು ಕರಕುಶಲ ಕಲೆ ಎಂದು ಭಾವಿಸಲಾಗಿದೆ.

ಮದ್ದು ಹಾಕಿದ ಒಂದು ತಿಂಗಳಲ್ಲಿ ಮೈ, ಕೈ, ಮುಖ ಅಷ್ಟೇ ಏಕೆ ಸಂಪೂರ್ಣ ಶರೀರವೇ ಬಿಳಿಚಿಕೊಳ್ಳುತ್ತದೆ. ಮಲಬದ್ಧತೆ, ತಲೆತಿರುಗು, ಹೊಟ್ಟೆಉಬ್ಬುವಿಕೆ ಇತ್ಯಾದಿ ಅಲಸಿಕೆ

ಉಂಟಾಗುತ್ತವೆ. ಕೈಕಾಲು ಗಂಟುಗಳಲ್ಲಿ ತೀವ್ರ ನೋವು ಕಾಣಿಸಿಕೊಂಡು ನಡೆಯುವುದಿರಲಿ ಅಕ್ಷರ ಬರೆಯುವುದಕ್ಕೂ ಆಗದಿರುವಷ್ಟರ ಮಟ್ಟಿನ ಅಶಕ್ತತೆ ಉಂಟಾಗುತ್ತದೆ. ನಾಲಿಗೆಗೆ ರುಚಿಯಿರದ ಪರಿಣಾಮವಾಗಿ ಊಟ ಸೇರದಿದ್ದರೂ ತಿಂಡಿ ಮಾತ್ರ ತಿನ್ನೋಣ ಅನ್ನಿಸುತ್ತದೆ. ಆಹಾರ ಸೇವಿಸಿದರೆ ಕಮರು ತೇಗು ಪ್ರಾರಂಭವಾಗಿ ಹೊಟ್ಟೆಕಲ್ಲಾಗಿ ಕಣ್ಣು ಹಳದಿಯಾಗುವುದು. ಪ್ರಪಂಚವೇ ಬೇಡ ಎನ್ನಿಸುವಷ್ಟರ ಮಟ್ಟಿಗೆ ಜೀವನದಲ್ಲಿ ನಿರುತ್ಸಾಹ-ಜಿಗುಪ್ಸೆ ಉಂಟಾಗುತ್ತದೆ.

ಮದ್ದನ್ನು ಯಾವ ಪದಾರ್ಥದೊಂದಿಗೆ ಬೆರೆಸಿ ಹಾಕಿರುತ್ತಾರೆ, ಆ ಪದಾರ್ಥ ಜೀರ್ಣವಾಗದೆ ಹಾಗೇ ಉಳಿದುಕೊಳ್ಳುವುದಲ್ಲದೆ ಆ ಪದಾರ್ಥದ ಮೇಲೆ ಜೀಕರಿಕೆ ಉಂಟಾಗುವುದು. ಮದ್ದು ಹಾಕಿಸಿಕೊಂಡ ಮನುಷ್ಯ ಒಂಭತ್ತು ತಿಂಗಳೊಳಗೆ ಏನೂ ಔಷಧಿ ಮಾಡದಿದ್ದರೆ ಜೀರ್ಣವಾಗದ ಪದಾರ್ಥ ಗಡ್ಡೆಯಾಗಿ ಪರಿವರ್ತನೆಗೊಂಡು ಅದರ ಮೇಲೆ ಕೂದಲು ಬೆಳೆಯುತ್ತದೆಂಬುದರಿಂದ ಆದಷ್ಟು ಶೀಘ್ರವಾಗಿ ಚಿಕಿತ್ಸೆ ಪಡೆಯಬೇಕು ಎಂಬುದು ಅನುಭವಿಗಳ ಮಾತು.

ಇಲ್ಲಿ ಹೇಳಬೇಕಾದ ಮತ್ತೊಂದು ಅಂಶವೆಂದರೆ—ಮದ್ದು ಹಾಕಿದ್ದು ನಮಗೆ ತಿಳಿದರೆ ಅದು ಹೇಗೆ ನಿಷ್ಪ್ರಯೋಜಕವೋ ಹಾಗೆಯೇ ನಾವು ಔಷಧಿ ಸೇವಿಸುವುದು ಮದ್ದು ಹಾಕಿದ ಜನರಿಗೆ ತಿಳಿದರೂ ಅಷ್ಟೇ ಅಪ್ರಯೋಜಕವಂತೆ. ನಮ್ಮ ಔಷಧಿ ಸೇವನೆ ತಿಳಿದೊಡನೆ ಅವರು ಹೊಸ್ತಿಲ ಮೇಲೆ ಬೆತ್ತಲೆಯಾಗಿ ನಿಂತು ತಮ್ಮ ಲಂಗೋಟಿ ಯಾ ಕಾಚಾವನ್ನು ಹಿಂದು ಮುಂದು ಮಾಡಿ ಧರಿಸುತ್ತಾರಂತೆ. ಹಾಗೆ ಮಾಡುವುದರಿಂದ ನಮಗೆ ಔಷಧಿ ನಾಟುವುದಿಲ್ಲವೆಂದು ಕೇಳಿದ್ದೇನೆ. ಹೀಗೆ ಮಾಡುವುದಕ್ಕೂ, ಹಿಂದೆ ಹೇಳಿದಂತೆ ಸ್ತ್ರೀಯರ ರಜಸ್ಸಿನ ಅಂಶವೂ ಮದ್ದು ಎನ್ನುವುದಕ್ಕೂ, ಹೆಂಗಸರು ಮಾತ್ರ ಮದ್ದು ಹಾಕುತ್ತಾರೆನ್ನುವುದಕ್ಕೂ, ಒಂಭತ್ತು ತಿಂಗಳಲ್ಲಿ ಜೀರ್ಣವಾಗದ ಪದಾರ್ಥ ಗಡ್ಡೆಯಾಗುತ್ತದೆ ಎನ್ನುವುದಕ್ಕೂ ಏನಾದರೂ ಪರಸ್ಪರ ಪೂರಕವಾದ, ಕಾರ್ಯಕಾರಣ ಅಥವಾ ಕಾಕತಾಳೀಯ ಸಂಬಂಧವಿದೆಯೇನೋ ಎಂಬ ಗುಮಾನಿ ನಮ್ಮಲ್ಲಿ ಉಂಟಾದರೆ ಅದು ತಪ್ಪಂತೂ ಅಲ್ಲ.

ಗಿಡಮೂಲಿಕೆಯಿಂದ (ಸುಗ್ಗೀಸೊಪ್ಪು ಎಂಬ ತಿಳುವಳಿಕೆ) ತಯಾರಾದ ರಸವನ್ನು ಮದ್ದೀಡಾದವರ ಕೈಮೇಲೆ ಹಾಕಿದಾಗ ದೋಸೆ ಇನ್ನಿತರ ಗಟ್ಟಿ ಪದಾರ್ಥದಲ್ಲಿ ಮದ್ದನ್ನು ಹಾಕಿದ್ದರೆ ಆ ರಸ ಕೈಮೇಲೆ ಗಟ್ಟಿಯಾಗುತ್ತದೆ. ಹಾಲು, ಮಜ್ಜಿಗೆ ಇನ್ನಿತರ ದ್ರವರೂಪದಲ್ಲಿ ಹಾಕಿದ್ದರೆ ಆ ರಸ ನೀರಾಗಿ ಹರಿದು ಕೆಳಗೆ ಬೀಳುತ್ತದೆ. ಆದಕಾರಣ, ಮದ್ದನ್ನು ಕೈಯ ಚಮತ್ಕಾರದಿಂದ ಹಾಕುವುದರಿಂದ ಅಥವಾ ರೋಗಿಯ ಕೈಮೇಲೆ ಪರೀಕ್ಷೆ ನಡೆಸುವುದರಿಂದ ಇದನ್ನು 'ಕೈಮದ್ದು' ಅಥವಾ 'ಕೈಮಸಬು' ಹಾಕುವುದು ಎಂದೂ ಕರೆಯುವುದುಂಟು.

ಬೆಳ್ಳಿ ಅಥವಾ ಹಿತ್ತಾಳೆ ಉಂಗುರದಿಂದ ಅಂಗೈ ಮೇಲೆ ತೀಡಿದರೆ ಚರ್ಮದ ಬಣ್ಣ ಹಸಿರಾಗುವುದು.

ಶೇಂಗೇಬೀಜವನ್ನು ಮೂತ್ರದಲ್ಲಿ ರಾತ್ರಿ ನೆನಸಿಟ್ಟರೆ ಬೆಳಗಾಗುವುದರೊಳಗೆ ಅದು ಉಬ್ಬುತ್ತದೆ.

ಇದು ವೈಜ್ಞಾನಿಕ ಪರೀಕ್ಷೆಗೆ ಎಟುಕದ ರೋಗ. ಹಾಗಾಗಿ ಇದರ ಪರೀಕ್ಷೆಗೆ ನಾವು ಮತ್ತೆ ಜನಪದ ವೈದ್ಯರನ್ನೇ ಮೊರೆಹೋಗಬೇಕು. ಹಳ್ಳಿಯಲ್ಲಿ ಕೆಲವರಿಗೆ ಮಾತ್ರ ಇದನ್ನು ಪರೀಕ್ಷಿಸಿ, ಚಿಕಿತ್ಸೆ ನೀಡುವ ತಂತ್ರ ತಿಳಿದಿರುತ್ತದೆ. ಆದಕಾರಣ, ಈ ವ್ಯಾಧಿಗೆ ತುತ್ತಾದವರು ಗಿಡಮೂಲಿಕೆ ಮೂಲಕ ಚಿಕಿತ್ಸೆ ನೀಡುವ ಗ್ರಾಮೀಣ ವೈದ್ಯರಿಗೇ ಶರಣುಹೋಗಬೇಕು, ಜತೆಯಲ್ಲೊಂದು ತೆಂಗಿನಕಾಯಿಯೊಡನೆ.

೧. ಅವರು ನೀಡುವ ಒಂದು ಬೇರನ್ನು ಕೊರಳಿಗೆ ಕಟ್ಟಿಕೊಂಡು ಪ್ರತಿದಿನ ಎರಡು-ಮೂರು ಬಾರಿಯಂತೆ ಒಂದು ತಿಂಗಳು ಸ್ನಾನ ಮಾಡಿದರೆ ಆ ಬೇರಿನ ನೀರು ಮೈಮೇಲೆ ಬೀಳುವುದರಿಂದ ಗುಣವಾಗುತ್ತದೆ. ೨. ಕೆಲವೊಮ್ಮೆ ವಾಂತಿಯಾಗುವುದಕ್ಕೂ ಔಷಧಿ ನೀಡುತ್ತಾರೆ. ಆದರೆ ಅದರಿಂದ ರಕ್ತವಾಂತಿಯೂ ಆಗುವ ಸಂಭವವಿರುವುದರಿಂದ ಅಪಾಯಕಾರಿ. ಅಲ್ಲದೆ ಉಪವಾಸ ಮಾಡುವವರು ಸಾಯುವ ಸನ್ನಿವೇಶಗಳೂ ಉಂಟು. ವಾಂತಿಯಾದರೆ ಮದ್ದು ಹಾಕಿದ ಪದಾರ್ಥದೊಡನೆ ಗಡ್ಡೆಯೂ ಹೊರಬೀಳುತ್ತದೆ. ೩. ಅವರೇ ನೀಡುವ ಮತ್ತೊಂದು ರೀತಿಯ ಬೇರು ಮತ್ತು ಚಕ್ಕೆಯನ್ನು ಗಂಧದ ಕಲ್ಲಿನಲ್ಲಿ ತೇಯ್ದು ಮೂರುದಿನ ಬೆಳಿಗ್ಗೆ ತಿನ್ನಬೇಕು. ನಂತರ ಆ ಮೂರುದಿನವೂ ಸೇರಿದಂತೆ ಒಂಬತ್ತು ದಿನ ಪಥ್ಯ ಮಾಡಬೇಕು. (ಪಥ್ಯವೆಂದರೆ ಉಪ್ಪು, ಹುಳಿ, ಖಾರ ಏನೂ ಇಲ್ಲದ ಬರಿಯ ಅಕ್ಕಿ ಗಂಜಿಯನ್ನು ಅಥವಾ ಬರಿಯ ಆಕಳ ಹಾಲನ್ನು ಸೇವಿಸಿಕೊಂಡಿರುವುದು). ಇದು ಕೂಡ ಶೀಘ್ರ ಉಪಶಮನಕಾರಿ.

ಮದ್ದು ಹಾಕುವ ಮಂದಿ ನಮಗೆ ಮೊದಲೇ ತಿಳಿದಿದ್ದರೆ ಅಥವಾ ಸಂಶಯವಿದ್ದರೆ ಆಹಾರ ಸೇವಿಸುವ ಮೊದಲು ಅಥವಾ ನಂತರ ಒಂದು ಏಲಕ್ಕಿಯನ್ನಾಗಲೀ ಅಥವಾ ಉಪ್ಪು ತಿಂದರಾಗಲೀ ಕೂಡಲೇ ವಾಂತಿಯಾಗಿ ಮದ್ದು ಹೊರಗೆ ಗೋಚರಿಸುತ್ತದೆಂಬುದರಿಂದ ಹಾಗೆ ಮಾಡುವುದು ಒಳಿತು ಏನೇ ಆದರೂ 'ಮದ್ದು ಹಾಕುವಿಕೆ' ಗ್ರಾಮೀಣ ಪ್ರದೇಶದ ಮಹಿಳಾ ಸಾಮ್ರಾಜ್ಯದಲ್ಲಿನ ಅದರಲ್ಲೂ ನಾನು ಕೇಳಿದಂತೆ ಲಿಂಗಾಯಿತ ಮತ್ತು ಬ್ರಾಹ್ಮಣ ಹೆಂಗಸರಲ್ಲಿ ಮಾತ್ರ ಕಾಣಬರುವಂಥ ಅತಿದೊಡ್ಡ ದುರಂತ, ನೀಚಕೃತ್ಯ ಕೂಡ. ಇದೂ ಒಂದು ನಮೂನೆಯ ವಿಶ್ವಾಸ ಕೊಲೆಯೇ ಅಪರಾಧ, ರುಜುವಾತಾದ ಹೆಂಗಸರಿಗೆ, ಕೊಲೆಗಡುಕರಿಗೆ ನೀಡುವ ಶಿಕ್ಷೆಯನ್ನೇ ವಿಧಿಸುವುದಕ್ಕೂ ಸರ್ಕಾರ ಹಿಂಜರಿಯಬಾರದು. ಸಮಾಜವಾದರೂ ಅಂತಹವರಿಗೆ ಮನ್ನಣೆ ಸಹಕಾರ ನೀಡಬಾರದೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಇಷ್ಟೆಲ್ಲಾ ವಿವರಣೆ ನೀಡಿದ ಮೇಲೂ ಹಾಗಾದರೂ ಇದನ್ನು ರುಜುವಾತುಪಡಿಸುವುದು ಹೇಗೆ ಎಂದು ಕೇಳಿದರೆ ಅದಕ್ಕೆ ನಾನು ಉತ್ತರಿಸಲಾರೆ. ಏಕೆಂದರೆ ಮೊದಲೇ ಸೂಚಿಸಿದಂತೆ ಇವೆಲ್ಲವೂ ಹೇಳಿ-ಕೇಳಿ ಬರೆದ ಅಂತೆ-ಕಂತೆಗಳು ಅಷ್ಟೆ. ಕೆಲವೊಂದು ನನ್ನ ಜೀವಂತ ಅನುಭವವೂ ಹೌದು. ಒಟ್ಟಿನಲ್ಲಿ ನಾನು ಹೇಳಬೇಕಾದ್ದು ಇಷ್ಟೆ. ದೃಷ್ಟಾಂತ ಮತ್ತು ಸೈದ್ಧಾಂತಿಕವಾಗಿ ಈ ಬಗ್ಗೆ ನಾವು ರುಜುವಾತುಪಡಿಸುವುದಾಗಲೀ, ನಿರ್ಧಾರಯುತವಾದ ಒಂದು ತೀರ್ಮಾನಕ್ಕೆ ಬರುವುದಾಗಲೀ ಸಾಧ್ಯವಿಲ್ಲ. ಮೇಲೆ ಹೇಳಿದ ಚಿಹ್ನೆಗಳಿಗೆ ನಾನು ಹೇಳಿದಂತೆ ಔಷಧಿ ಮಾಡಿಸಿದರೆ ಅದರಿಂದ ಗುಣವಾಗುವುದಂತೂ ನಿಶ್ಚಿತ. ಆದರೆ ಅದು ಮದ್ದು ಖಾಯಿಲೆಯೇ ಹೌದೇ ಅಥವಾ ಅಲ್ಲವೇ ಎನ್ನುವುದು-ಜಿಜ್ಞಾಸೆಗೆ ಒಳಪಟ್ಟಂತಹ ವಿಚಾರ. ಕೆಲವರು ಮದ್ದುಹಾಕುವಿಕೆಯನ್ನು ನಂಬಬಹುದು. ಇನ್ನು ಕೆಲವರು ಅದನ್ನೊಂದು ಮೂಢನಂಬಿಕೆ ಅನ್ನಬಹುದು. ಗ್ರಾಮೀಣ ಹೆಂಗಸರು. ಅದರಲ್ಲೂ ಲಿಂಗಾಯಿತ ಮತ್ತು ಬ್ರಾಹ್ಮಣ ಹೆಂಗಸರು ಮಾತ್ರ ಈ ಕೆಲಸ ಮಾಡುತ್ತಾರೆ ಎನ್ನುವ ವಾದಿಕೆಯೂ ಬಲವಾಗಿಯೇ ಇದೆ. ಅವಾವುದನ್ನೂ 'ಇದಮಿತ್ಥಂ' ಎಂದು ಹೇಳಲಿಕ್ಕಾಗುವುದಿಲ್ಲ. ಗಂಡಸರೂ, ಇತರೆ ಜಾತೀಯ ಹೆಂಗಸರೂ ಹಾಕಬಾರದೆಂದೇನಿಲ್ಲವಲ್ಲ. ಒಮ್ಮೆ ಹಾಕುತ್ತಾರೆಂದರೂ ಇಡಿಯ ಸ್ತ್ರೀಸಮಾಜವನ್ನಾಗಲೀ ಅಥವಾ ಪುರುಷ ಸಮಾಜವನ್ನಾಗಲೀ ಅಪಮಾನಕ್ಕೆ ಗುರಿಪಡಿಸುವುದೂ ತರವಲ್ಲ. ಇದೊಂದು ಸಾಮಾಜಿಕ ಸಮಸ್ಯೆ ಎಂಬುದಂತೂ ಸತ್ಯ.

ಡಾ॥ ಎಂ. ಮಾದಯ್ಯ
ಮತ್ತು
ಎಸ್. ಉದಯಶಂಕರ್

ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ

ಇತ್ತೀಚಿನ ವರ್ಷಗಳಲ್ಲಿ ಅಂತರರಾಷ್ಟ್ರೀಯ ಆರ್ಥಿಕವಲಯಗಳಲ್ಲಿ – ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು, ಸಮ್ಮೇಳನಗಳು ಮತ್ತಿತರ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ – ಅತ್ಯಂತ ಹೆಚ್ಚು ಚರ್ಚೆಗೊಳಪಟ್ಟಿರುವ ವಿಷಯವೆಂದರೆ ಬದಲಾಗುತ್ತಿರುವ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳು ಅಥವಾ "ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ" (New International Economic Order)ಯ ಸ್ಥಾಪನೆ. ಕಳೆದ ಆರೇಳು ವರ್ಷಗಳಿಂದ – 1973ರ ತೈಲ ಬೆಲೆಯೇರಿಕೆಯ ಅನಂತರ – ತೃತೀಯ ಜಗತ್ತಿನ ರಾಷ್ಟ್ರಗಳು ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಗಾಗಿ ತೀವ್ರ ಬೇಡಿಕೆಯನ್ನು ಮುಂದಿಡುತ್ತಿವೆ.

ಹೊಸ ವ್ಯವಸ್ಥೆಯ ಹುಟ್ಟು – ಬೆಳವಣಿಗೆ

"ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ" (NIEO) ಯೆಂಬ ಪದವು ವ್ಯಾಪಕವಾಗಿ ಬಳಕೆಗೆ ಬರಲು, 1974ರ ಏಪ್ರಿಲ್‌ನಲ್ಲಿ ಅಲ್ಜೀರಿಯಾದ ಅಂದಿನ ಅಧ್ಯಕ್ಷರಾಗಿದ್ದ ಬೌಮೆದೀನರ ಒತ್ತಾಯದ ಮೇರೆಗೆ, ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಮುಖ ಸಮಸ್ಯೆಗಳಾದ 'ಅಭಿವೃದ್ಧಿ ಮತ್ತು ಕಚ್ಚಾ ವಸ್ತು'ಗಳ ಬಗ್ಗೆ ಚರ್ಚಿಸಲು, ಕರೆಯಲಾದ ಸಂಯುಕ್ತ ರಾಷ್ಟ್ರ ಸಂಘದ ಆರನೆಯ ವಿಶೇಷ ಮಹಾಧಿವೇಶನವೇ ಕಾರಣವೆನ್ನಬಹುದು. ಈ ವಿಶೇಷಾಧಿವೇಶನದಲ್ಲಿ "ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಸ್ಥಾಪನೆಯ ಬಗ್ಗೆ ಘೋಷಣೆ ಮತ್ತು ಕಾರ್ಯಸೂಚಿ" (Declaration and Programme of Action on the Establishment of a new International Economic Order) ಎಂಬ ಎರಡು ನಿರ್ಣಯಗಳನ್ನು ಅಂಗೀಕರಿಸಲಾಯಿತು. ಅನಂತರ ಅದೇ ವರ್ಷ ಡಿಸೆಂಬರಿನಲ್ಲಿ ನಡೆದ 29ನೆಯ ನಿಯಮಿತ ಮಹಾಧಿವೇಶನದಲ್ಲಿ "ರಾಷ್ಟ್ರಗಳ ಆರ್ಥಿಕ ಹಕ್ಕುಗಳ ಮತ್ತು ಕರ್ತವ್ಯಗಳ ನಿರೂಪಣೆ" (Charter of Economic Rights and Duties of States)ಯನ್ನು ಬಹುಮತದಿಂದ ಸ್ವೀಕರಿಸಲಾಯಿತು. ಈ ಮೂರು ದಾಖಲೆ ಪತ್ರಗಳೇ ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ತಳಹದಿ.

1975ರ ಸೆಪ್ಟಂಬರಿನಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಂಘದ ಏಳನೆಯ ವಿಶೇಷ ಮಹಾಧಿವೇಶನವು ಅಂತರರಾಷ್ಟ್ರೀಯ ಆರ್ಥಿಕ ಸಹಕಾರದ ಬಗ್ಗೆ ಇನ್ನೊಂದು ನಿರ್ಣಯವನ್ನು

ಸರ್ವಾನುಮತದಿಂದ ಸ್ವೀಕರಿಸಿತು. 1977ರಲ್ಲಿ ಪ್ಯಾರಿಸ್‌ನಲ್ಲಿ, "ದಕ್ಷಿಣೋತ್ತರ" (North-South) ಮಾತುಕತೆಗಳೆಂದು ಪ್ರಸಿದ್ಧವಾದ, ಅಂತರರಾಷ್ಟ್ರೀಯ ಆರ್ಥಿಕ ಸಹಕಾರ ಸಮ್ಮೇಳನವು ನಡೆಯಿತು. ವಿಶ್ವಸಂಸ್ಥೆಯ ವಿವಿಧ ಅಂಗಸಂಸ್ಥೆಗಳು ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ಚರ್ಚಿಸುತ್ತಿವೆ. ಇವುಗಳಲ್ಲಿ ಸಂಯುಕ್ತರಾಷ್ಟ್ರ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನ (UNCTAD)ವು ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಪ್ರಮುಖ ರೂವಾರಿಯಾಗಿದೆ. ವಿಶ್ವಸಂಸ್ಥೆಯ ಕೈಗಾರಿಕಾಭಿವೃದ್ಧಿ ಸಂಸ್ಥೆಯು (UNIDO) 1975ರ ಮಾರ್ಚ್‌ನಲ್ಲಿ ಲಿಮಾದಲ್ಲಿ ನಡೆದ ತನ್ನ ಎರಡನೆಯ ಸಮ್ಮೇಳನದಲ್ಲಿ ಒಂದು ಪ್ರಮುಖ ನಿರ್ಣಯವನ್ನು ಅಂಗೀಕರಿಸಿ, ತೃತೀಯ ಜಗತ್ತಿನ ರಾಷ್ಟ್ರಗಳು ಈ ಶತಮಾನಾಂತ್ಯದೊಳಗೆ ಜಾಗತಿಕ ಕೈಗಾರಿಕೋತ್ಪನ್ನದಲ್ಲಿ ತಮ್ಮ ಪಾಲನ್ನು ಶೇಕಡಾ 7ರಿಂದ 25ಕ್ಕೆ ಏರಿಸಿಕೊಳ್ಳಬೇಕೆಂದು ಕರೆ ನೀಡಿತು.

ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಬಗ್ಗೆ ಇಂದು ವಿಪುಲವಾಗಿ ನಡೆಯುತ್ತಿರುವ ಚರ್ಚೆಯು ಬಹುರೂಪಿಯಾಗಿ, ಬಹು ದಿಶೆಗಳಲ್ಲಿ ಸಾಗುತ್ತಿದೆ. ಹೊಸ ಆರ್ಥಿಕ ವ್ಯವಸ್ಥೆಯು ಎಲ್ಲರ ದೃಷ್ಟಿಯಲ್ಲಿಯೂ ಒಂದೇ ಆಗಿಲ್ಲ. ಇದರಿಂದಾಗಿ ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯೆಂದರೇನೆಂದು ನಿಖರವಾಗಿ ಒಂದು ಸೀಮಿತ ಪರಿಧಿಯೊಳಗೆ ವಿವರಿಸುವುದು ಕಷ್ಟವಾಗಿದೆ. ಆದರೂ, ಹೊಸ ಆರ್ಥಿಕ ವ್ಯವಸ್ಥೆಯ ಅಗತ್ಯ ಮತ್ತು ಅದರ ಬಗ್ಗೆ ಬಡದೇಶಗಳು ಮುಂದಿಡುತ್ತಿರುವ ವಿವಿಧ ಬೇಡಿಕೆಗಳನ್ನು ಸ್ಥೂಲವಾಗಿ ಮತ್ತು ಸಂಕ್ಷಿಪ್ತವಾಗಿ ವಿವರಿಸುವುದೇ ಪ್ರಸ್ತುತ ಲೇಖನದ ಉದ್ದೇಶ.

ಹೊಸ ವ್ಯವಸ್ಥೆಯೇಕೆ?

ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯೆಂದರೆ ವಿವಿಧ ರಾಷ್ಟ್ರಗಳೊಳಗಿನ ವ್ಯಾಪಾರ, ಹಣಕಾಸು, ಆರ್ಥಿಕ ಸಹಕಾರ ಮತ್ತಿತರ ಆರ್ಥಿಕ ಸಂಬಂಧಗಳ ಬಗ್ಗೆ ಸ್ಥಾಪಿಸಲ್ಪಟ್ಟ ಮತ್ತು ಸ್ವೀಕರಿಸಲ್ಪಟ್ಟ ಅಂತರರಾಷ್ಟ್ರೀಯ ಸಂಘಸಂಸ್ಥೆಗಳ ಮತ್ತು ನೀತಿನಿಯಮಗಳ ಒಟ್ಟಾರೆ ವ್ಯವಸ್ಥೆಯೆನ್ನಬಹುದು. ದ್ವಿತೀಯ ಮಹಾಯುದ್ಧಾನಂತರ ಸ್ಥಾಪಿಸಲ್ಪಟ್ಟ ಜಾಗತಿಕ ಆರ್ಥಿಕ ವ್ಯವಸ್ಥೆಯು ಇಂದಿನ ಬದಲಾದ ಅಂತರರಾಷ್ಟ್ರೀಯ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳಿಂದಾಗಿ, ಅಸಮರ್ಪಕವೂ ಅಸಂಪೂರ್ಣವೂ ಆಗಿ ತೋರುತ್ತಿದೆ. ಈ ಅಂತರರಾಷ್ಟ್ರೀಯ ವ್ಯವಸ್ಥೆಯು ಅಭಿವೃದ್ಧಿ ಹೊಂದಿದ ಶ್ರೀಮಂತ ಹಾಗೂ ಬಲಿಷ್ಠ ರಾಷ್ಟ್ರಗಳಿಂದ ರೂಪಿತವಾಗಿ ಅವರ ಹಿಡಿತದಲ್ಲೇ ಇದ್ದ ಒಂದು ವ್ಯವಸ್ಥೆಯಾಗಿತ್ತು; ಅವರ ಹಿತಾಸಕ್ತಿಗಳನ್ನು ಕಾಪಾಡಲು ಹಾಗೂ ಪೋಷಿಸಲು ಸ್ಥಾಪಿಸಲ್ಪಟ್ಟ ವ್ಯವಸ್ಥೆಯಾಗಿತ್ತು. ವಿಶ್ವಸಂಸ್ಥೆ, ಜಾಗತಿಕ ಬ್ಯಾಂಕು, ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆ. ವ್ಯಾಪಾರ ಮತ್ತು ಸುಂಕದ ಸಾಮಾನ್ಯ ಒಪ್ಪಂದ (GATT) ಇವೇ ಈ ವ್ಯವಸ್ಥೆಯ ಆಧಾರಸ್ತಂಭಗಳು.

ಇಂದು ಈ ವ್ಯವಸ್ಥೆಯ ವಿರುದ್ಧ ಬಂಡೆದ್ದಿರುವ ರಾಷ್ಟ್ರಗಳಲ್ಲಿ ಹೆಚ್ಚಿನವು ಯುದ್ಧಾನಂತರ ಜನ್ಮತಳೆದವುಗಳು; ಯುದ್ಧೋತ್ತರ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಪಾಲ್ಗೊಳ್ಳದ ರಾಷ್ಟ್ರಗಳು; ಈ ವ್ಯವಸ್ಥೆಯಲ್ಲಿ ತಮ್ಮ ಪೋಷಣೆಗಿಂತ ಶೋಷಣೆಯೇ ಹೆಚ್ಚು ಎಂದು ಮನವರಿಕೆಯಾದ ರಾಷ್ಟ್ರಗಳು. ದೀರ್ಘಕಾಲ ವಸಾಹತುಶಾಹಿ ವ್ಯವಸ್ಥೆಯ ದಮನಕ್ಕೊಳಗಾಗಿ ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಸ್ವಾತಂತ್ರ್ಯ ಪಡೆದ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕದ ಸಣ್ಣ ಪುಟ್ಟ ಹಾಗೂ ಬಡರಾಷ್ಟ್ರಗಳದೇ ಇಂದು ಬಹುಮತ.

ಜಾಗತಿಕ ಸಂಪತ್ತು ಮತ್ತು ಆದಾಯದ ಸಮಾನವಾದ ಪುನರ್ ಹಂಚಿಕೆ ಈ ರಾಷ್ಟ್ರಗಳ ಬೇಡಿಕೆಯೆಂಬುದೊಂದು ತಪ್ಪು ತಿಳುವಳಿಕೆ; ಸಮಾನವಾದ ಅವಕಾಶಗಳಿಗೆ ಮಾತ್ರ ಈ ದೇಶಗಳ ಹೋರಾಟ ಸೀಮಿತವಾಗಿದೆ. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಮುಂದುವರಿದ ರಾಷ್ಟ್ರಗಳೊಂದಿಗೆ ಸಮಾನರಂತೆ—ಯಾಚಕರಂತಲ್ಲ—ಸಂಧಾನಗಳನ್ನು ನಡೆಸಬೇಕೆಂಬುದೇ ಮುಂದುವರಿಯುತ್ತಿರುವ ರಾಷ್ಟ್ರಗಳ ಆಶಯ.

''ಹಳೆಯ'' ವ್ಯವಸ್ಥೆಯ ಕುಂದುಕೊರತೆಗಳಿಂದಾಗಿ ಅದು ಕುಸಿಯುತ್ತಿದೆಯೆಂಬುದೂ ಹೊಸವ್ಯವಸ್ಥೆಯ ಬೀಜಾಂಕುರಕ್ಕೆ ಅದೇ ಕಾರಣವೆಂಬುದೂ ನಿಜ; ಆದರೂ ಹೊಸ ವ್ಯವಸ್ಥೆಗಾಗಿ ಅಭಿವೃದ್ಧಿಶೀಲ ರಾಷ್ಟ್ರಗಳು ಹೋರಾಟಕ್ಕಿಳಿಯಲು, 1973ರಲ್ಲಿ ತೈಲನಿರ್ಯಾತ ರಾಷ್ಟ್ರಗಳ ಸಂಘ (OPEC)ವು ತೈಲಬೆಲೆಯೇರಿಸುವುದರಲ್ಲಿ ಪಡೆದ ಯಶಸ್ಸು ಹಾಗೂ ಅದರಿಂದಾಗಿ ತನ್ನ ಶಕ್ತಿಯ ಬಗ್ಗೆ ಉಂಟಾದ ಆತ್ಮವಿಶ್ವಾಸಗಳೇ ಪ್ರಮುಖ ಕಾರಣಗಳೆನ್ನಬಹುದು.

ಹೆಚ್ಚುತ್ತಿರುವ ಅಂತರ

1950ರಲ್ಲಿ ಅಭಿವೃದ್ಧಿಹೊಂದಿದ ರಾಷ್ಟ್ರಗಳ ಸರಾಸರಿ ತಲಾ ಆದಾಯವು ೨೦೦೦ ಡಾಲರುಗಳಷ್ಟಿತ್ತು. 1975ರ ವೇಳೆಗೆ ಅದು 6,000 ಡಾಲರುಗಳಿಗೇರಿತ್ತು. ಆದರೆ ಅದೇ ಅವಧಿಯಲ್ಲಿ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸರಾಸರಿ ತಲಾ ಆದಾಯವು ಕೇವಲ 175 ಡಾಲರುಗಳಿಂದ 400 ಡಾಲರುಗಳಷ್ಟು ಮಾತ್ರ ಹೆಚ್ಚಿತ್ತು. ಅಂದರೆ 25 ವರ್ಷಗಳ ಹಿಂದೆ ಶ್ರೀಮಂತ ರಾಷ್ಟ್ರಗಳ ತಲಾ ಆದಾಯವು ಬಡದೇಶಗಳ ತಲಾ ಆದಾಯಕ್ಕಿಂತ 11 ಪಟ್ಟು ಹೆಚ್ಚಾಗಿದ್ದರೆ, ಈಗ ಅದು 15 ಪಟ್ಟು ಹೆಚ್ಚಾಗಿದೆ. ನೋಬೆಲ್ ಪಾರಿತೋಷಕ ವಿಜೇತ ಸ್ವೀಡಿಷ್ ಅರ್ಥಶಾಸ್ತ್ರಜ್ಞ ಟಿನ್‌ಬರ್ಗೆನ್‌ರವರ ಮಾತಿನಲ್ಲಿ ಹೇಳುವುದಾದರೆ, ''ಇಂದು ಮಾನವ ಜನಾಂಗದ $^{2}/_{3}$ ಭಾಗ ದಿನಕ್ಕೆ 30 ಸೆಂಟ್ಸ್‌ಗಿಂತಲೂ ಕಡಿಮೆ [ರೂ. 2-50ಕ್ಕಿಂತಲೂ ಕಡಿಮೆ] ವರಮಾನದಲ್ಲಿ ಜೀವಿಸುತ್ತಿದೆ—ಅದನ್ನು ಜೀವಿಸುವುದೆಂದು ಹೇಳಬಹುದಾದರೆ ಇಂದು ಜಗತ್ತಿನಲ್ಲಿ ವಿದ್ಯಾಪ್ರಸರಣಕ್ಕೆ ಅಗತ್ಯವಾದ ಸಂಪನ್ಮೂಲ ಮತ್ತು ತಾಂತ್ರಿಕ ಜ್ಞಾನಗಳಿದ್ದರೂ, ಸುಮಾರು ಒಂದು ಬಿಲಿಯನ್ ನಿರಕ್ಷರರಿರುವಂತಹ ಪರಿಸ್ಥಿತಿಯಿದೆ. ಜಗತ್ತಿನ ಎಲ್ಲಾ ಮಕ್ಕಳನ್ನುಣಿಸಲು ಅಗತ್ಯವಾದ ಆಹಾರವಿದ್ದರೂ, ತೃತೀಯ ಜಗತ್ತಿನ ಶೇಕಡಾ 70ರಷ್ಟು ಮಕ್ಕಳು ಪೌಷ್ಟಿಕ ಆಹಾರದ ಕೊರತೆಯಿಂದ ನರಳುತ್ತಿವೆ. ಜಾಗತಿಕ ಸಂಪನ್ಮೂಲಗಳ ವಿತರಣೆಯೂ ಎಷ್ಟು ಅಸಮರ್ಪಕವಾಗಿದೆಯೆಂದರೆ ಕೈಗಾರಿಕಾಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಂಪನ್ಮೂಲಗಳ ತಲಾಬಳಕೆಯು ಬಡರಾಷ್ಟ್ರಗಳಿಗಿಂತ ೨೦ ಪಟ್ಟು ಹೆಚ್ಚಾಗಿದೆ.''[1]

ರಾಷ್ಟಗಳೊಳಗಿನ ಅಂತರವನ್ನು ನಿವಾರಿಸುವುದು ಸಾಧ್ಯವಿಲ್ಲವಾದರೂ, ಅದು ಹೆಚ್ಚದಂತೆ ತಡೆಯುವುದು ಅಸಾಧ್ಯವೇನಲ್ಲ; ಇದು ಅತಿ ಶೀಘ್ರದಲ್ಲಿ ಕೈಗೊಳ್ಳಬೇಕಾದ ಅತ್ಯಗತ್ಯ ಕಾರ್ಯ. ಈ ದಿಕ್ಕಿನಲ್ಲಿ ಬಡದೇಶಗಳ ಸ್ವಪ್ರಯತ್ನ ಮತ್ತು ಶ್ರೀಮಂತ ದೇಶಗಳ ಸಹಕಾರ ಅವಶ್ಯ.

ಪ್ರತಿಕೂಲ ವ್ಯಾಪಾರ ವಿನಿಮಯ ಷರತ್ತುಗಳು (Terms of trade)

ಹೆಚ್ಚಿನ ಅನಭಿವೃದ್ಧ ರಾಷ್ಟಗಳು ಕಾಫಿ, ಚಾ, ಕೋಕೋ, ರಬ್ಬರ್, ಸೆಣಬು, ಹತ್ತಿ, ವಿವಿಧ ಖನಿಜಗಳು ಮುಂತಾದ ಮೂಲ ಉತ್ಪನ್ನಗಳ (Primary products)

ಅಥವಾ ಕಚ್ಚಾವಸ್ತುಗಳ ಉತ್ಪಾದನೆ ಮತ್ತು ರಫ್ತು ಮಾಡುವಂಥವುಗಳು. ಈ ದೇಶಗಳ ರಫ್ತು ವ್ಯಾಪಾರದ ಶೇಕಡಾ 75ರಷ್ಟು ಭಾಗ ಕಚ್ಚಾ ಸರಕುಗಳ ರೂಪದಲ್ಲಿರುತ್ತದೆ. ಈ ಕಚ್ಚಾ ವಸ್ತುಗಳ ಬೆಲೆಗಳು ಬಹಳ ಅಸ್ಥಿರವಾಗಿವೆ; ಅಲ್ಲದೆ ಈ ವಸ್ತುಗಳಬೇಡಿಕೆಗೆ ಆದಾಯ ಮತ್ತು ಬೆಲೆಯ ಸ್ಥಿತಿಸ್ಥಾಪಕ ಗುಣವಿರುವುದಿಲ್ಲ (Income and Price inelastic): ಅಂದರೆ ಇವುಗಳ ಬೇಡಿಕೆಯು ಗ್ರಾಹಕರ ಆದಾಯ ಮತ್ತು ಬೆಲೆಗಳ ಬದಲಾವಣೆಗಳೊಂದಿಗೆ ಬದಲಾಗುವುದಿಲ್ಲ.

ಆದರೆ ಇದೇ ವೇಳೆ ಹಿಂದುಳಿದ ರಾಷ್ಟ್ರಗಳು ಮುಂದುವರಿದ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವ ಕೈಗಾರಿಕೋತ್ಪನ್ನಗಳ ಬೆಲೆಗಳು ನಿರಂತರವಾಗಿ ಏರುತ್ತಿವೆ. ಆದುದರಿಂದ ವ್ಯಾಪಾರ ವಿನಿಮಯ ಷರತ್ತುಗಳು (Terms of trade) ಅನಭಿವೃದ್ಧಿ ರಾಷ್ಟ್ರಗಳಿಗೆ ಬಹಳ ಪ್ರತಿಕೂಲವಾಗಿ ಪರಿಣಮಿಸುತ್ತಿವೆ. ಅಂದರೆ ಒಂದು ನಿರ್ದಿಷ್ಟ ಪ್ರಮಾಣದ ಕೈಗಾರಿಕೋತ್ಪನ್ನಗಳಿಗೆ ಇಂದು ಹೆಚ್ಚು ಹೆಚ್ಚು ಕಚ್ಚಾವಸ್ತುಗಳನ್ನು ವಿನಿಮಯ ಮಾಡಲಾಗುತ್ತಿದೆ. ಕಚ್ಚಾವಸ್ತುಗಳನ್ನು ಕಡಿಮೆ ಬೆಲೆಗೆ ರಫ್ತುಮಾಡಿ ಅವುಗಳಿಂದಲೇ ತಯಾರಿಸಿದ ಸಿದ್ಧವಸ್ತುಗಳನ್ನು ದುಬಾರಿ ಬೆಲೆಗೆ ಆಮದು ಮಾಡಿಕೊಳ್ಳುವ ಉದಾಹರಣೆಗಳು ಅಸಂಖ್ಯಾತ. ಟಿನ್ ಬರ್ಗೆನ್ ರವರ ಪ್ರಕಾರ, "ತೃತೀಯ ಜಗತ್ತಿನ ಸರಕುಗಳಿಗೆ ಮತ್ತು ಆ ಸರಕುಗಳ ಉತ್ಪನ್ನಗಳಿಗೆ, ಕೈಗಾರಿಕಾ ರಾಷ್ಟ್ರಗಳ ಅಂತಿಮ ಬಳಕೆದಾರರು 200 ಬಿಲಿಯನ್ ಡಾಲರುಗಳಿಗಿಂತ ಅಧಿಕ ಬೆಲೆಯನ್ನು ತೆತ್ತರೂ, ಬಡದೇಶಗಳಿಗೆ ಕೇವಲ 30 ಬಿಲಿಯನ್ ಡಾಲರುಗಳು ಮಾತ್ರ ಸಿಗುತ್ತವೆ."[3]

ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನದ (UNCTAD) ಜನನಕ್ಕೆ ಪ್ರಮುಖ ಕಾರಣರಾದ ಅರ್ಜೆಂಟೈನಾದ ಅರ್ಥಶಾಸ್ತ್ರಜ್ಞ ರಾವುಲ್ ಪ್ರೆಬಿಷ್‌ರವರು, 1948 ರಷ್ಟು ಹಿಂದೆಯೇ, ಬಡರಾಷ್ಟ್ರಗಳ ವ್ಯಾಪಾರ ವಿನಿಮಯ ಷರತ್ತುಗಳಲ್ಲಿ ದೀರ್ಘಕಾಲಿಕ ಕುಸಿತವನ್ನು ಗುರುತಿಸಿ, ಆ ಬಗ್ಗೆ ತಮ್ಮದೇ ಒಂದು ಸಿದ್ಧಾಂತವನ್ನು ರೂಪಿಸಿದರು. ಇಂದಿಗೂ ಈ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. 1970 ಮತ್ತು 1975ರ ಮಧ್ಯೆ ತೈಲೇತರ ವೃದ್ಧಿಶೀಲ ರಾಷ್ಟ್ರಗಳ ವ್ಯಾಪಾರ ವಿನಿಮಯ ಷರತ್ತುಗಳು ಶೇಕಡಾ 16ರಷ್ಟು ಕುಸಿದವು (1970 = 100). ಭಾರತದ ವ್ಯಾಪಾರ ಷರತ್ತುಗಳ ಸೂಚ್ಯಾಂಕವು 1976ರಲ್ಲಿ 73 ಆಗಿತ್ತು (1970 = 100).

ಬಡದೇಶಗಳ ಬೇಡಿಕೆಗಳ ಪಟ್ಟಿ :

ವಿವಿಧ ವೇದಿಕೆಗಳಲ್ಲಿ ನಡೆಯುತ್ತಿರುವ ಚರ್ಚೆಗಳ ಆಧಾರದಿಂದ, ಪ್ರಗತಿಪರ ರಾಷ್ಟ್ರಗಳ ಪ್ರಮುಖ ಬೇಡಿಕೆಗಳ ಒಂದು ಪಟ್ಟಿಯನ್ನು ಸಿದ್ಧಗೊಳಿಸಬಹುದು. ಈ ಬೇಡಿಕೆಗಳು ಆ ರಾಷ್ಟ್ರಗಳ ನ್ಯಾಯಬದ್ಧ ಹಕ್ಕುಗಳಾದರೂ, ಅಭಿವೃದ್ಧಿ ಹೊಂದಿದ ದೇಶಗಳು ಇವುಗಳಲ್ಲಿ ಹೆಚ್ಚಿನವುಗಳನ್ನು ಒಪ್ಪಿಕೊಳ್ಳಲು ಸಿದ್ಧವಾಗಿಲ್ಲ.

1. ಅಂತರರಾಷ್ಟ್ರೀಯ ಸರಕು ಒಪ್ಪಂದಗಳು—ಬಡದೇಶಗಳಿಗೆ ನ್ಯಾಯವಾದ ಮತ್ತು ಪ್ರತಿಫಲದಾಯಕವಾದ ಬೆಲೆಗಳ ದೃಢೀಕರಣಕ್ಕೆ ಇಂತಹ, ಉತ್ಪಾದಕ ಮತ್ತು ಗ್ರಾಹಕ ದೇಶಗಳು ಪಾಲ್ಗೊಳ್ಳುವ, ಒಪ್ಪಂದಗಳು ಅಗತ್ಯ. ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನ (UNCTAD)ವು ಈ ದಿಸೆಯಲ್ಲಿ ಬಹಳ ಪ್ರಗತಿ ಸಾಧಿಸಿದ್ದು, ಸರಕುಗಳ ಸಂಯೋಜಿತ ಕಾರ್ಯಕ್ರಮ (Integrated programme of commodities)

ವೊಂದನ್ನು ಕೈಗೆತ್ತಿಕೊಂಡಿದೆ. ಈ ಕಾರ್ಯಕ್ರಮದನ್ವಯ ಸರಕುಗಳ ಅಭಿವೃದ್ಧಿ ಯೋಜನೆಗಳಿಗೆ ಮತ್ತು ಕಾಪು ದಾಸ್ತಾನುಗಳಿಗೆ (Buffer stocks) ಹಣಕಾಸನ್ನೊದಗಿಸಲು ಒಂದು ಸಾಮಾನ್ಯ ನಿಧಿ (Common fund)ಯನ್ನು ಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕಾಗಿ ಬಡದೇಶಗಳು ಉತ್ಪಾದಿಸುವ 18 ಸರಕುಗಳನ್ನು ಗುರುತಿಸಲಾಗಿದ್ದು, ಈ ವ್ಯವಸ್ಥೆಗೆ 6 ಬಿಲಿಯನ್ ಡಾಲರುಗಳ ಸಾಮಾನ್ಯ ನಿಧಿಯು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. 18 ಸರಕುಗಳ ಪೈಕಿ ಪ್ರಾರಂಭದಲ್ಲಿ 10 ಪ್ರಮುಖ ಸರಕುಗಳ ("Core" commodities) ಬಗ್ಗೆ ಒಪ್ಪಂದಗಳನ್ನು ಮಾಡಲಾಗುವುದು. ಈ ಹತ್ತು ಸರಕುಗಳೆಂದರೆ, ತಾಮ್ರ, ತವರ, ಹತ್ತಿ, ಸಕ್ಕರೆ, ಚಹಾ, ಕಾಫಿ, ಕೋಕೋ, ರಬ್ಬರ್, ಸೆಣಬು ಮತ್ತು ಗಟ್ಟಿನಾರುಗಳು (hard fibres). ಈ ಹತ್ತು ಸರಕುಗಳ ಜಾಗತಿಕ ರಫ್ತು ವ್ಯಾಪಾರದಲ್ಲಿ ಬಡದೇಶಗಳ ಪಾಲು ಶೇಕಡಾ 70ರಷ್ಟು. ಸರಕುಗಳ ಈ ಸಂಯೋಜಿತ ಕಾರ್ಯಕ್ರಮವು ಬೆಲೆಗಳ ಮತ್ತು ರಫ್ತು ಆದಾಯದ ಸ್ಥಿರೀಕರಣದಲ್ಲಿ ಸಹಾಯಕವಾಗಬಲ್ಲುದೆಂದು ನಂಬಲಾಗಿದೆ.

2. "ಸೂಚ್ಯಾಂಕ ಬಂಧ" ("Indexation")—ಬಡದೇಶಗಳಿಂದ ರಫ್ತು ಮಾಡಲ್ಪಡುವ ಕಚ್ಚಾ ವಸ್ತುಗಳ ಬೆಲೆಗಳು, ಕೈಗಾರಿಕಾ ರಾಷ್ಟ್ರಗಳಿಂದ ಆಮದು ಮಾಡಲ್ಪಡುವ ಸಿದ್ಧವಸ್ತುಗಳ ಬೆಲೆಗಳಿಗೆ ಸಂಬಂಧವನ್ನು ಹೊಂದಿರಬೇಕು; ಅಂದರೆ ಎರಡೂ ಬೆಲೆಗಳ ಸೂಚ್ಯಾಂಕಗಳು ಪರಸ್ಪರ ಅವಲಂಬಿಸಿರಬೇಕು. "ಸೂಚ್ಯಾಂಕ ಬಂಧ"ದ ಎರಡು ವಿಧಗಳನ್ನು—ಸಾಮಾನ್ಯ ಮತ್ತು ನಿರ್ದಿಷ್ಟ (General and Specific)—ಚರ್ಚಿಸಲಾಗಿದ್ದರೂ, ವ್ಯಾವಹಾರಿಕ ಅಡೆತಡೆಗಳಿಂದಾಗಿ ಈ ಕಲ್ಪನೆಯ ಬಗ್ಗೆ ಇತ್ತೀಚೆಗೆ ವಿಶೇಷ ಗಮನ ಕೊಡಲಾಗುತ್ತಿಲ್ಲ ತಾತ್ವಿಕವಾಗಿ ಈ ಬೇಡಿಕೆಯು ಸಮಂಜಸವಾಗಿ ತೋರುತ್ತಿದ್ದರೂ, ಶ್ರೀಮಂತ ರಾಷ್ಟ್ರಗಳು ಇದನ್ನು ತೀವ್ರವಾಗಿ ವಿರೋಧಿಸುತ್ತಿವೆ.

3. ತನ್ನ ಸಂಪನ್ಮೂಲ ಮತ್ತು ಆರ್ಥಿಕ ಚಟುವಟಿಕೆಗಳ ಮೇಲೆ ಪ್ರತಿಯೊಂದು ರಾಷ್ಟ್ರದ ಸಾರ್ವಭೌಮತ್ವ ಮತ್ತು ಅಗತ್ಯವಿದ್ದಲ್ಲಿ, ಅಂತರರಾಷ್ಟ್ರೀಯ ಕಾನೂನುಗಳನ್ನು ಲಕ್ಷಿಸದೆ, ವಿದೇಶೀ ಬಂಡವಾಳ ಹೂಡಿಕೆಯನ್ನು ಸ್ವಾಧೀನಪಡಿಸಿಕೊಳ್ಳುವ ಹಕ್ಕು—ಇವೆರಡನ್ನು ಎಲ್ಲಾ ರಾಷ್ಟ್ರಗಳು ಒಪ್ಪಿಕೊಳ್ಳಬೇಕು. ಈ ಬೇಡಿಕೆಯು ತೀವ್ರ ವಿವಾದಕ್ಕೊಳಪಟ್ಟಿದ್ದು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಇದನ್ನು ಒಪ್ಪಿಕೊಳ್ಳಲು ಸರ್ವಥಾ ಸಿದ್ಧವಿಲ್ಲ. ಬಹುರಾಷ್ಟ್ರೀಯ ಕಂಪೆನಿಗಳ (Multinationals) ಚಟುವಟಿಕೆಗಳ ನಿಯಂತ್ರಣವು ಈ ಬೇಡಿಕೆಯ ವ್ಯಾಪ್ತಿಯಲ್ಲಿ ಬರುತ್ತದೆ.

4. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಬಡದೇಶಗಳಿಗೆ ವಿಶೇಷ ಆದ್ಯತೆ (Preferential treatment)—ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನದ ಪ್ರಯತ್ನದ ಫಲವಾಗಿ ಸಾಮಾನ್ಯೀಕೃತ ಒಲವಿನ ಯೋಜನೆಯನ್ನು (Generalized scheme of preferences) 1971ರಿಂದೀಚೆಗೆ ಒಟ್ಟು 19 ಮುಂದುವರಿದ ರಾಷ್ಟ್ರಗಳು ಅನುಷ್ಠಾನಕ್ಕೆ ತಂದಿವೆ. 1976ರಲ್ಲಿ ಜಾರಿಗೆ ತಂದ ಅಮೇರಿಕ (USA)ದ ಯೋಜನೆಯೇ ಕೊನೆಯದು. ಈ 19 ಯೋಜನೆಗಳು ಏಕರೂಪದಲ್ಲಿಲ್ಲ; ಪ್ರತಿಯೊಂದಕ್ಕೂ ಅದರದೇ ಇತಿಮಿತಿಗಳಿವೆ. ಪ್ರಸ್ತುತ ಈ ಯೋಜನೆ ಕೇವಲ ಹತ್ತು ವರ್ಷಗಳ ಕಾಲ ಬಡದೇಶಗಳ ರಫ್ತು ವ್ಯಾಪಾರಕ್ಕೆ ತೋರುವ ಐಚ್ಛಿಕ ರಿಯಾಯಿತಿ. ಪ್ರತಿಯೊಂದು ಯೋಜನೆಯಲ್ಲಿಯೂ ಅನೇಕ ಸರಕುಗಳನ್ನು—ಅದರಲ್ಲಿಯೂ ಬಡದೇಶಗಳ ದೃಷ್ಟಿಯಿಂದ ಅತಿ ಮುಖ್ಯವಾದ ಬಟ್ಟೆಬರೆಗಳು, ಪಾದರಕ್ಷೆಗಳು, ಇತರ ಚರ್ಮದ ಸಾಮಗ್ರಿಗಳು, ಇತ್ಯಾದಿಗಳನ್ನು—ಹೊರತುಪಡಿಸಲಾಗಿದೆ. ಹಲವು

ಪ್ರಗತಿಪರ ರಾಷ್ಟ್ರಗಳನ್ನು ಈ ಯೋಜನೆಗಳ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಅಲ್ಲದೆ ಪ್ರಯೋಜನ ಪಡೆಯುವ ದೇಶಗಳ ರಫ್ತುಗಳ ಮೇಲೆಯೂ ಮಿತಿಗಳನ್ನು ಹೇರಲಾಗಿದೆ. ಇವೆಲ್ಲವುಗಳಿಂದಾಗಿ, ಈ ಯೋಜನೆಯನ್ವಯ ಸಿಗುವ ಸುಂಕ ವಿನಾಯಿತಿ ಅಥವಾ ರಿಯಾಯಿತಿಯ ಪ್ರಯೋಜನ, ಬಡದೇಶಗಳ ಮಟ್ಟಿಗೆ ಹೇಳುವುದಾದರೆ, ಬಹಳ ಸೀಮಿತವಾದುದು. ಈ ಯೋಜನೆಯಿಂದಾಗಿ ಅನಭಿವೃದ್ಧ ರಾಷ್ಟ್ರಗಳ ರಫ್ತು ವ್ಯಾಪಾರವು ವರ್ಷಕ್ಕೆ ಕೇವಲ 100 ಮಿಲಿಯ ಡಾಲರುಗಳಷ್ಟು ಮಾತ್ರ ಹೆಚ್ಚಬಹುದೆಂದು ಅಂದಾಜುಮಾಡಲಾಗಿದೆ. ಈ ಯೋಜನೆಯನ್ನು ಹೆಚ್ಚು ವ್ಯಾಪಕವಾಗಿ ಇನ್ನೊಂದೆರಡು ದಶಕಗಳ ತನಕ ವಿಸ್ತರಿಸುವುದಲ್ಲದೆ, ಅದನ್ನು ಕಾನೂನುಬದ್ಧವಾಗಿಸಬೇಕೆಂಬುದೇ ಅಭಿವೃದ್ಧಿಶೀಲ ರಾಷ್ಟ್ರಗಳ ಬಯಕೆ.

5. ವಿದೇಶೀ ನೆರವು—ಅದರಲ್ಲೂ ಮುಖ್ಯವಾಗಿ ಅಧಿಕೃತ ಅಭಿವೃದ್ಧಿ ನೆರವು (Official Development Assistance)—ಹೆಚ್ಚಬೇಕು. ಪಿಯರ್ಸನ್ ಸಮಿತಿ (1969)ಯು ಸೂಚಿಸಿದಂತೆ, ಶ್ರೀಮಂತ ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಆದಾಯದ ಕನಿಷ್ಠ ಶೇಕಡಾ 0.70ರಷ್ಟನ್ನಾದರೂ ಅಧಿಕೃತ ಅಭಿವೃದ್ಧಿ ನೆರವಿಗೆ ಉಪಯೋಗಿಸಬೇಕು. ಆದರೆ ಈ ಕನಿಷ್ಠ ಗುರಿಯನ್ನು ಅಮೇರಿಕವೇ ಮೊದಲಾದ ರಾಷ್ಟ್ರಗಳು ಇನ್ನೂ ಒಪ್ಪಿಕೊಂಡಿಲ್ಲ. ಅಲ್ಲದೆ 1970ರಿಂದೀಚೆಗೆ ಅಧಿಕೃತ ನೆರವು ಶೇಕಡಾವಾರು ಕ್ಷೀಣಿಸುತ್ತಾ ಬಂದಿದೆ. 1978ರಲ್ಲಿ ಅದು ಶ್ರೀಮಂತ ರಾಷ್ಟ್ರಗಳ ರಾಷ್ಟ್ರೀಯ ಆದಾಯದ ಶೇಕಡಾ 0.32ರಷ್ಟು ಮಾತ್ರವಾಗಿತ್ತು; ಅಂದರೆ ಕನಿಷ್ಠ ಗುರಿಯ ಅರ್ಧಕ್ಕಿಂತಲೂ ಕಡಿಮೆ.

6. ಬಡದೇಶಗಳ ಸಾಲ ವಿಮೋಚನೆ—ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸಾಲದ ಹೊರೆಯು ತೀವ್ರವಾಗಿ ಹೆಚ್ಚುತ್ತಿದ್ದು, 1976ರಲ್ಲಿ ಅದು 200 ಮಿಲಿಯನ್ ಡಾಲರುಗಳಿಗಿಂತಲೂ ಹೆಚ್ಚಾಗಿತ್ತು; ವಾರ್ಷಿಕ ಬಡ್ಡಿ ಸಮೇತ ಸಾಲ ಮರುಪಾವತಿ (Debt Service)ಯೇ 32 ಬಿಲಿಯನ್ ಡಾಲರುಗಳಷ್ಟಾಗಿತ್ತು. ತೈಲೇತರ ಪ್ರಗತಿಪರ ರಾಷ್ಟ್ರಗಳ ಸಾಲವು 1976ರಲ್ಲಿ ಆ ದೇಶಗಳ ರಾಷ್ಟ್ರೀಯ ಆದಾಯದ ಶೇಕಡಾ 15 ಆಗಿತ್ತು; ಅಥವಾ ಅವುಗಳ ರಫ್ತು ವರಮಾನದ ಶೇಕಡಾ 90 ಆಗಿತ್ತು. ರಫ್ತು ವರಮಾನದ ಶೇಕಡಾ 15ರಷ್ಟು ವಾರ್ಷಿಕ ಬಡ್ಡಿ ಸಮೇತ ಸಾಲ ಮರುಪಾವತಿಗೆ ಬಳಕೆಯಾಗುತ್ತಿದೆ. ಈ ದೇಶಗಳ ಸಾಲದ ಹೊರೆಯು ಇನ್ನಷ್ಟು ಏರದಂತೆ ತಡೆಯುವುದಲ್ಲದೆ, ಈಗಿರುವ ಹೊರೆಯನ್ನು ಇಳಿಸುವ ನಿಟ್ಟಿನಲ್ಲಿ ಶೀಘ್ರ ಪ್ರಯತ್ನಗಳನ್ನು ಶ್ರೀಮಂತ ರಾಷ್ಟ್ರಗಳು ಮತ್ತು ಅಂತರರಾಷ್ಟ್ರೀಯ ಆರ್ಥಿಕ ಸಂಘಸಂಸ್ಥೆಗಳು ಮಾಡಬೇಕಾದುದು ಅತ್ಯಗತ್ಯ.

7. ಅಂತರರಾಷ್ಟ್ರೀಯ ಹಣಕಾಸು ನಿಧಿ (IMF)ಯ ಎಸ್.ಡಿ.ಆರ್. (Special Drawing Rights)ಗಳ ಹಂಚುವಿಕೆಯಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೆಚ್ಚಿನ ಪಾಲು ಸಿಗಬೇಕು. ಇದಕ್ಕಾಗಿ "ಎಸ್.ಡಿ ಆರ್–ನೆರವು ಕೊಂಡಿ" (SDR Aid Link)ಯೊಂದನ್ನು ಸ್ಥಾಪಿಸುವ ಪ್ರಸ್ತಾಪವು ಕೆಲಕಾಲ ಚರ್ಚೆಗೊಳಪಟ್ಟಿತ್ತು. ಆದರೆ ಈಗ ಈ ಕಲ್ಪನೆಯನ್ನು ಕೈಬಿಟ್ಟಂತೆ ತೋರುತ್ತಿದೆ. ಎಸ್.ಡಿ.ಆರ್. ಹಂಚುವಿಕೆಯ ಪ್ರಸಕ್ತ ವಿಧಾನವು ಸದಸ್ಯ ರಾಷ್ಟ್ರಗಳ ಚಂದಾ ಭಾಗ (Quota)ವನ್ನವಲಂಬಿಸಿರುವುದರಿಂದ, ಹೆಚ್ಚು ಅವಶ್ಯಕತೆಯಿರುವ ಬಡದೇಶಗಳಿಗೆ ಕಡಿಮೆಯೂ, ಅಗತ್ಯವಿಲ್ಲದ ಶ್ರೀಮಂತ ರಾಷ್ಟ್ರಗಳಿಗೆ ಅಧಿಕವೂ ದೊರೆಯುತ್ತದೆ.

8. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ತಕ್ಕುದಾದ ತಾಂತ್ರಿಕ ಜ್ಞಾನವನ್ನು ಸುಲಭ ಷರತ್ತುಗಳಲ್ಲಿ ವರ್ಗಾಯಿಸುವುದು—ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ

ಸಮ್ಮೇಳನವು ತಾಂತ್ರಿಕ ಜ್ಞಾನದ ವರ್ಗಾವಣೆಯ ಬಗ್ಗೆ ನಿಯಮಾವಳಿ (code)ಯೊಂದನ್ನು ರಚಿಸುತ್ತಿದೆ. ತಾಂತ್ರಿಕ ಜ್ಞಾನವು ಕೈಗಾರಿಕಾ ರಾಷ್ಟ್ರಗಳ ಗುತ್ತಿಗೆಯಾಗಿರಬಾರದು. ಪ್ರತಿಯೊಂದು ಅನಭಿವೃದ್ಧ ರಾಷ್ಟ್ರವೂ ತಾಂತ್ರಿಕ ಸಂಶೋಧನೆಗಳಿಗೆ ಅಪಾರ ವೆಚ್ಚ ಮಾಡುವುದರ ಬದಲು ತನಗೆ ಯೋಗ್ಯವಾದ ತಂತ್ರಜ್ಞಾನವನ್ನು ಸುಲಭವೆಚ್ಚದಲ್ಲಿ ಕೊಂಡುಕೊಳ್ಳುವಂತಿರಬೇಕು. ಅಂಕ್ಟಾಡ್‌ನ ಅಂದಾಜಿನ ಪ್ರಕಾರ, 1960ರ ದಶಕದ ಅಂತ್ಯದಲ್ಲಿ ಪ್ರಗತಿಶೀಲ ರಾಷ್ಟ್ರಗಳು ತಾಂತ್ರಿಕ ಜ್ಞಾನದ ಬಳಕೆಗಾಗಿ ಸಾಮಾನ್ಯ ವರ್ಷಕ್ಕೆ 1.4 ಬಿಲಿಯನ್ ಡಾಲರುಗಳನ್ನು ವಿದೇಶಿ ವಿನಿಮಯ ರೂಪದಲ್ಲಿ ಕೊಡುತ್ತಿದ್ದುವು. ಈ ವೆಚ್ಚವು ವರ್ಷಕ್ಕೆ ಶೇಕಡಾ 20ರಷ್ಟು ಹೆಚ್ಚುತ್ತಿದ್ದು, 1980ರ ದಶಕಾರಂಭದಲ್ಲಿ ವರ್ಷಕ್ಕೆ 9 ಬಿಲಿಯನ್ ಡಾಲರುಗಳಷ್ಟಾಗುವುದು.

9. ಅಂತರರಾಷ್ಟ್ರೀಯ ಆರ್ಥಿಕ ಸಂಸ್ಥೆಗಳ ಸುಧಾರಣೆ—ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) ಮತ್ತು ಜಾಗತಿಕ ಬ್ಯಾಂಕುಗಳ ರಚನೆ ಹಾಗೂ ಕಾರ್ಯವಿಧಾನಗಳಲ್ಲಿ ತೀವ್ರ ಸುಧಾರಣೆ ಅಗತ್ಯ. ಈ ಸಂಸ್ಥೆಗಳ ಚಂದಾ ಪೂರೈಕೆ, ನೌಕರರ ಸಂಖ್ಯೆ, ನೀತಿ ನಿರೂಪಣೆ, ಸಹಾಯ ವಿತರಣೆ, ಮತದಾನ—ಎಲ್ಲದರಲ್ಲೂ ಶ್ರೀಮಂತರದೇ ಮೇಲುಗೈ; ಅವರದೇ ಹಿಡಿತ. ಸದಸ್ಯರೆಲ್ಲರೂ ಸಮಾನರಲ್ಲ; ಶ್ರೀಮಂತರ ಮತಕ್ಕೆ ತೂಕ ಹೆಚ್ಚು. ಈ "ತೂಕ ಮತದಾನ" (Weighted Voting) ವ್ಯವಸ್ಥೆಯನ್ನು ಬಿಟ್ಟು, "ರಾಷ್ಟ್ರಕ್ಕೊಂದು ಮತ" (One nation-one vote) ಪದ್ಧತಿಯನ್ನು ಅಳವಡಿಸಿಕೊಂಡರೆ ಮಾತ್ರ ಬಡ ರಾಷ್ಟ್ರಗಳಿಗೆ ಕ್ಷೇಮ. ವ್ಯಾಪಾರ ಮತ್ತು ಸುಂಕಗಳ ಸಾಮಾನ್ಯ ಒಪ್ಪಂದ (GATT) ವಂತೂ ಶ್ರೀಮಂತರಾಷ್ಟ್ರಗಳ ಕೂಟವೆಂದೇ ಪ್ರಸಿದ್ಧ.

ವಿವಿಧ ಅಂತರರಾಷ್ಟ್ರೀಯ ಸಂಘಸಂಸ್ಥೆಗಳೊಳಗೆ— ಅಂತರರಾಷ್ಟ್ರೀಯ ಹಣಕಾಸು ನಿಧಿ (IMF), ಜಾಗತಿಕ ಬ್ಯಾಂಕು (IBRD), ವ್ಯಾಪಾರ ಮತ್ತು ಸುಂಕಗಳ ಸಾಮಾನ್ಯ ಒಪ್ಪಂದ (GATT), ವಿಶ್ವಸಂಸ್ಥೆ (UN), ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನ (UNCTAD), ವಿಶ್ವಸಂಸ್ಥೆಯ ಕೈಗಾರಿಕಾಭಿವೃದ್ಧಿ ಸಂಸ್ಥೆ (UNIDO), ಇತ್ಯಾದಿ—ತಮ್ಮ ಕಾರ್ಯಕ್ರಮಗಳಲ್ಲಿ ಮತ್ತು ಕಾರ್ಯವಿಧಾನಗಳಲ್ಲಿ ಪರಸ್ಪರ ಹೊಂದಾಣಿಕೆ ಅಗತ್ಯ. ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವುದಕ್ಕಾಗಿ ನಡೆಯುತ್ತಿರುವ ಚರ್ಚೆಗಳಲ್ಲಿ, ಹೊಸ ಅಂತರರಾಷ್ಟ್ರೀಯ ಸಂಸ್ಥೆಗಳನ್ನು ಸ್ಥಾಪಿಸುವುದನ್ನು ಕುರಿತು ಸಲಹೆ ಸೂಚನೆಗಳು ಕೇಳಿಬರುತ್ತಿವೆ. ಆದರೆ ಈಗಾಗಲೇ ಅಂತರರಾಷ್ಟ್ರೀಯ ಸಂಸ್ಥೆಗಳ ಸಂಖ್ಯೆ ಬಹು ದೊಡ್ಡದಾಗಿದ್ದು, ಈ ಸಂಸ್ಥೆಗಳ ಸಂಖ್ಯಾಬಾಹುಳ್ಯವನ್ನು ಇನ್ನಷ್ಟು ಹೆಚ್ಚಿಸುವುದಕ್ಕಿಂತ, ಪ್ರಸ್ತುತ ಅಸ್ತಿತ್ವದಲ್ಲಿರುವ ಸಂಸ್ಥೆಗಳ ರಚನೆ ಮತ್ತು ಕಾರ್ಯವಿಧಾನಗಳಲ್ಲಿ ಅಗತ್ಯವಾದ ಸುಧಾರಣೆಗಳನ್ನು ಮಾಡಿಕೊಳ್ಳುವುದು ಯೋಗ್ಯವಲ್ಲವೇ ಎಂಬುದು ತೀವ್ರವಾಗಿ ಯೋಚಿಸಬೇಕಾದ ವಿಷಯ. 1947ರಲ್ಲಿ ಜನನದಲ್ಲೇ ಮೃತವಾದ ಅಂತರರಾಷ್ಟ್ರೀಯ ವ್ಯಾಪಾರ ಸಂಸ್ಥೆ (ITO)ಯನ್ನು ಪುನರುಜ್ಜೀವನಗೊಳಿಸುವುದೂ ವಿಚಾರಾರ್ಹ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳು ತಮ್ಮ ಎಲ್ಲಾ ಆರ್ಥಿಕ ಸಮಸ್ಯೆಗಳ ಚರ್ಚೆಯನ್ನು, ತಮಗೆ ಬಹುಮತವಿರುವ ಮತ್ತು ಸರಳ ಮತದಾನ ವ್ಯವಸ್ಥೆಯಿರುವ, ವಿಶ್ವಸಂಸ್ಥೆಗೆ ವರ್ಗಾಯಿಸಬಯಸುತ್ತಿವೆ. ಪ್ರಾರಂಭದಲ್ಲಿ ಕೇವಲ 41 ಸದಸ್ಯ ರಾಷ್ಟ್ರಗಳನ್ನು ಹೊಂದಿದ್ದ ವಿಶ್ವಸಂಸ್ಥೆಯಲ್ಲಿ ಇಂದು 150ಕ್ಕಿಂತಲೂ ಅಧಿಕ ರಾಷ್ಟ್ರಗಳಿವೆ. ಇವುಗಳಲ್ಲಿ 115ಕ್ಕಿಂತಲೂ ಹೆಚ್ಚಿನ ದೇಶಗಳು "77ರ ಗುಂಪು" ಎಂದು ಪ್ರಸಿದ್ಧವಾದ ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಗುಂಪಿಗೆ ಸೇರಿದವುಗಳು. ಈ ಗುಂಪಿನ ರಾಷ್ಟ್ರಗಳ ಜನನಕ್ಕೆ ಮೊದಲೇ ರೂಪಿತ

ವಾದ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಬದಲಾವಣೆಗೆ ಈ ರಾಷ್ಟ್ರಗಳು ಒತ್ತಾಯಿಸು ತ್ತಿರುವುದು ಆಶ್ಚರ್ಯವೇನಲ್ಲ; ಅದು ತರ್ಕಬದ್ಧವೂ ನ್ಯಾಯಬದ್ಧವೂ ಆಗಿದೆ.

10. ಅಂತರರಾಷ್ಟ್ರೀಯ ಆಸ್ತಿಗಳ ಅಂತರರಾಷ್ಟ್ರೀಯ ನಿಯಂತ್ರಣ—ವಿಶಾಲ ಸಾಗರ ಗರ್ಭಗಳಲ್ಲಿರುವ ಅಪರಿಮಿತ ಸಂಪತ್ತನ್ನು ಹೊರತೆಗೆದು ಬಳಸುವುದರಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ನ್ಯಾಯಬದ್ಧ ಪಾಲನ್ನು ಬಯಸುತ್ತಿವೆ. ಈ ಸಾಗರಗಳ ಮತ್ಸ್ಯ, ತೈಲ, ಮ್ಯಾಂಗನೀಸ್ ಮತ್ತಿತರ ಅಪಾರ ಸಂಪತ್ತಿನ ನ್ಯಾಯಬದ್ಧ ಬಳಕೆ ಮತ್ತು ಹಂಚುವಿಕೆ ಅಂತರರಾಷ್ಟ್ರೀಯ ಮೇಲ್ವಿಚಾರಣೆಯಲ್ಲಿ ಮಾತ್ರ ಸಾಧ್ಯ; ಇಲ್ಲದಿದ್ದರೆ, ಅಗತ್ಯವಿರುವ ತಾಂತ್ರಿಕ ಜ್ಞಾನವನ್ನು ಹೊಂದಿರುವ ಶ್ರೀಮಂತ ರಾಷ್ಟ್ರಗಳು ಈ ಸಂಪತ್ತನ್ನು ಕಬಳಿಸುವುದರಲ್ಲಿ ಸಂದೇಹ ವಿಲ್ಲ. ಶ್ರೀಮಂತ ರಾಷ್ಟ್ರಗಳ ಸಾರ್ವಭೌಮ ಹಕ್ಕನ್ನು ಪ್ರಶ್ನಿಸದ ಈ ಬೇಡಿಕೆಗೆ ಅವುಗಳಿಂದ ತೀವ್ರ ವಿರೋಧವಿರಲಾರದೆಂದು ನಂಬಲಾಗಿದೆ.

ಮೇಲೆ ಉಲ್ಲೇಖಿಸಿದ ಬೇಡಿಕೆಗಳ ಪಟ್ಟಿ ಸಂಪೂರ್ಣವಲ್ಲ: ಆದರೂ ಆರ್ಥಿಕ ವ್ಯವಸ್ಥೆಗೆ ಸಂಬಂಧಪಟ್ಟ ಎಲ್ಲಾ ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಇತ್ತೀಚೆಗೆ ಅಂತರ ರಾಷ್ಟ್ರೀಯ ವೇದಿಕೆಗಳಲ್ಲಿ ಯಾವುದೇ ವಿಷಯವನ್ನು ಪ್ರಸ್ತಾಪಿಸುವುದಿದ್ದರೂ– ಅದು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಏನೇ ಆಗಿರಲಿ—ಅದನ್ನು ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ವ್ಯಾಪ್ತಿಯೊಳಗೆ ತರುವ ಅಥವಾ ಅದಕ್ಕೆ ಜೋಡಿಸುವ ಒಂದು ಪ್ರವೃತ್ತಿ ಕಾಣಬರುತ್ತಿದೆ ಅನೇಸಿದ್ದರೂ. ಅಂತಹ, ಕೊನೆಮೊದಲಿಲ್ಲದ, ನಿರ್ದಿಷ್ಟ ವ್ಯಾಪ್ತಿಯಿಲ್ಲದ, ಕಲ್ಪನೆಗಳ ಅಧ್ಯಯನ ಪ್ರಸ್ತುತ ಲೇಖನದಲ್ಲಿ ಮಾಡಲಾಗಿಲ್ಲ.

ಅಭಿವೃದ್ಧ ರಾಷ್ಟ್ರಗಳ ಧೋರಣೆ

ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಬಗ್ಗೆ ಅನಭಿವೃದ್ಧ ರಾಷ್ಟ್ರಗಳು ಒಗ್ಗಟ್ಟಿನಿಂದ ಶಕ್ತಿಯುತವಾಗಿ ಹೋರಾಡುತ್ತಿದ್ದರೂ, ಅಭಿವೃದ್ಧ ರಾಷ್ಟ್ರಗಳ ಪ್ರತಿಕ್ರಿಯೆಯಲ್ಲಿ ಒಗ್ಗಟ್ಟಾಗಲೀ, ಏಕರೂಪತೆಯಾಗಲಿ ಕಂಡುಬರುತ್ತಿಲ್ಲ. ಯುದ್ಧೋತ್ತರ ಆರ್ಥಿಕ ವ್ಯವಸ್ಥೆಯ ನಾಯಕನಂತಿದ್ದ ಅಮೆರಿಕವು ಬಡರಾಷ್ಟ್ರಗಳ ಯಾವುದೇ ಬೇಡಿಕೆಯನ್ನು ನೇರವಾಗಿ ಒಪ್ಪಲು ಸಿದ್ಧವಿಲ್ಲ. ಅಮೆರಿಕದ ನೇತೃತ್ವದಲ್ಲಿ, ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಒಗ್ಗಟ್ಟನ್ನು ಮುರಿಯುವ ಪ್ರಯತ್ನವೊಂದು ಅಭಿವೃದ್ಧ ರಾಷ್ಟ್ರಗಳಿಂದ ನಡೆದಿದೆ. ತೃತೀಯ ಜಗತ್ತಿನ ರಾಷ್ಟ್ರಗಳನ್ನು ತೈಲೋತ್ಪಾದಕ ರಾಷ್ಟ್ರಗಳು ಕನಿಷ್ಠ ಅಭಿವೃದ್ಧಿ ಹೊಂದಿದ (Least Developed) ರಾಷ್ಟ್ರಗಳು ಹಾಗೂ ಇನ್ನುಳಿದ ರಾಷ್ಟ್ರಗಳೆಂದು ಮೂರು ಗುಂಪುಗಳಾಗಿ ವಿಂಗಡಿಸಿ, ಸಾಧ್ಯವಾದರೆ ತೈಲಸಂಪನ್ನ ರಾಷ್ಟ್ರಗಳನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವ ಪ್ರಯತ್ನವಿದು. ಆದರೆ ಇಷ್ಟರತನಕ ಈ ಪ್ರಯತ್ನ ಫಲಕಾರಿಯಾಗುವ ಸೂಚನೆಗಳಿಲ್ಲ.

ಅಭಿವೃದ್ಧ ರಾಷ್ಟ್ರಗಳಲ್ಲಿಯೂ ನಾವು ಮೂರು ಗುಂಪುಗಳನ್ನು ಕಾಣಬಹುದು: (1) ಸಂಪನ್ಮೂಲಗಳಿಂದ ಶ್ರೀಮಂತವಾದ ಅಮೆರಿಕವು ಬಡದೇಶಗಳ ಮೇಲೆ ವಿಶೇಷವಾಗಿ ಅವಲಂಬಿಸಿಲ್ಲವಾದ ಕಾರಣ, ಅವುಗಳ ಬೇಡಿಕೆಗಳನ್ನು ಹುಮ್ಮಸ್ಸಿಗೆ ಯಶಸ್ವಿಯಾಗಿ ವಿರೋಧಿಸ ಬಲ್ಲುದು; (2) ಪಶ್ಚಿಮ ಯೂರೋಪು ಮತ್ತು ಜಪಾನ್‌ಗಳಲ್ಲಿ ಸಂಪನ್ಮೂಲಗಳು ವಿರಳವಾದ ಕಾರಣ ಆ ರಾಷ್ಟ್ರಗಳು ಸಂಪನ್ಮೂಲಗಳ ಪೂರೈಕೆಗಾಗಿ ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರ ಗಳನ್ನು ಅವಲಂಬಿಸಿವೆ. ಆದುದರಿಂದ ಆ ರಾಷ್ಟ್ರಗಳು ತೃತೀಯ ಜಗತ್ತಿನ ಬೇಡಿಕೆಗಳಿಗೆ ಬಾಯಿ ಮಾತಿನ ಸಹಾನುಭೂತಿಯನ್ನಾದರೂ ತೋರಿಸಬೇಕಾಗಿದೆ. ಅಲ್ಲದೆ ಪಶ್ಚಿಮ

ಯೂರೋಪಿಗೆ ಅನೇಕ ಬಡದೇಶಗಳೊಂದಿಗೆ ಚಾರಿತ್ರಿಕ ಸಂಬಂಧದ ಹಿನ್ನೆಲೆಯಿದೆ. (3) ಸ್ವೀಡನ್, ನಾರ್ವೆ, ನೆದರ್‌ಲ್ಯಾಂಡ್ಸ್, ಮತ್ತು ಡೆನ್ಮಾರ್ಕ್‌ಗಳಂತಹ ಪುಟ್ಟ ಸ್ಕಾಂಡಿನೇವಿಯನ್ ರಾಷ್ಟ್ರಗಳು ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಬೇಡಿಕೆಗಳಿಗೆ ಬಹಳ ಅನುಕೂಲ ಪ್ರತಿಕ್ರಿಯೆಯನ್ನು ತೋರಿಸುತ್ತಿವೆ.

ಒಟ್ಟಿನಲ್ಲಿ, 1974ರ ನಂತರ ಹೊಸ ಅಂತರರಾಷ್ಟ್ರೀಯ ವ್ಯವಸ್ಥೆಯ ಬಗ್ಗೆ ಅಭಿವೃದ್ಧ ರಾಷ್ಟ್ರಗಳ ಧೋರಣೆ ಸ್ಥಿರವಾಗಿಲ್ಲ. ಅದು ಧಿಕ್ಕಾರದಿಂದ ಸಹಕಾರ, ಸಹಕಾರದಿಂದ ಧಿಕ್ಕಾರದ ಕಡೆಗೆ ಬದಲಾಗುತ್ತಲೇ ಇದೆ. ವಿಶ್ವಸಂಸ್ಥೆಯ ಆರನೆಯ ವಿಶೇಷಾಧಿವೇಶನದಲ್ಲಿ ಹೊಸ ವ್ಯವಸ್ಥೆಯ ಬೇಡಿಕೆಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿದ ಶ್ರೀಮಂತ ರಾಷ್ಟ್ರಗಳು, ಅನಂತರದ ಪ್ಯಾರಿಸ್ ಮಾತುಕತೆಗಳು, ಏಳನೆಯ ವಿಶೇಷಾಧಿವೇಶನ, ಅಂಕ್ಟಾಡ್‌ನ ನಾಲ್ಕನೆಯ ಸಮ್ಮೇಳನ ಮುಂತಾದ ಕಡೆಗಳಲ್ಲಿ ಸಹಕರಿಸುವ ಮನೋಭಾವವನ್ನು ವ್ಯಕ್ತಪಡಿಸಿದುವು. ಆದರೆ ಇತ್ತೀಚೆಗೆ ಮುಕ್ತಾಯಗೊಂಡ ಟೋಕಿಯೋ, ಸುತ್ತಿನ ವ್ಯಾಪಾರ ಸಂಧಾನಗಳು, ಅಂಕ್ಟಾಡ್‌ನ ಐದನೆಯ ಅಧಿವೇಶನ, ಮೊದಲಾದ ವೇದಿಕೆಗಳಲ್ಲಿ ಈ ರಾಷ್ಟ್ರಗಳು ಪುನಃ ಪ್ರತಿಕೂಲ ಧೋರಣೆ ತಳೆಯುತ್ತಿರುವುದರ ಸ್ಪಷ್ಟ ಚಿಹ್ನೆಗಳು ಕಂಡುಬಂದಿವೆ.

ಹೆಚ್ಚುತ್ತಿರುವ ಕೈಗಾರಿಕಾ ರಕ್ಷಣಾ ನೀತಿ (Protectionism) :

ಇತ್ತೀಚಿನ ವರ್ಷಗಳಲ್ಲಿ ಅಭಿವೃದ್ಧ ರಾಷ್ಟ್ರಗಳು ತಮ್ಮ ಸ್ವದೇಶೀ ಕೈಗಾರಿಕೆಗಳನ್ನು ಮತ್ತು ಅವುಗಳಲ್ಲಿನ ಉದ್ಯೋಗಗಳನ್ನು ರಕ್ಷಿಸುವ ನೆಪದಲ್ಲಿ, ಅನಭಿವೃದ್ಧ ದೇಶಗಳಿಂದ ಮಾಡುವ ಆಮದುಗಳ ಮೇಲೆ ಅನೇಕ ನಿರ್ಬಂಧಗಳನ್ನು ವಿಧಿಸುತ್ತಿವೆ. ಇದಕ್ಕಾಗಿ ಸುಂಕೇತರ ತಡೆಗಳ (Nontariff barriers) ಬಳಕೆ ವ್ಯಾಪಕವಾಗಿದೆ. ವ್ಯಾಪಾರ ಮತ್ತು ಸುಂಕಗಳ ಸಾಮಾನ್ಯ ಒಪ್ಪಂದ (GATT)ವು ಅಂತಹ 800 ಸುಂಕೇತರ ತಡೆಗಳನ್ನು ಗುರುತಿಸಿದೆ. ಪ್ರಗತಿಪರ ರಾಷ್ಟ್ರಗಳು, ಅಭಿವೃದ್ಧ ರಾಷ್ಟ್ರಗಳ ಪ್ರೇರಣೆಯಿಂದ ವಿಧಿಸುವ "ಸ್ವಯಂಪ್ರೇರಿತ ರಫ್ತು ನಿರ್ಬಂಧಗಳು" (Voluntary Export Restraints), "ವ್ಯವಸ್ಥಿತ ಮಾರುಕಟ್ಟೆ ಕ್ರಮಗಳು" (Orderly Marketting arrangements), ಆರೋಗ್ಯ ಮತ್ತು ರಕ್ಷಣಾ ನಿರ್ಬಂಧಗಳು, ಇತ್ಯಾದಿ ಅವುಗಳಲ್ಲಿ ಕೆಲವು.

ಹಿಂದುಳಿದ ರಾಷ್ಟ್ರಗಳು, ತಮ್ಮ ಶ್ರಮಾಧಿಕ್ಯವಾದ ಕೈಗಾರಿಕೋತ್ಪನ್ನಗಳಿಗೆ, ಮುಂದುವರಿದ ರಾಷ್ಟ್ರಗಳ ಮಾರುಕಟ್ಟೆಗಳಲ್ಲಿ ಮುಕ್ತ ಪ್ರವೇಶವನ್ನು ಬಯಸುತ್ತವೆ. ಆದರೆ ಕೈಗಾರಿಕಾ ರಾಷ್ಟ್ರಗಳ ಸುಂಕನೀತಿಯು ಹಿಂದುಳಿದ ರಾಷ್ಟ್ರಗಳಿಂದ ಕಚ್ಚಾವಸ್ತುಗಳ ರಫ್ತನ್ನೇ ಪ್ರೋತ್ಸಾಹಿಸುವಂತಿದೆ. ಅಂದರೆ ಕಚ್ಚಾವಸ್ತುಗಳಿಂದ ಉತ್ಪಾದಿಸುವ ಸಿದ್ಧವಸ್ತುಗಳ ಪ್ರತಿಯೊಂದು ಉತ್ಪಾದನಾ ಹಂತದಲ್ಲೂ ಅವುಗಳ ಮೇಲೆ ವಿಧಿಸಲ್ಪಡುವ ಸುಂಕಗಳು ಏರುತ್ತಾ ಹೋಗುತ್ತವೆ. ಕೈಗಾರಿಕಾ ರಾಷ್ಟ್ರಗಳ ಈ ಸುಂಕ ನೀತಿಯು ಹಿಂದುಳಿದ ರಾಷ್ಟ್ರಗಳ ಉದ್ಯಮಾಭಿವೃದ್ಧಿಗೂ ನಿರುತ್ತೇಜಕವಾಗಿದೆ.

ಈ ಸುಂಕನೀತಿಯು ಅಭಿವೃದ್ಧ ರಾಷ್ಟ್ರಗಳಿಗೆ ದೂರದೃಷ್ಟಿಯಿಂದ ಖಂಡಿತವಾಗಿಯೂ ಒಳಿತನ್ನು ಮಾಡುವಂತಹುದಲ್ಲ. ಏಕೆಂದರೆ ಹಿಂದುಳಿದ ರಾಷ್ಟ್ರಗಳು ತಾವು ರಫ್ತು ಮಾಡುವ ಕೈಗಾರಿಕೋತ್ಪನ್ನಗಳಿಗಿಂತ ಎಷ್ಟೋ ಹೆಚ್ಚು ಪಾಲು ಕೈಗಾರಿಕೋತ್ಪನ್ನಗಳನ್ನು ಕೈಗಾರಿಕಾ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿವೆ. ಉದಾಹರಣೆಗೆ, 1975ರಲ್ಲಿ ಅಭಿವೃದ್ಧ ರಾಷ್ಟ್ರಗಳು ಅಭಿವೃದ್ಧಿಶೀಲ ರಾಷ್ಟ್ರಗಳಿಂದ ಆಮದು ಮಾಡಿಕೊಂಡ ಕೈಗಾರಿಕೋತ್ಪನ್ನಗಳ ಮೌಲ್ಯ ಕೇವಲ

26 ಬಿಲಿಯನ್ ಡಾಲರುಗಳಾಗಿದ್ದರೆ, ಅವುಗಳಿಗೆ ರಫ್ತು ಮಾಡಿದ ಕೈಗಾರಿಕೋತ್ಪನ್ನಗಳ ಬೆಲೆ 123 ಬಿಲಿಯನ್ ಡಾಲರುಗಳಾಗಿದ್ದುವು. ಆದುದರಿಂದ ಹಿಂದುಳಿದ ರಾಷ್ಟ್ರಗಳು ಅಭಿವೃದ್ಧಿ ರಾಷ್ಟ್ರ ರಾಷ್ಟ್ರಗಳಿಂದ ಹೆಚ್ಚೆಚ್ಚು ಆಮದು ಮಾಡಿಕೊಳ್ಳಬೇಕಾದರೆ, ಅದಕ್ಕೆ ಅಗತ್ಯವಾದ ವಿದೇಶಿವಿನಿಮಯ ಹಣವನ್ನು ಗಳಿಸಿಕೊಳ್ಳಲಿಕ್ಕೋಸ್ಕರವಾಗಿಯಾದರೂ, ಅವುಗಳಿಗೆ ಹೆಚ್ಚು ರಫ್ತು ಅವಕಾಶಗಳನ್ನೊದಗಿಸಿಕೊಡುವುದು ಅಗತ್ಯ. ಇಲ್ಲದಿದ್ದರೆ, ಮುಂದುವರಿದ ರಾಷ್ಟ್ರಗಳ ಪ್ರಸಕ್ತ ವ್ಯಾಪಾರ ರಕ್ಷಣಾ ನೀತಿಯು ತನ್ನ ಪರಾಜಯವನ್ನು ತಾನೇ ತಂದುಕೊಳ್ಳುವುದರಲ್ಲಿ ಸಂದೇಹವಿಲ್ಲ. ಈ ಬಗ್ಗೆ ಈಗಾಗಲೇ ಅಂತರರಾಷ್ಟ್ರೀಯ ಅರ್ಥಶಾಸ್ತ್ರಜ್ಞರು ಮತ್ತು ಸಂಘ ಸಂಸ್ಥೆಗಳು ಎಚ್ಚರಿಕೆಯನ್ನು ಕೊಟ್ಟಿದ್ದರೂ, ಸದ್ಯಕ್ಕೆ ಈ ನೀತಿಯಲ್ಲಿ ಯಾವುದೇ ಬದಲಾವಣೆ ಯಾಗುವ ಸೂಚನೆಗಳು ಕಂಡುಬರುತ್ತಿಲ್ಲ.

ಸಮಾಜವಾದಿ ರಾಷ್ಟ್ರಗಳ ಪಾಲ್ಗೊಳ್ಳುವಿಕೆ :

ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಿಂದ ಹೊರಗುಳಿದಿರುವ ರಷ್ಯಾ, ಚೀನಾ ಮತ್ತಿತರ ಕಮ್ಯೂನಿಸ್ಟ್ ರಾಷ್ಟ್ರಗಳು ಹೊಸ ಆರ್ಥಿಕ ವ್ಯವಸ್ಥೆಯ ಬಗ್ಗೆಯೂ ವಿಶೇಷ ಆಸಕ್ತಿ ವಹಿಸುತ್ತಿಲ್ಲ. ಅವುಗಳ ಧೋರಣೆಯು ಔದಾಸೀನ್ಯದಿಂದ ಕೂಡಿದ್ದು, ಬಡದೇಶಗಳ ಸಮಸ್ಯೆಗಳಿಗೆ ಪಾಶ್ಚಾತ್ಯ ಬಂಡವಾಳಶಾಹಿ ರಾಷ್ಟ್ರಗಳಿಂದ ನಡೆದ ಶೋಷಣೆಯೇ ಕಾರಣವಾದುದರಿಂದ, ಆ ಸಮಸ್ಯೆಗಳ ಪರಿಹಾರದಲ್ಲಿ ತಮ್ಮ ಜವಾಬ್ದಾರಿಯಿಲ್ಲವೆಂಬ ಭಾವನೆಯಿಂದ ರೂಪುಗೊಂಡಿದೆ. ಬ್ರಿಟನ್‌ವುಡ್ ಒಪ್ಪಂದದಲ್ಲಿ ಈ ರಾಷ್ಟ್ರಗಳು ಪಾಲ್ಗೊಂಡಿದ್ದರೂ, ಅನಂತರ ಸ್ಥಾಪಿಸಲಾದ ಅಂತರರಾಷ್ಟ್ರೀಯ ಆರ್ಥಿಕ ಸಂಸ್ಥೆಗಳ ಸದಸ್ಯತ್ವವನ್ನು ಸ್ವೀಕರಿಸಲಿಲ್ಲ.

ವಿಶ್ವಸಂಸ್ಥೆ ಮತ್ತು ಅದರ ಅಂಗಸಂಸ್ಥೆಗಳಲ್ಲಿ ಹೊಸ ಆರ್ಥಿಕ ವ್ಯವಸ್ಥೆಯ ಬಗ್ಗೆ ನಡೆಯುತ್ತಿರುವ ಚರ್ಚೆಗಳಲ್ಲಿ ಸಮಾಜವಾದಿ ರಾಷ್ಟ್ರಗಳು ಯಾವುದೇ ರೀತಿಯ ತೀವ್ರ ಪ್ರತಿಕ್ರಿಯೆಗಳನ್ನು ತೋರಿಸುವುದಿಲ್ಲ. ಹಿಂದುಳಿದ ರಾಷ್ಟ್ರಗಳೂ ಪಾಶ್ಚಾತ್ಯ ರಾಷ್ಟ್ರಗಳ ಕಡೆಗೆ ಬೊಟ್ಟು ಮಾಡುತ್ತವೆಯೇ ಹೊರತು, ದ್ವಿತೀಯ ಜಗತ್ತಿನ ಬಗ್ಗೆ ಮಾತೆತ್ತುವುದಿಲ್ಲ. ಕೆಲವೊಂದು ವಿಷಯಗಳಲ್ಲಿ ಸಮಾಜವಾದಿ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳ ಪಕ್ಷ ವಹಿಸಿದರೆ, ಇನ್ನು ಕೆಲವು ವಿಷಯಗಳಲ್ಲಿ ತಟಸ್ಥ ನೀತಿಯನ್ನನುಸರಿಸುತ್ತವೆ; ಕೆಲವೊಮ್ಮೆ ಪ್ರತಿಕ್ರಿಯೆಯನ್ನೇ ವ್ಯಕ್ತಪಡಿಸುವುದಿಲ್ಲ.

ದ್ವಿತೀಯ ಜಗತ್ತನ್ನೊಳಗೊಳ್ಳದ ಹೊಸ ವ್ಯವಸ್ಥೆಯು ಅರ್ಥಹೀನ. ಇತ್ತೀಚೆಗೆ ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಾಷ್ಟ್ರಗಳೊಳಗೆ ಹೆಚ್ಚಿನ ವ್ಯಾಪಾರ ಸಂಬಂಧವೇರ್ಪಡುತ್ತಿರುವುದು ಶುಭ ಸಂಕೇತ. ಇಂಥ ಸಂದರ್ಭದಲ್ಲಿ ಸಮಾಜವಾದಿ ರಾಷ್ಟ್ರಗಳನ್ನು, ಅಂತರರಾಷ್ಟ್ರೀಯ ಆರ್ಥಿಕ ಸಂಸ್ಥೆಗಳು ಅಗತ್ಯವಾದ ಹೊಂದಾಣಿಕೆಗಳನ್ನು ಮಾಡಿಕೊಂಡು, ಸೇರಿಸಿಕೊಳ್ಳಬೇಕು. ಹೊಸವ್ಯವಸ್ಥೆಯ ರೂಪರೇಷೆಗಳನ್ನು ಸಿದ್ಧಪಡಿಸುವುದರಲ್ಲಿಯೂ ಆ ರಾಷ್ಟ್ರಗಳ ಅಭಿಪ್ರಾಯಕ್ಕೆ ಯೋಗ್ಯ ಮನ್ನಣೆ ನೀಡಬೇಕು. ಜಾಗತಿಕ ಹೊಂದಾಣಿಕೆಗಳನ್ನು ಮಾಡಿಕೊಳ್ಳದ, ರಾಷ್ಟ್ರಗಳ ಒಂದು ಗುಂಪನ್ನೇ ಹೊರಗಿಟ್ಟ, ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯು ಅಸಂಪೂರ್ಣವೂ, ಅಸಮರ್ಪಕವೂ ಆಗುವುದಲ್ಲದೆ, ಅದು ಯಶಸ್ವಿಯಾಗಲಾರದು.

ಸಾಮೂಹಿಕ ಸ್ವಾವಲಂಬನೆ (Collective Self–reliance) :

ಹಿಂದುಳಿದ ದೇಶಗಳು ತಮ್ಮೊಳಗೆ ಪರಸ್ಪರ ಸಹಕರಿಸುವ ಬಗ್ಗೆ ಸಾಕಷ್ಟು ಪರಿಶೀಲನೆ ಮಾಡಬೇಕಾದ ಅಗತ್ಯವಿದೆ. ಈ ಸಹಕಾರವನ್ನು ಹಣಕಾಸಿನ ವ್ಯವಸ್ಥೆ, ತಾಂತ್ರಿಕ ಜ್ಞಾನ,

ಉತ್ಪಾದನೆ, ವ್ಯಾಪಾರ ಮತ್ತಿತರ ಎಲ್ಲಾ ಆರ್ಥಿಕ ರಂಗಗಳಿಗೂ, ಒಂದರ ನಂತರ ಒಂದರಂತೆ, ಕ್ರಮೇಣ ವ್ಯಾಪಿಸಬಹುದು. ಇಂತಹ ಆರ್ಥಿಕ ಸಹಕಾರವನ್ನು ವಿವಿಧ ಅಂತಸ್ತುಗಳಲ್ಲಿ ಯೋಜಿಸಬಹುದು. ಉದಾಹರಣೆಗೆ, ಭಾರತೀಯ ಉಪಖಂಡದ ರಾಷ್ಟ್ರಗಳಾದ ಭಾರತ, ಪಾಕಿಸ್ತಾನ ಮತ್ತು ಬಾಂಗ್ಲಾ ದೇಶಗಳೊಳಗೆ ಆರ್ಥಿಕ ಸಹಕಾರದ ಬಗ್ಗೆ ಚಿಂತಿಸಬಹುದು. ಅಂತೆಯೇ, ಆಫ್ರಿಕನ್ ದೇಶಗಳು, ಲ್ಯಾಟಿನ್ ಅಮೇರಿಕದ ರಾಷ್ಟ್ರಗಳು ಮತ್ತು ಆಗ್ನೇಯ ಏಷ್ಯಾದ ರಾಷ್ಟ್ರಗಳು ಕೂಡಾ ತಮ್ಮೊಳಗೆ ಸಹಕರಿಸಿಕೊಳ್ಳಬಹುದು; ಅಲ್ಲದೆ ಇಂತಹ ವಿವಿಧ ಗುಂಪುಗಳ ಮಧ್ಯೆ ಕೂಡಾ ಸಹಕಾರ ಏರ್ಪಡಿಸಬಹುದು. ಇಂತಹ ಅನೇಕ ಪ್ರಾದೇಶಿಕ ಆರ್ಥಿಕ ಸಹಕಾರದ ಯೋಜನೆಗಳು ಈಗಾಗಲೇ ಅಸ್ತಿತ್ವದಲ್ಲಿದ್ದರೂ, ಅವುಗಳಲ್ಲಿ ಹೆಚ್ಚಿನವು ಯಶಸ್ವಿಯಾಗಿಲ್ಲ; ಅವುಗಳಿಗೆ ಹೊಸ ಉತ್ಸಾಹ, ಚೈತನ್ಯಗಳನ್ನು ತುಂಬುವ ಅಗತ್ಯವಿದೆ. ಹೊಸ ಶಕ್ತಿ ಉತ್ಸಾಹ ಮತ್ತು ಸಹಕಾರೀ ಮನೋಭಾವಗಳಿಂದ ಪ್ರಯತ್ನಿಸಿದರೆ, ಬಡದೇಶಗಳು ಪ್ರತ್ಯಪ್ರತ್ಯೇಕವಾಗಿ ಸಾಧಿಸಲಾರದ ಸ್ವಾವಲಂಬನೆಯನ್ನು ಒಟ್ಟಾಗಿ ಸಾಧಿಸಲಾರವೆಂಬುದಕ್ಕೆ ಯಾವುದೇ ಕಾರಣವಿಲ್ಲ.

ಉಪಸಂಹಾರ :

ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಬಗ್ಗೆ ಇಷ್ಟರತನಕ ಕೃತಿಗಿಂತ ಮಾತೇ ಹೆಚ್ಚು. ಹಾಗೆಂದ ಮಾತ್ರಕ್ಕೆ ಏನೂ ಪ್ರಗತಿ ಸಾಧಿಸಲಾಗಿಲ್ಲವೆಂದಲ್ಲ. ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನವು ಸಮಸ್ಯೆಗಳ ಅಧ್ಯಯನದಲ್ಲಿ ಮತ್ತು ಪರಿಹಾರಗಳನ್ನು ರೂಪಿಸುವುದರಲ್ಲಿ ಸಾಕಷ್ಟು ಸಂಶೋಧನೆಯನ್ನು ಮಾಡಿದೆ. ಈ ಬಗ್ಗೆ ನಡೆದ ಚರ್ಚೆಗಳು ಮತ್ತು ಪ್ರಕಟಿತ ಸಾಹಿತ್ಯಗಳು ಉದ್ದೇಶಿತ ಹೊಸ ವ್ಯವಸ್ಥೆಯ ಬಗ್ಗೆ ಜನರಿಗೆ ತಿಳುವಳಿಕೆ ನೀಡುವುದರಲ್ಲಿ ಬಹಳ ಪ್ರಯೋಜನಕಾರಿಯಾಗಿವೆ. ಅಂತರರಾಷ್ಟ್ರೀಯ ಆರ್ಥಿಕ ರಂಗದಂತಹ ಕ್ಷೇತ್ರಗಳಲ್ಲಿ ಬದಲಾವಣೆಗಳು ನಿಧಾನವಾಗಿ ರೂಪುಗೊಳ್ಳಬೇಕೇ ವಿನಹ ಅವಸರದಲ್ಲಿ ಅಲ್ಲ.

ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯು ಕೇವಲ ಬಡರಾಷ್ಟ್ರಗಳಿಗೆ ಮಾತ್ರ ಬೇಕಾದುದಲ್ಲ; ಶ್ರೀಮಂತ ರಾಷ್ಟ್ರಗಳಿಗೂ ಅದರ ಅಗತ್ಯವಿದೆ. ರಷ್ಯಾ, ಚೀನಾಗಳಂತಹ ಸಮಾಜವಾದಿ ರಾಷ್ಟ್ರಗಳೂ ಸೇರಿದಂತೆ, ಎಲ್ಲಾ ರಾಷ್ಟ್ರಗಳೂ ಸಮಾನ ಸಹಭಾಗಿಗಳಂತೆ ಪಾಲ್ಗೊಳ್ಳುವ ಹೊಸ ವಿಶ್ವವ್ಯವಸ್ಥೆಯು ಆದಾದರೆ, ಈ ಜಗತ್ತು ಕೇವಲ ಶ್ರೀಮಂತರ ಸುಖ ಜೀವನಕ್ಕೆ ಮಾತ್ರವಲ್ಲ, ಇಡೀ ಮಾನವ ಜನಾಂಗದ ವಾಸಕ್ಕೆ ಯೋಗ್ಯವಾಗಬಲ್ಲುದು.

ಅಡಿಟಿಪ್ಪಣಿಗಳು

[1] Jan Tinbergen (Coordinator), *Reshaping the International Order : A Report to the Club of Rome*, London, Hutchinson and co., 1977; pp. 19and 21.

[2] ಅದೇ, ಪು. 34.

REFERENCES

1. W. Arthur Lewis, *The Evolution of the International Economic Order*, (Princeton, N. J. : Princeton University Press, 1977).
2. Bhagwati, J. N. (Ed) : *The New International Economic Order*, (Cambridge, Mass, The MIT Press, 1977)
3. Richard, N. Cooper, "A New International Economic Order for Mutual gain", *Foreign Policy*, Spring, 1977.
4. Jahangir Amuzegar, "A New International Order : The North-South Dialogue", *Dialogue*, Vol. 10, 1977.
5. Wassily Leontief, "Observations on Some World wide Economic Issues of the coming years", *Challenge*, March/April, 1978.
6. Alex Iveroth, "Thoughts on a New International Economic Order", *National Journal*, June, 1978.
7. United Nations "*Programme of Action on the Establishment of a New Economic Order*, General Assembly Resolution 3202 (S - VI).
8. Arthur F. Burns, "The Need for Order in International Finance", *Columbia Journal of World Business*, Spring, 1977.

ಎನ್. ಪ್ರಭುಸ್ವಾಮಿ

ವಿಜ್ಞಾನಿ ಮಹಲನೋಬಿಸ್‌ರವರು

ವಿಜ್ಞಾನಿ ಮಹಲನೋಬಿಸ್‌ರವರ ನಿಧನದಿಂದ ವೈಜ್ಞಾನಿಕ ಪ್ರಪಂಚಕ್ಕೆ ಅಗಾಧ ನಷ್ಟ ಉಂಟಾಗಿದೆ. ಇವರ ನಿಧನದಿಂದ ಇಂಡಿಯಾಕ್ಕಂತು ಸಹಿಸಲಾರದಂತಹ ನಷ್ಟ ಉಂಟಾಗಿದೆ. ಏಕೆಂದರೆ ಇವರು ನಮ್ಮ ದೇಶದ ಆರ್ಥಿಕಾಭಿವೃದ್ಧಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡುವುದರಲ್ಲಿ ಪ್ರಮುಖಪಾತ್ರ ವಹಿಸಿದ್ದರು. ಇವರು 1972ನೆ ಇಸವಿ ಜೂನ್ 28ನೇ ತಾರೀಖು ಅಂದರೆ ತಮ್ಮ 79ನೆ ಜನ್ಮದಿನಾಚರಣೆಯನ್ನು ಆಚರಿಸುವುದಕ್ಕೆ ಒಂದು ದಿವಸ ಮುಂಚೆ ಕಾಲವಾದರು.

ಮಹಲನೋಬಿಸ್‌ರವರು ಇಂಡಿಯಾದಲ್ಲಿ ಪ್ರೊಫೆಸರ್ ಎಂಬ ನಾಮಧೇಯದಿಂದ ಎಲ್ಲಾ ವಿದ್ವಾಂಸರಿಗೂ ಚಿರಪರಿಚಿತರಾಗಿದ್ದರು. ಇವರನ್ನು ಕಂಡರೆ ಸರ್ಕಾರಿ ವಲಯಗಳಲ್ಲಿ ಎಷ್ಟು ಗೌರವವಿತ್ತು ಅಂದರೆ, ಯಾವ ಉನ್ನತಾಧಿಕಾರಿಯೂ ಇವರನ್ನು ಹೆಸರಿಡಿದು ಕೂಗುತ್ತಿರಲಿಲ್ಲ. ಅದರ ಬದಲು ಎಲ್ಲಾ ಉನ್ನತಾಧಿಕಾರಿಗಳೂ ಇವರನ್ನು ಗೌರವಪೂರ್ವಕವಾಗಿ ಪ್ರೊಫೆಸರ್ ಎಂದು ಮಾತ್ರ ಕೂಗುತ್ತಿದ್ದರು. ಚಿಕ್ಕವಯಸ್ಸಿನಲ್ಲಿ ಇವರು ಭೌತಶಾಸ್ತ್ರ ಅಧ್ಯಯನ ಮಾಡಿದರು. ಭೌತಶಾಸ್ತ್ರದ ಅಧ್ಯಾಪಕರಾಗಿ ಸುಮಾರು 30 ವರ್ಷಗಳ ಕಾಲ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸಿದರು. ಅಧ್ಯಾಪಕರಾಗಿದ್ದಾಗಲೇ ಇವರು ಸಹಜ ವೃತ್ತಿಯಿಂದ ಸಂಖ್ಯಾಶಾಸ್ತ್ರದಲ್ಲಿ ಆಸಕ್ತಿ ತೋರಲಾರಂಭಿಸಿದರು. ಸಂಖ್ಯಾಶಾಸ್ತ್ರದಲ್ಲಿ ಪ್ರಾವೀಣ್ಯತೆಯನ್ನು ಪಡೆಯುತ್ತಿದ್ದಂತೆಯೇ ಆರ್ಥಿಕ ಯೋಜನೆಯ ಮಹತ್ವವನ್ನು ಮನವರಿಕೆ ಮಾಡಿಕೊಂಡರು. ಅದರ ಪರಿಣಾಮವಾಗಿ ಇವರು ಆರ್ಥಿಕ ಯೋಜನೆಯ ವಿಷಯದಲ್ಲಿ ಬಹಳ ಆಸಕ್ತಿ ಹೊಂದಿದ್ದರು. ಇಂಡಿಯಾದ ಎರಡನೆ ಪಂಚವಾರ್ಷಿಕ ಯೋಜನೆಯನ್ನು ರೂಪಿಸುವಾಗ ಇವರು ಪ್ರಮುಖ ಪಾತ್ರ ವಹಿಸಿದ್ದರು. ಇದರಿಂದ ಇವರಿಗೆ ಯೋಜನಾ ತಜ್ಞ ಎಂಬ ಖ್ಯಾತಿ ದೊರೆಯಿತು.

ಸಂಖ್ಯಾಶಾಸ್ತ್ರದಲ್ಲಿ ಇವರಿಗಿದ್ದ ಅಭಿರುಚಿಯ ಪರಿಣಾಮವಾಗಿ ಇವರು ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆಯನ್ನು (Indian Statistical Institute) ಸ್ಥಾಪಿಸಿದರು. ಈಗ ಪ್ರಪಂಚದಲ್ಲಿರುವ ಪ್ರಮುಖ ಸಂಶೋಧನಾ ಸಂಸ್ಥೆಗಳ ಪೈಕಿ, ಈ ಸಂಸ್ಥೆಯು ಮಹತ್ವದ ಸ್ಥಾನವನ್ನು ಪಡೆದಿದೆ. ಇಂಡಿಯಾದ ಆರ್ಥಿಕ ಸಮಸ್ಯೆಗಳನ್ನು ಅರಿತುಕೊಳ್ಳಲು ನೆರವಾಗುವ ಅಂಕಿಅಂಶಗಳನ್ನು ಸಂಗ್ರಹಿಸುವುದಕ್ಕಾಗಿ, ಸಂಖ್ಯಾಶಾಸ್ತ್ರ ವಿಭಾಗವನ್ನು ಇಂಡಿಯಾ ಸರ್ಕಾರದ ಅಧೀನದಲ್ಲಿ ರಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಎರಡನೆ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವಾಗ ಕೈಗಾರಿಕಾಭಿವೃದ್ಧಿಗೆ ಪ್ರಾಶಸ್ತ್ಯವನ್ನು ಇತ್ತರು. ಇದರಿಂದ ಇಂಡಿಯಾದ ಆರ್ಥಿಕಾಭಿವೃದ್ಧಿಗೆ ಸ್ವಯಂ ಚಾಲಿತ ವ್ಯವಸ್ಥೆಯು ದೊರೆಯುತ್ತದೆ ಎಂದು ತೋರಿಸಿಕೊಟ್ಟರು.

ಯಾವುದೇ ಸಿದ್ಧಾಂತವನ್ನು ಮನಸ್ಸಿಗೆ ಸರಿ ಎಂದು ತೋರಿದ ಹೊರತು ಇವರು ಒಪ್ಪಿಕೊಳ್ಳುತ್ತಿರಲಿಲ್ಲ. ಆ ಸಿದ್ಧಾಂತವನ್ನು ರೂಪಿಸಿದ ವ್ಯಕ್ತಿ ಬಹು ಗಣ್ಯವ್ಯಕ್ತಿ ಎಂಬ ಕೀರ್ತಿ ಪಡೆದಿದ್ದರೂ ಇವರು ಅಂತಹ ಸಿದ್ಧಾಂತವನ್ನು ಸುಮ್ಮನೆ ಒಪ್ಪಿಕೊಳ್ಳುತ್ತಿರಲಿಲ್ಲ. ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ದೇಶಗಳಿಗೆ ಅನ್ವಯಿಸುವಂತೆ ಸಿದ್ಧಪಡಿಸಲಾದ ಆರ್ಥಿಕ ಸಿದ್ಧಾಂತಗಳನ್ನು ವಿವೇಚನೆಯಿಲ್ಲದೆ ಇಂಡಿಯಾದಂತಹ ಹಿಂದುಳಿದ ದೇಶಗಳ ಆರ್ಥಿಕ ವ್ಯವಸ್ಥೆಗೆ ಅನ್ವಯಿಸುವುದನ್ನು ಇವರು ಬಹುವಾಗಿ ಖಂಡಿಸುತ್ತಿದ್ದರು. ಇಂತಹ ಸಿದ್ಧಾಂತಗಳ ಆಧಾರದ ಮೇಲೆ ನಮ್ಮ ದೇಶದಲ್ಲಿಯೂ ಆರ್ಥಿಕ ನೀತಿಗಳನ್ನು ರೂಪಿಸುತ್ತಿರುವುದರಿಂದ ನಮ್ಮ ದೇಶದ ಆರ್ಥಿಕಾಭಿವೃದ್ಧಿಗೆ ಧಕ್ಕೆ ಉಂಟಾಗಿದೆ ಎಂಬುದನ್ನು ಇವರು ಮನಗಂಡಿದ್ದರು ಇಂಡಿಯಾದ ಆರ್ಥಿಕಾಭಿವೃದ್ಧಿಯು ಶೀಘ್ರಗತಿಯಲ್ಲಿ ಚಲಿಸುವಂತೆ ಮಾಡಬೇಕಾದರೆ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ವಿಷಯವಾಗಿ ತಮ್ಮ ಜೀವಮಾನ ಪರ್ಯಂತವೂ ಯೋಚಿಸುತ್ತಿದ್ದರು. ಇವರಲ್ಲಿದ್ದ ದೇಶಾಭಿಮಾನ ಮತ್ತು ಜ್ಞಾನಶಕ್ತಿಯನ್ನು ಕಂಡು ಇವರ ಸ್ನೇಹಿತರುಗಳು ಇವರನ್ನು ಬಹಳ ಗೌರವದಿಂದ ಕಾಣುತ್ತಿದ್ದರು

ತಮ್ಮೊಡನೆ ಕೆಲಸ ಮಾಡುತ್ತಿದ್ದ ಸಹೋದ್ಯೋಗಿಗಳನ್ನು ಹುರಿದುಂಬಿಸಿ, ಅವರು ಉತ್ಸಾಹದಿಂದ ಕೆಲಸ ಮಾಡುವಂತೆ ಮಾಡುವ ಶಕ್ತಿ ಇವರಲ್ಲಿತ್ತು. ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆಗೆ ಬುದ್ಧಿವಂತರಾದ ಹಲವಾರು ಮಂದಿ ಸಂಶೋಧಕರನ್ನು ನೇಮಿಸಿಕೊಂಡು ಅವರು ಒಂದು ವಿಶ್ವವಿಖ್ಯಾತ ಸಂಸ್ಥೆಯನ್ನು ಬೆಳಸುವಂತೆ ಮಾಡಿದರು. ಸಂಖ್ಯಾಶಾಸ್ತ್ರದ ಅಭಿವೃದ್ಧಿಗೆ ಈ ಸಂಸ್ಥೆಯ ಸಂಶೋಧಕರು ಅನೇಕ ಕೊಡುಗೆಗಳನ್ನು ನೀಡಿದ್ದಾರೆ.

ಪ್ರೊಫೆಸರ್‌ರವರು ವಿಶ್ವಸಂಸ್ಥೆಯ ಸಂಖ್ಯಾಶಾಸ್ತ್ರದ ಸಮಿತಿಯ ಅಧ್ಯಕ್ಷರಾಗಿ ಗಮನಾರ್ಹ ಸೇವೆ ಸಲ್ಲಿಸಿದರು. ಮಾದರಿ ಸಮೀಕ್ಷೆಗಳನ್ನು ನಡೆಸುವುದರ ಮೂಲಕ ಅತ್ಯವಶ್ಯಕವಾದ ವಿಷಯಗಳನ್ನು ಸಂಗ್ರಹಿಸಬಹುದೆಂಬುದನ್ನು ಇವರು ತೋರಿಸಿಕೊಟ್ಟರು. ಬಂಗಾಳ ರಾಜ್ಯದಲ್ಲಿ ಉತ್ಪನ್ನ ಮಾಡುವ ನಾರಿನ ಬಗ್ಗೆ ವಿಷಯ ಸಂಗ್ರಹಿಸಲು, ಇವರು ಮಾದರಿ ಸಮೀಕ್ಷೆ ಕ್ರಮವನ್ನು ಅನುಸರಿಸಿದರು. ಇದರಿಂದ ಉಂಟಾದ ಪ್ರಯೋಜನವನ್ನು ಅನೇಕ ಅರ್ಥಶಾಸ್ತ್ರಜ್ಞರು ಗ್ರಹಿಸಿದರು. ಎಲ್ಲಾ ದೇಶಗಳಲ್ಲಿಯೂ ಇಂತಹ ಸಮೀಕ್ಷೆ ನಡೆಸುವ ಪದ್ಧತಿ ಜಾರಿಗೆ ಬಂದಿತು. ರಾಷ್ಟ್ರೀಯ ಮಟ್ಟದಲ್ಲಿ ಮಾದರಿ ಸಮೀಕ್ಷೆಗಳನ್ನು (National Sample Survey) ನಡೆಸುವ ವ್ಯವಸ್ಥೆಯನ್ನು ಇಂಡಿಯಾದಲ್ಲಿ ಇವರು ಜಾರಿಗೆ ತಂದರು. ಇಂತಹ ಸಮೀಕ್ಷೆಗಳಿಂದ, ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಲು ಬೇಕಾದ ಅಂಶಗಳು ಹೊರಬಿದ್ದವು. ಆರ್ಥಿಕ ಯೋಜನೆಗಳನ್ನು ರೂಪಿಸುವ ಕಾರ್ಯದಲ್ಲಿ ಇವು ಬಹಳ ನೆರವು ನೀಡಿದವು.

ರಾಷ್ಟ್ರೀಯ ವರಮಾನ ಅಂದಾಜು ಮಾಡುವ ಸಮಿತಿಯ ಅಧ್ಯಕ್ಷರನ್ನಾಗಿ ಪ್ರೊಫೆಸರ್‌ರವರನ್ನು 1949ರಲ್ಲಿ ನೇಮಿಸಲಾಯಿತು. ಇದು ಇವರ ಜೀವನದ ಒಂದು ಮುಖ್ಯ ಘಟನೆ ಎನ್ನಬಹುದು. ಈ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾಗ ಇಂಡಿಯಾದ ಆರ್ಥಿಕ ಸಮಸ್ಯೆಗಳನ್ನು ಅರಿತುಕೊಳ್ಳುವ ಅವಕಾಶ ಇವರಿಗೆ ದೊರೆಯಿತು. ಅನಾರೋಗ್ಯ, ನಿರುದ್ಯೋಗ, ಅನಕ್ಷರತೆ ಮತ್ತು ಬಡತನ ಇಂಡಿಯಾದ ಪ್ರಮುಖ ಸಮಸ್ಯೆಗಳಾಗಿವೆ ಎಂಬುದನ್ನು ಅರಿತುಕೊಂಡರು. ಆದರೆ ಇವುಗಳ ಪ್ರಭಾವ ಎಷ್ಟರಮಟ್ಟಿಗಿದೆ ಎಂಬುದನ್ನು ತಿಳಿದುಕೊಳ್ಳಲಾಗಲಿಲ್ಲ. ಏಕೆಂದರೆ ಮೇಲ್ಕಂಡ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅಂಕಿಅಂಶಗಳನ್ನು ಸಂಗ್ರಹಿಸುವ ಯಾವ ವ್ಯವಸ್ಥೆಯೂ ಇಂಡಿಯಾದಲ್ಲಿ ಇರಲಿಲ್ಲ. ಆಗ ಅಂಕಿಅಂಶಗಳನ್ನು ಸಂಗ್ರಹಿಸುವ ಮಹತ್ವವನ್ನು ಆಗಿನ ಪ್ರಧಾನಿ ಪಂಡಿತ ನೆಹರುರವರಿಗೆ ವಿವರಿಸಿದರು. ಪ್ರಧಾನಿ ನೆಹರುರವರು ಪ್ರೊಫೆಸರ್‌ರವರ ಸಲಹೆಯನ್ನು ಬಹುವಾಗಿ ಮೆಚ್ಚಿಕೊಂಡರು. ಇದರ

ಪರಿಣಾಮವಾಗಿ ಅಂಕಿಅಂಶಗಳನ್ನು ಕ್ರೋಢೀಕರಿಸುವುದಕ್ಕಾಗಿ ಕೇಂದ್ರ ಸಂಖ್ಯಾಶಾಸ್ತ್ರ ಸಂಸ್ಥೆಯನ್ನು (Central Statistical Organization) 1951ರಲ್ಲಿ ಸ್ಥಾಪಿಸಲಾಯಿತು. ಪ್ರೊಫೆಸರ್‌ರವರನ್ನು ಇಂಡಿಯಾ ಸರ್ಕಾರದ ಗೌರವ ಸಂಖ್ಯಾಶಾಸ್ತ್ರ ಸಲಹೆಗಾರರನ್ನಾಗಿ ನೇಮಿಸಿಕೊಳ್ಳಲಾಯಿತು. ಈ ಗೌರವ ಹುದ್ದೆ ದೊರೆತ ಮೇಲೆ ನೆಹರೂರವರೊಡನೆ ಇವರ ಸಂಪರ್ಕ ಅಧಿಕಗೊಂಡಿತು. ಆರ್ಥಿಕ ಯೋಜನೆ ವಿಷಯದಲ್ಲಿ ಇವರ ಸಲಹೆ ಪಡೆಯಲು ನೆಹರೂರವರು ಯತ್ನಿಸಿದರು. ಆರ್ಥಿಕ ಯೋಜನೆಯನ್ನು ತಯಾರಿಸುವಾಗ ಯೋಜನೆಯ ಉದ್ದೇಶಗಳನ್ನು ವಿವರವಾಗಿ ತಿಳಿಸಬೇಕೆಂದು ಇವರು ಅಭಿಪ್ರಾಯಪಟ್ಟರು. ದೇಶದಲ್ಲಿ ದೊರೆಯುವ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಂಡು ತನ್ಮೂಲಕ ಪರಮಾವಧಿ ಪ್ರಯೋಜನ ಪಡೆಯುವಂತಹ ಯೋಜನೆಯನ್ನು ತಯಾರಿಸಬೇಕೆಂದು ಇವರು ಪ್ರತಿಪಾದಿಸಿದರು. ಇವರ ಸಲಹೆಗಳನ್ನು ಮೆಚ್ಚಿದ ನೆಹರೂರವರು, ಇವರಿಗೆ ಎರಡನೆ ಪಂಚವಾರ್ಷಿಕ ಯೋಜನೆ ರೂಪಿಸುವ ಜವಾಬ್ದಾರಿಯನ್ನು ವಹಿಸಿದರು. ಪ್ರೊಫೆಸರ್‌ರವರು ಅರ್ಥಶಾಸ್ತ್ರ ಓದಿರಲಿಲ್ಲ. ಆಧುನಿಕ ಅರ್ಥಶಾಸ್ತ್ರದ ಸಿದ್ಧಾಂತಗಳನ್ನು ಅಭ್ಯಾಸ ಮಾಡಿರಲಿಲ್ಲ. ಆದರೂ ತಮ್ಮ ಗಣಿತಶಾಸ್ತ್ರದ ಅಧ್ಯಯನ ಬಲದಿಂದ ದ್ವಿಕ್ಷೇತ್ರ ಆದರ್ಶ ಒಂದನ್ನು ರಚಿಸಿ (Two Sector Model) ತನ್ಮೂಲಕ ಇಂಡಿಯಾಕ್ಕೆ ಅನ್ವಯಿಸುವಂತೆ ಒಂದು ಆರ್ಥಿಕ ಯೋಜನೆಯನ್ನು ರೂಪಿಸಿದರು. ಅನಂತರ ಚತುರ್ಕ್ಷೇತ್ರ ಆದರ್ಶ (Four Sector Model) ಒಂದನ್ನು ರಚಿಸಿ ಅದರ ಆಧಾರದ ಮೇಲೆ ಇಂಡಿಯಾದ ಎರಡನೆ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿದರು. 1955ರಲ್ಲಿ ಇಂಡಿಯಾದ ಯೋಜನಾ ಮಂಡಲಿಯ ಪೂರ್ಣಾವಧಿ ಸದಸ್ಯರನ್ನಾಗಿ ಇವರನ್ನು ನೇಮಿಸಲಾಯಿತು. ಈ ಹುದ್ದೆಗೆ ನೇಮಕಗೊಂಡಮೇಲೆ ಆರ್ಥಿಕ ಯೋಜನೆ ವಿಷಯದಲ್ಲಿ ಇವರಿಗಿದ್ದ ಆಸಕ್ತಿ ಮತ್ತಷ್ಟು ಹೆಚ್ಚಾಯಿತು.

ಮಾನವನ ಎಲ್ಲಾ ರೀತಿಯ ಚಟುವಟಿಕೆಗಳನ್ನು ಕುರಿತು ಅಧ್ಯಯನ ಮಾಡುವುದಕ್ಕಾಗಿ ಸಂಖ್ಯಾಶಾಸ್ತ್ರವನ್ನು ಒಂದು ಉಪಕರಣವನ್ನಾಗಿ ಬಳಸಿಕೊಳ್ಳಬಹುದೆಂದು ಪ್ರೊಫೆಸರ್‌ರವರು ವಿಜ್ಞಾನ ಜಗತ್ತಿಗೆ ತೋರಿಸಿಕೊಟ್ಟರು. ಸಂಖ್ಯಾಶಾಸ್ತ್ರವನ್ನು ಸದುದ್ದೇಶದಿಂದ ಉಪಯೋಗಿಸಿಕೊಂಡರೆ ಅದು ಮಾನವನ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಮಾರ್ಗದರ್ಶಿಯಾಗುತ್ತದೆ ಎಂದು ಪ್ರತಿಪಾದಿಸಿದರು. ಭಾರತೀಯ ವಿಜ್ಞಾನ ಮಂಡಳಿಯ ವಾರ್ಷಿಕ ಅಧಿವೇಶನದಲ್ಲಿ ಅಧ್ಯಕ್ಷ ಭಾಷಣ ಮಾಡುವಾಗ ಸಂಖ್ಯಾಶಾಸ್ತ್ರದ ಮಹತ್ವವನ್ನು ಕುರಿತು ಮನದಟ್ಟಾಗುವಂತೆ ವಿವರಿಸಿದರು. ಈ ಕೆಳಗೆ ಕಂಡ ಭಿನ್ನ ಭಿನ್ನ ಸಮಸ್ಯೆಗಳ ಅಧ್ಯಯನಕ್ಕೆ ಸಂಖ್ಯಾಶಾಸ್ತ್ರವನ್ನು ಅಳವಡಿಸಿಕೊಂಡವರಲ್ಲಿ ಪ್ರೊಫೆಸರ್‌ರವರು ಮೊದಲಿಗರು ಎನ್ನಬಹುದು. ಅವರು ಅಧ್ಯಯನ ನಡೆಸಿದ ಸಮಸ್ಯೆಗಳು ಹೀಗಿವೆ: 1) ಭಾರತದಲ್ಲಿ ಜಾತಿ ಮತ್ತು ಬುಡಕಟ್ಟುಗಳ ಉದ್ಭವ ಮತ್ತು ಅವುಗಳ ಬೆಳವಣಿಗೆ; 2) ಒಂದು ನಿರ್ದಿಷ್ಟ ಪ್ರಮಾಣದ ಭತ್ತವನ್ನು ಉತ್ಪಾದಿಸಬೇಕಾದರೆ ಉಪಯೋಗಿಸಿಕೊಳ್ಳಬೇಕಾದಂತಹ ನೀರಿನ ಪ್ರಮಾಣ; 3) ಒಂದು ಅಣೆಕಟ್ಟಿನ ಎತ್ತರವನ್ನು ನಿರ್ಧರಿಸುವಿಕೆ; 4) ಒಂದು ನಿರ್ದಿಷ್ಟ ಮಟ್ಟದ ಆರ್ಥಿಕ ಬೆಳವಣಿಗೆಗಾಗಿ ಬೇಕಾದರೆ ಅವಶ್ಯಕವಾದ ಬಂಡವಾಳ; 5) ವಾಯುಗುಣ ಬದಲಾವಣೆ ವಿಷಯದಲ್ಲಿ ಮುನ್ಸೂಚನೆ ನೀಡುವಿಕೆ, ಇತ್ಯಾದಿ.

ಕೈಗಾರಿಕಾ ಉತ್ಪನ್ನಗಳ ಗುಣಮಟ್ಟವನ್ನು ಉತ್ತಮಪಡಿಸಲು ಸಂಖ್ಯಾಶಾಸ್ತ್ರದ ವಿಧಾನಗಳನ್ನು ಅಳವಡಿಸಿಕೊಂಡರೆ ಒಳ್ಳೆಯದು ಎಂದು ಇವರು ಪ್ರತಿಪಾದಿಸುತ್ತಿದ್ದರು. ಕೈಗಾರಿಕೋದ್ಯಮಿಗಳಿಗೆ ಸಲಹೆ ನೀಡುವುದಕ್ಕಾಗಿ ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆಯಲ್ಲಿ ಒಂದು ಪ್ರತ್ಯೇಕ ವಿಭಾಗವನ್ನೇ ರಚಿಸಿದರು.

ಸಂಖ್ಯಾಶಾಸ್ತ್ರ ಮತ್ತು ಆರ್ಥಿಕ ಯೋಜನೆಗೆ ಸಂಬಂಧಿಸಿದಂತೆ ಇವರು ನೀಡಿದ ಕೊಡುಗೆಗಳನ್ನು ಪ್ರಪಂಚದ ಅನೇಕ ವಿದ್ವಾಂಸರು ಮೆಚ್ಚಿ ಇವರಿಗೆ ಪ್ರಶಸ್ತಿಗಳನ್ನು ಇತ್ತು ಗೌರವಿಸಿದ್ದಾರೆ. 1944ರಲ್ಲಿ ವೆಲ್ಡನ್ ಚಿನ್ನದ ಪದಕವನ್ನು ಇವರಿಗೆ ಕೊಟ್ಟು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಇವರನ್ನು ಗೌರವಿಸಿತು. 1945ರಲ್ಲಿ ಇಂಗ್ಲೆಂಡಿನ ರಾಯಲ್ ಸೊಸೈಟಿಯ ಸದಸ್ಯರನ್ನಾಗಿ ಇವರನ್ನು ನೇಮಿಸಲಾಯಿತು. 1952ರಲ್ಲಿ ಪಾಕಿಸ್ತಾನದ ಸಂಖ್ಯಾಶಾಸ್ತ್ರ ಸಂಘದ ಗೌರವ ಸದಸ್ಯರಾದರು. 1954ರಲ್ಲಿ ಇಂಗ್ಲೆಂಡಿನ ರಾಯಲ್ ಸ್ಟಾಟಿಸ್ಟಿಕಲ್ ಸೊಸೈಟಿಯು ಇವರನ್ನು ತನ್ನ ಗೌರವ ಸದಸ್ಯನೆಂದು ಸ್ವೀಕರಿಸಿ ಗೌರವಿಸಿತು. 1957ರಲ್ಲಿ ಅಂತರರಾಷ್ಟ್ರೀಯ ಸಂಖ್ಯಾಶಾಸ್ತ್ರ ಸಂಘದ ಅಧ್ಯಕ್ಷರಾದರು. 1958ರಲ್ಲಿ ರಷ್ಯಾ ದೇಶದ ಸೈನ್ಸ್ ಅಕಾಡೆಮಿಯ ಗೌರವ ಸದಸ್ಯತ್ವ ಇವರಿಗೆ ದೊರೆಯಿತು. 1959ರಲ್ಲಿ ಕೇಂಬ್ರಿಡ್ಜ್‌ನ ಕಿಂಗ್ಸ್ ಕಾಲೇಜ್ ಇವರನ್ನು ಗೌರವಿಸಿತು. 1961ರಲ್ಲಿ ಅಮೆರಿಕಾದ ಸಂಖ್ಯಾಶಾಸ್ತ್ರ ಸಂಘ ಇವರನ್ನು ತನ್ನ ಗೌರವ ಸದಸ್ಯರೆಂದು ಅಂಗೀಕರಿಸಿ, ಗೌರವಿಸಿತು. 1963ರಲ್ಲಿ ಜೆಕೊಸ್ಲೊವಾಕಿಯದ ವಿಜ್ಞಾನಿಗಳ ಮಂಡಳಿಯು ಇವರಿಗೆ ಚಿನ್ನದ ಪದಕವನ್ನಿತ್ತು ಗೌರವಿಸಿತು. ಸ್ಟಾಕೋಂ ಮತ್ತು ಸೋಫಿಯ ವಿಶ್ವವಿದ್ಯಾನಿಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದವು.

ಇಂಡಿಯಾದಲ್ಲಿ, ಭಾರತೀಯ ರಾಷ್ಟ್ರೀಯ ಅಕಾಡೆಮಿಯ ಸ್ಥಾಪನೆಗೆ, ಇವರು ಕಾರಣರಾದರು. 1957 ಮತ್ತು 1958ರಲ್ಲಿ ಅದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಕಲ್ಕತ್ತಾ ಮತ್ತು ದೆಹಲಿ ವಿಶ್ವವಿದ್ಯಾನಿಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿವೆ. ವಿಶ್ವಭಾರತಿ ವಿಶ್ವವಿದ್ಯಾನಿಲಯವು ಇವರಿಗೆ ದೇಶಿಕೋತ್ತಮ ಎಂಬ ಪ್ರಶಸ್ತಿಯನ್ನು ನೀಡಿದೆ. ಭಾರತ ಸರ್ಕಾರವು 1968ರಲ್ಲಿ ಇವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿತು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಉಂಟಾಗಿರುವ ವಿಜ್ಞಾನದ ಬೆಳವಣಿಗೆಯ ಪ್ರಯೋಜನವನ್ನು ಇಂಡಿಯಾ ಹೊಂದುವಂತೆ ಮಾಡಲು, ಇತರ ಭಾರತೀಯ ವಿಜ್ಞಾನಿಗಳಿಗಿಂತ ಪ್ರೊಫೆಸರ್‌ರವರು ಅಧಿಕ ಶ್ರಮ ವಹಿಸಿದರು. ಅನೇಕ ಅಂತರರಾಷ್ಟ್ರೀಯ ಖ್ಯಾತಿ ಪಡೆದ ವಿಜ್ಞಾನಿಗಳೊಂದಿಗೆ ಮತ್ತು ವಿಜ್ಞಾನ ಸಂಸ್ಥೆಗಳೊಂದಿಗೆ ಇವರು ಸಂಪರ್ಕ ಇಟ್ಟುಕೊಂಡಿದ್ದರು. ಪಾಶ್ಚಿಮಾತ್ಯ ದೇಶಗಳ ವಿಜ್ಞಾನಿಗಳೊಂದಿಗಲ್ಲದೆ, ಕಮ್ಯುನಿಸ್ಟ್ ಬಣದ ವಿಜ್ಞಾನಿಗಳೊಂದಿಗೂ ಇವರು ಉತ್ತಮ ಬಾಂಧವ್ಯವನ್ನು ಬೆಳೆಸಿಕೊಂಡಿದ್ದರು. ಅನೇಕ ಸಂದರ್ಭಗಳಲ್ಲಿ ವಿದೇಶೀ ವಿಜ್ಞಾನಿಗಳು ಇಂಡಿಯಾಕ್ಕೆ ಬಂದು ತಮ್ಮ ಸಲಹೆಗಳನ್ನು ನೀಡುವಂತೆ ಇವರು ಮಾಡಿದರು. ಇಂಡಿಯಾದ ವಿವಿಧ ಸಂಶೋಧನಾ ಸಂಸ್ಥೆಗಳೊಂದಿಗೆ ಸಂಪರ್ಕ ಇಟ್ಟುಕೊಂಡು, ಅನೇಕ ವಿಶ್ವವಿಖ್ಯಾತ ವಿಜ್ಞಾನಿಗಳು ತಮ್ಮ ಅಧ್ಯಯನ ಮುಂದುವರಿಸುವಂತೆ ಪ್ರೊಫೆಸರ್‌ರವರು ಏರ್ಪಾಡು ಮಾಡಿದರು. ವಿಜ್ಞಾನಿಯಾಗಿ ತಮ್ಮ ಪ್ರತಿಭೆಯನ್ನು ತೋರಿಸಿದುದಲ್ಲದೆ, ಸಾಮಾಜಿಕ ಚಟುವಟಿಕೆಗಳಲ್ಲೂ ಪ್ರೊಫೆಸರ್‌ರವರು ಸಕ್ರಿಯ ಪಾತ್ರ ವಹಿಸುತ್ತಿದ್ದರು. ರಾಜಾರಾಮ ಮೋಹನ್‌ರಾಯ್ ಮತ್ತು ರವೀಂದ್ರನಾಥ ಠಾಗೂರ್‌ರವರು ಆರಂಭಿಸಿದ್ದ ಸಾಮಾಜಿಕ ಸುಧಾರಣೆಗಳಲ್ಲಿ ಇವರು ಅಚಲ ವಿಶ್ವಾಸ ಹೊಂದಿದ್ದರು. ಬ್ರಹ್ಮ ಸಮಾಜದ ಸದಸ್ಯರಾಗಿ, ಇವರು ಅದರ ತತ್ವಗಳನ್ನು ಪ್ರತಿಪಾದಿಸುತ್ತಿದ್ದರು.

ಮೇಲ್ಕಂಡ ರೀತಿಯಲ್ಲಿ ತುಂಬು ಜೀವನ ನಡೆಸಿ ಪ್ರೊಫೆಸರ್‌ರವರು ಇಂಡಿಯಾದ ಜನಜೀವನದ ಮೇಲೆ ತಮ್ಮ ಪ್ರಭಾವ ಬೀರಿದ್ದಾರೆ. ಸಹಸ್ರಾರು ವರ್ಷಗಳವರೆಗೆ ವೈಜ್ಞಾನಿಕ ಪ್ರಪಂಚದಲ್ಲಿ ಇವರ ಹೆಸರು ಚಿರಸ್ಮರಣೀಯವಾಗಿ ಉಳಿಯುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ತಮ್ಮ ಜ್ಞಾನಾರ್ಜನೆಯಿಂದ ಇಂಡಿಯಾಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಂದು ಗೌರವ ಸ್ಥಾನ ಒದಗಿಸಿಕೊಟ್ಟಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.

ಡಿ. ಕೆ. ರಾಜೇಂದ್ರ

ಚಿಂತನ-೯

1. ದ್ವೇಷ

‘ದ್ವೇಷವನ್ನು ಪ್ರೀತಿಯಿಂದ ಗೆಲ್ಲು’ ಎಂಬುದೊಂದು ನಾಣ್ಣುಡಿ. ದ್ವೇಷ–ಪ್ರೀತಿಗಳೆರಡೂ ಮಾನವನ ಸ್ವಭಾವಕ್ಕೆ ಸಂಬಂಧಿಸಿದ್ದು. ಕೆಲವರು ಗಾಢವಾಗಿ ಪ್ರೀತಿಸುತ್ತಾರೆ. ಕೆಲವರು ಗಾಢವಾಗಿ ದ್ವೇಷಿಸುತ್ತಾರೆ. ಮತ್ತೆ ಕೆಲವರು ಎರಡನ್ನೂ ಸಮ ಸಮನಾಗಿ ಹೊಂದಿರುತ್ತಾರೆ. ಗಾಢವಾಗಿ ಪ್ರೀತಿಸುವ ಗುಣವುಳ್ಳವರು ಮಾತ್ರ ದ್ವೇಷವನ್ನು ಪ್ರೀತಿಯಿಂದ ಗೆಲ್ಲಬಲ್ಲರು. ಆದರೆ, ಇವರುಗಳ ಸಂಖ್ಯೆ ಕಡಿಮೆ. ದ್ವೇಷದಿಂದ ಬರುವ ಗೆಲವು ಯಾರಿಗೂ ಸಂತೋಷವನ್ನು ತರುವಂತಹುದಲ್ಲ. ತಂದರೂ ಅದು ತಾತ್ಕಾಲಿಕವಾದದ್ದು. ಏಕೆಂದರೆ ಪ್ರೀತಿಯಿಂದ ಪ್ರೀತಿ ಹೆಚ್ಚುವಂತೆ ದ್ವೇಷದಿಂದ ದ್ವೇಷ ಹೆಚ್ಚುತ್ತದೆ. ಪ್ರೀತಿಯಿಂದ ಸಾಧಿಸುವ ಗೆಲವು, ಸಂತೋಷ ಶಾಶ್ವತವಾದುದು ಇಬ್ಬರಿಗೂ ನೆಮ್ಮದಿಯನ್ನು, ಸುಖವನ್ನು, ಸಂತೋಷವನ್ನು ತಂದುಕೊಡುವಂಥದು. ಪ್ರೀತಿಸುವುದು ಮನುಷ್ಯತ್ವದ ಲಕ್ಷಣ, ದ್ವೇಷಿಸುವುದು ಮೃಗತ್ವದ ಲಕ್ಷಣ.

ಭೀಮ–ದುರ್ಯೋಧನರ ಮಧ್ಯೆ ಬೀಜರೂಪವಾಗಿ ಕಾಣಿಸಿಕೊಂಡ ದ್ವೇಷ ಇಡೀ ಕೌರವ ವಂಶವನ್ನೇ ನಾಶಗೊಳಿಸಿತು. ಆರಂಭದಿಂದ ಅಂತ್ಯದವರೆಗೂ ಎರಡು ಪಕ್ಷದವರನ್ನೂ ಅಸಮಾಧಾನದಲ್ಲಿ, ಜಂಜಾಟದಲ್ಲಿ. ಹೊಯ್ದಾಟದಲ್ಲಿ ಮುಳುಗಿಸಿತು. ಇತರರಿಗೂ ಕಿರುಕುಳವನ್ನುಂಟುಮಾಡಿತು. ಸಂತೋಷ ಎರಡು ಕಡೆಯೂ ಸೊನ್ನೆಯಾಯಿತು. ನಿರಪರಾಧಿಗಳೂ ಶಿಕ್ಷೆಗೆ, ನೋವಿಗೆ ತುತ್ತಾದರು. ಇಷ್ಟಾದರೂ ಅಂತ್ಯವೂ ಸುಖಮಯವಾಗಲಿಲ್ಲ. ದುರ್ಯೋಧನ ದ್ವೇಷದ ವಿಷಜ್ವಾಲೆಯಲ್ಲಿ ಬೆಂದುಹೋದ. ಅವನ ಹಿಂಬಾಲಕರೆಲ್ಲರೂ ಅದರಲ್ಲಿ ಬೆಂದು ಬೂದಿಯಾದರು. ಪಾಂಡವರಾದರೂ ಆ ದ್ವೇಷದ ವಿಷಜ್ವಾಲೆಯಿಂದ ಸಂಪೂರ್ಣ ತಪ್ಪಿಸಿಕೊಂಡರೆಂದು ಹೇಳುವಂತಿಲ್ಲ. ದ್ವೇಷದ ಗೆಲವು ಈ ಬಗೆಯದು. ದ್ವೇಷವನ್ನು ದ್ವೇಷದಿಂದಲೇ ಗೆಲ್ಲುತ್ತೇವೆನ್ನುವುದು ಸುಳ್ಳು ಅದು ಸಾಧ್ಯವಿಲ್ಲದ್ದು. ಸಾಧ್ಯವಾದರೂ ಫಲಿತಾಂಶ ಸುಖವಿಲ್ಲದ್ದು.

ಆದರೆ, ಪ್ರೀತಿಯ ಗೆಲವೇ ಬೇರೆ. ಅದು ಉಭಯತ್ರರಿಗೂ ಗೆಲವನ್ನು, ಸಂತಸವನ್ನು ತಂದುಕೊಡುವಂಥದು. ದ್ವೇಷಿಸುವುದು ಪ್ರೀತಿಸುವುದು, ಮಾನವನ ಸ್ವಭಾವ. ಅದೊಂದು ಲಕ್ಷಣವೂ ಹೌದು. ಸನ್ನಿವೇಶ, ಸಂದರ್ಭಗಳು ಇದಕ್ಕೆ ಕಾರಣವಾಗುತ್ತವೆ. ಆದರೆ, ದ್ವೇಷವನ್ನೇ ಸಾಧಿಸಿಕೊಂಡು ಹೋಗುವವರು ಕೆಲವರು. ದ್ವೇಷವನ್ನು ಪ್ರೀತಿಯಿಂದ ಗೆದ್ದುಕೊಳ್ಳುವವರು ಕೆಲವರು ಪ್ರೀತಿಯಿಂದಲೇ ಎಲ್ಲವನ್ನೂ ಸಾಧಿಸಿಕೊಂಡು ಹೋಗುವವರು ಮತ್ತೆ ಕೆಲವರು.

ಈ ಮೂರುವರ್ಗದ ಅಥವಾ ಮೂರು ಸ್ವಭಾವದ ಜನರಲ್ಲಿ ಮೊದಲನೆಯ ವರ್ಗದವರು ಮೃಗಜಾತಿಗೆ ಸೇರಿದವರು, ಎರಡನೆಯ ವರ್ಗದವರು ಮಾನವರಲ್ಲಿಯೇ ಜಾಣವರ್ಗಕ್ಕೆ ಸೇರಿದವರು, ಮತ್ತು ಮೂರನೆಯ ವರ್ಗದವರು ಮಹಾಮಾನವರೆನಿಸಿಕೊಳ್ಳುತ್ತಾರೆ. ಈ ಮೂರು ವರ್ಗಗಳಲ್ಲಿ, ಮಹಾಮಾನವರೆನಿಸಿಕೊಳ್ಳದಿದ್ದರೂ ಚಿಂತೆಯಿಲ್ಲ, ಮೃಗಜಾತಿಗೆ ಸೇರದೆ ಜಾಣವರ್ಗಕ್ಕೆ ಸೇರಿದವರಾಗಿ ಉಳಿಯುವುದು ಕ್ಷೇಮ.

ಕೋಪ, ದ್ವೇಷದ ಬೀಜರೂಪ. ಯಾರು ಬಹುಬೇಗ ಪ್ರತಿಯೊಂದಕ್ಕೂ ಕೋಪಮಾಡಿಕೊಳ್ಳುತ್ತಾರೋ, ಅವರು ಪ್ರೀತಿಸಲಾರರು. ಕೋಪ ಮೂರ್ಖತನದ ಲಕ್ಷಣ ಎಂದು ಕೆಲವರು ಭಾವಿಸುವುದೂ ಉಂಟು. ವಿವೇಕಿಯಾದವನು ತಾಳ್ಮೆಯಿಂದ, ಸಂಯಮದಿಂದ ವರ್ತಿಸುತ್ತಾನೆ. ವಿಚಾರ ಮಾಡುತ್ತಾನೆ. ತಾಳ್ಮೆಯನ್ನು ಕಳೆದುಕೊಂಡವನು ಯಾವ ವಿಚಾರವನ್ನೂ ಮಾಡಲಾರ. ಕೋಪ ಬಂದಾಗ ಮೂಗನ್ನು ಕುಯ್ದುಕೊಳ್ಳಬಹುದು, ಬೇರೆಯವರ ಪ್ರಾಣಕ್ಕೆ ನೋವನ್ನು ಉಂಟುಮಾಡಬಹುದು ಅಥವಾ ತನ್ನ ಪ್ರಾಣವನ್ನೇ ಕಳೆದುಕೊಳ್ಳಬಹುದು. ಆದರೆ, ಅವಾವುದೂ ಕೋಪ ಇಳಿದನಂತರ ಹಿಂತಿರುಗಿ ಬರುವುದಿಲ್ಲ. ಅದಕ್ಕೆ ಪ್ರತಿಯಾಗಿ ಅದು ದ್ವೇಷಕ್ಕೆ ಕಾರಣವಾಗುತ್ತದೆ. ಒಂದು ಸಣ್ಣ ಕಾರಣದಿಂದ ಚಿಕ್ಕದಾಗಿ ಕಾಣಿಸಿಕೊಂಡ ದ್ವೇಷ ಹಲವಾರು ತಲೆಮಾರುಗಳವರೆಗೆ ಉಳಿದು ಬೆಳೆದು ಬಂದ ನಿದರ್ಶನಗಳಿವೆ. ಮಾಡಿದ್ದ ಜಮೀನಿಗಾಗಿ ಮನೆ ಮಠಗಳನ್ನು ಕಳೆದುಕೊಂಡವರಿದ್ದಾರೆ. ಕೋಳಿಯ ಜಗಳಕ್ಕಾಗಿ ಪ್ರಾಣ ಕಳೆದುಕೊಂಡವರಿದ್ದಾರೆ. ಒಂದು ಮಾತಿನ ವ್ಯತ್ಯಾಸದ ಕಾರಣದಿಂದಾಗಿ ನೂರಾರು ವರ್ಷಗಳವರೆಗೆ ದ್ವೇಷ ಸಾಧಿಸಿದವರಿದ್ದಾರೆ.

ದ್ವೇಷ ಇಂಥದೇ ಕಾರಣಕ್ಕೆ ಉಂಟಾಗುತ್ತದೆ ಅಥವಾ ಇಂಥದೇ ಸ್ವರೂಪವನ್ನು ಪಡೆದುಕೊಳ್ಳುತ್ತದೆ ಎಂದು ಹೇಳಬರುವುದಿಲ್ಲ. ಒಟ್ಟಿನಲ್ಲಿ ದ್ವೇಷ ಒಳ್ಳೆಯದಲ್ಲ. ದ್ವೇಷಿಸುವುದು ನಿಜವಾದ ಮಾನವನ ಒಳ್ಳೆಯ ಲಕ್ಷಣವಲ್ಲ. ದ್ವೇಷದಿಂದ ಯಾವ ಇಬ್ಬರು ವ್ಯಕ್ತಿಗಳ ಸಂಬಂಧ ಚೆನ್ನಾಗಿ ಉಳಿದಿಲ್ಲ. ಯಾವ ಎರಡು ಮನೆತನಗಳ ಸಂಬಂಧವೂ ಚೆನ್ನಾಗಿ ಉಳಿದಿಲ್ಲ. ಯಾವ ಎರಡು ಊರುಗಳ, ರಾಷ್ಟ್ರಗಳ, ಸಂಬಂಧ ಚೆನ್ನಾಗಿ ಉಳಿದಿಲ್ಲ.

ದ್ವೇಷ ಪರಸ್ಪರ ಹಾನಿಯನ್ನುಂಟುಮಾಡುವುದಷ್ಟೇ ಅಲ್ಲ, ಪ್ರಗತಿಗೂ ಅಡ್ಡಿಯನ್ನುಂಟುಮಾಡುತ್ತದೆ. ದ್ವೇಷದ ಜ್ವಾಲೆಗೆ ತುತ್ತಾದ ಯಾರೂ ಸುಖದ ಸವಿಯನ್ನು ಕಂಡಿಲ್ಲ, ಉಂಡಿಲ್ಲ. ಬದಲಾಗಿ ಮಾನಸಿಕ ನೆಮ್ಮದಿಯನ್ನು ಹಾಳುಮಾಡಿಕೊಂಡಿದ್ದಾರೆ. ಇಬ್ಬರು ವ್ಯಕ್ತಿಗಳ ನಡುವೆ ಉಂಟಾದ ದ್ವೇಷ ಇಡೀ ಊರಿಗೆ ಹಬ್ಬಬಹುದು. ನೆಮ್ಮದಿಯನ್ನು ಕೆಡಿಸಬಹುದು. ಎರಡು ರಾಷ್ಟ್ರಗಳ ನಡುವೆ ಬೆಳೆದ ದ್ವೇಷ ಇಡೀ ವಿಶ್ವವನ್ನೇ ತಲ್ಲಣಗೊಳಿಸಬಹುದು.

ಮನುಷ್ಯ ಮನುಷ್ಯನನ್ನು ಪ್ರೀತಿಸುವುದು ಸಹಜ ಧರ್ಮ, ಮಾನವಧರ್ಮ. ಪ್ರಕೃತಿ ಧರ್ಮ. ದ್ವೇಷ ಆಗಾಗ ಅಲ್ಲಲ್ಲಿ ತಲೆ ಹಾಕುವುದು ಒಂದು ಆಕಸ್ಮಿಕ. ಆಕಸ್ಮಿಕವಾದುದನ್ನೂ ಸದಾ ಬೆಳೆಯಗೊಡುವುದು ಅಥವಾ ಉಳಿಯಗೊಡುವುದು ಪ್ರಕೃತಿಧರ್ಮವಲ್ಲ. ಮಳೆ ಬೀಳುವುದು ಪ್ರಕೃತಿಧರ್ಮ. ಗುಡುಗು, ಸಿಡಿಲು ಮಧ್ಯೆ ಮಧ್ಯೆ ಸಂಭವಿಸುವುದೂ ಪ್ರಕೃತಿಧರ್ಮ. ಆದರೆ ಗುಡುಗು–ಸಿಡಿಲಿನಿಂದ ಸಾವು–ನೋವು ಸಂಭವಿಸುವುದು ಒಂದು ಆಕಸ್ಮಿಕ. ಅದೇ ಪ್ರಕೃತಿ ನಿಯಮವಾಗಲಾರದು. ದ್ವೇಷವೂ ಹಾಗೇ. ಬಾಳಿನಲ್ಲಿ ಅದೊಂದು ಆಕಸ್ಮಿಕ. ಆದರೆ, ಆ ಆಕಸ್ಮಿಕವನ್ನು ಬೆಳೆಯಗೊಡಕೂಡದು. ಪ್ರೀತಿಯೆಂಬ ಅಂಕುಶದಿಂದ ಸದಾ ತಿವಿಯುತ್ತಿರಬೇಕು.

2. ಶಿಕ್ಷಣ

ಉಪನಿಷತ್ತಿನ ಕಥೆಯೊಂದು ಹೀಗಿದೆ: ಬ್ರಹ್ಮಚಾರಿಯಾಗಿರಬೇಕೆಂದು ಸತ್ಯಕಾಮ ತನ್ನ ಗುರುವಿನ ಬಳಿ ಬರುತ್ತಾನೆ. ಗುರು ಅವನನ್ನು ವಿಶ್ವಾಸದಿಂದ ಬರಮಾಡಿಕೊಳ್ಳುತ್ತಾನೆ. ನಂತರ ಸಾಕುವುದಕ್ಕಾಗಿ ಕೆಲವು ಹಸುಗಳನ್ನು ಅವನಿಗೆ ಕೊಟ್ಟು ಕಾಡಿಗೆ ಕಳುಹಿಸುತ್ತಾನೆ. ಸ್ವಲ್ಪ ಕಾಲದ ನಂತರ ಆ ದನಗಳ ಸಂಖ್ಯೆ ಎರಡರಷ್ಟು ಬೆಳೆಯುತ್ತದೆ. ಸತ್ಯಕಾಮನಿಗೆ ಆಶ್ಚರ್ಯವೆನಿಸುತ್ತದೆ. ತನ್ನ ಗುರುವನ್ನು ಕಾಣಬೇಕೆಂದು ಹಿಂತಿರುಗುತ್ತಿದ್ದಾಗ ಎತ್ತು, ಅಗ್ನಿ ಮತ್ತು ಇನ್ನು ಕೆಲವು ಪ್ರಾಣಿಗಳು ಎದುರಾಗಿ ಅವನಿಗೆ ಪರಬ್ರಹ್ಮನ ವಿಷಯವನ್ನು ತಿಳಿಸುತ್ತವೆ. ಸತ್ಯಕಾಮನಿಗೆ ಎಲ್ಲವೂ ಅರಿವಾಗುತ್ತದೆ. ಬ್ರಹ್ಮಜ್ಞಾನವನ್ನು ಪಡೆದವನಂತೆ ಪ್ರಜ್ವಲಿಸುತ್ತಾನೆ. ಗುರುವಿಗೆ ಶಿಷ್ಯನನ್ನು ಕಂಡು ಪರಮಾನಂದವಾಗುತ್ತದೆ.

ಈ ಕಥೆಯಿಂದ ನಾವು ಕಲಿಯುವ ಪಾಠ: ನಾಲ್ಕು ಗೋಡೆಗಳ ಮಧ್ಯೆ ಗ್ರಂಥಾಧ್ಯಯನದಿಂದ, ವಿಷಯ ಸಂಗ್ರಹಣೆಯಿಂದ ಕಲಿಯುವುದು ನಿಜವಾದ ಶಿಕ್ಷಣ ಅಲ್ಲ. ನಿಸರ್ಗವೇ ದೊಡ್ಡ ಗುರು. ದೊಡ್ಡ ಪಾಠಶಾಲೆ. ನಿಸರ್ಗದ ನಿಕಟ ಸಂಪರ್ಕದಿಂದ ಜ್ಞಾನವನ್ನು ಸಂಪಾದಿಸಬಹುದು. ಕಲಿತವಿದ್ಯೆ ಪ್ರಾಯೋಗಿಕವಾಗಿ ಬಳಕೆಯಾಗುವಂಥವಾಗಬೇಕು. ಅದು ಮನುಷ್ಯನನ್ನು ಸ್ವಾವಲಂಬಿಯನ್ನಾಗಿ ಮಾಡುವಂತಿರಬೇಕು. ಸ್ವತಂತ್ರವಾಗಿ ಧೈರ್ಯದಿಂದ ಜೀವಿಸುವುದನ್ನು ಕಲಿಸುವಂತಿರಬೇಕು ಅಷ್ಟೇ ಅಲ್ಲ, ಚಾರಿತ್ರಿಕ ಶುದ್ಧಿ ಹಾಗೂ ಪರೋಪಕಾರ ಬುದ್ಧಿಯನ್ನು ಕಲಿಸುವಂತಿರಬೇಕು. ಅವನನ್ನು ಸಾಹಸಿಯನ್ನಾಗಿಸುವಂತಿರಬೇಕು.

ಗ್ರಂಥಾಧ್ಯಯನ, ವಿಷಯ ಸಂಗ್ರಹಣೆ ಯಾಂತ್ರಿಕ ರೂಪದ್ದು. ಅವು ವ್ಯಕ್ತಿಯನ್ನು ಬೆಳೆಸಲಾರವು. ನಿಜವಾದ ವಿದ್ಯಾರ್ಥಿ ಹೊರಗಿನಿಂದ ಕಲಿಯುವುದಕ್ಕಿಂತ ತನ್ನಲ್ಲಿರುವುದನ್ನೇ ಬೆಳೆಸಿಕೊಳ್ಳುವುದು, ಬೆಳಗಿಸುವುದು ಮುಖ್ಯ. ಇದಕ್ಕೆ ಏಕಾಗ್ರತೆ ಬೇಕಾಗುತ್ತದೆ, ಚಿಂತನೆ ಬೇಕಾಗುತ್ತದೆ. ನ್ಯೂಟನ್‌ನ ಆಕರ್ಷಣ ಸಿದ್ಧಾಂತಕ್ಕೆ ಸೂಚಕ ಅಥವಾ ಪ್ರೇರಕಶಕ್ತಿ ಪ್ರಕೃತಿಯೇ. ಸೇಬು ಕೆಳಗೆ ಬಿದ್ದದ್ದು ಒಂದು ಸೂಚನೆಯಾಗಿ ಆ ಸಿದ್ಧಾಂತಕ್ಕೆ ಕಾರಣವಾಯಿತು. ಆದರೆ ಆ ಸಿದ್ಧಾಂತದ ಸಾರ ಅವನ ಮನಸ್ಸಿನಲ್ಲಿಯೇ ಗುಪ್ತವಾಗಿ ಅಡಗಿದ್ದಂತಹುದು. ಕಾಲ ಪಕ್ವವಾದಾಗ ಅದು ಪ್ರಕಟಗೊಂಡಿತು ಅಷ್ಟೇ.

ಮಾನವನಲ್ಲಿ ಜ್ಞಾನ ಅಂತರ್ಗತವಾಗಿ ಬಂದದ್ದಾಗಿದೆ. ಅದಕ್ಕೆ ಪ್ರಚೋದನೆ ಹಲವು ರೂಪದಲ್ಲಿ ಹೊರಗಿನಿಂದ ದೊರೆಯುತ್ತದೆ ಅಷ್ಟೆ. ಆ ರೀತಿಯ ಶಿಕ್ಷಣವನ್ನು ನಾವು ಪಡೆಯಬೇಕಾಗಿದೆ, ನೀಡಬೇಕಾಗಿದೆ. ಜ್ಞಾನಾರ್ಜನೆ ಕೇವಲ ಬದುಕಿಗೆ ದಾರಿ ಮಾಡಿಕೊಟ್ಟರಷ್ಟೇ ಸಾಲದು. ಅದು ಶೀಲಾರ್ಜನೆಗೂ ನೆರವಾಗಬೇಕು. ಶೀಲವನ್ನು ಕಲಿಸದ ಶಿಕ್ಷಣ ನಿಷ್ಪ್ರಯೋಜಕ. ನಮ್ಮಲ್ಲಿರುವ ಶೀಲಗುಣವನ್ನು ಅದು ಬೆಳೆಸಬೇಕು. ಮಾನವೀಯ ಗುಣವನ್ನು ಕಲಿಸದ, ಬೆಳೆಸದ ಶಿಕ್ಷಣ ಉಪಯೋಗವಿಲ್ಲದ್ದು. ಹಲವಾರು ಉಚ್ಚ ಶಿಕ್ಷಣ ಪಡೆದ ವ್ಯಕ್ತಿಗಳನ್ನು ನೋಡಿದಾಗ ನಮಗೆ ಆಶ್ಚರ್ಯವಾಗುತ್ತದೆ. ಅವರು ಆಯಾ ಅಧಿಕಾರಕ್ಕೆ ಅಂಟಿ ಬಂದವರಂತೆ ಬೇರೆಲ್ಲವನ್ನು ಮರೆತುಬಿಟ್ಟಿರುತ್ತಾರೆ. ಅದೊಂದೇ ಶಾಶ್ವತವೆಂದು ನಂಬಿ ಬೇರೆಲ್ಲವನ್ನು ದೂರ ಮಾಡಿಬಿಟ್ಟಿರುತ್ತಾರೆ. ರೋಗಿ ಸಾಯುವ ಸ್ಥಿತಿಯಲ್ಲಿದ್ದರೂ ಹಣಬಿಚ್ಚದ ಹೊರತು ಸಿರಿಂಜ್ ಮುಟ್ಟದ ವೈದ್ಯರಿದ್ದಾರೆ. ಊರೇ ಕೊಳ್ಳೆಹೋಗುತ್ತಿದ್ದರೂ ಬೇರೆ ಯಾವುದೋ ಲೋಕದಲ್ಲಿ ಆಸಕ್ತರಾದ ಐ.ಎ.ಎಸ್. ಅಧಿಕಾರಿಗಳಿದ್ದಾರೆ. ಇವರೆಲ್ಲರಿಗೂ ತಮ್ಮ ಉಚ್ಚಶಿಕ್ಷಣದ ಬಗೆಗೆ ಉಚ್ಚ ಅಧಿಕಾರದ ಬಗೆಗೆ ಹೆಮ್ಮೆಯೇ ಹೊರತು, ತಾವು ಆ ಶಿಕ್ಷಣದಲ್ಲಿ ಕಲಿತದ್ದೇನು ಎಂಬುದರ ಬಗೆಗಲ್ಲ. ಅಧಿಕಾರ ಇರುವುದು ಮೆರೆಯುವುದಕ್ಕೆಂದೇ ಕೆಲವರು ಭಾವಿಸುತ್ತಾರೆ. ಆದರಂತೆಯೇ

ವರ್ತಿಸುತ್ತಾರೆ. ಶಿಕ್ಷಣ ಅವರ ಮೇಲೆ ಯಾವುದೇ ಪ್ರಭಾವವನ್ನು ಬೀರಿರುವುದಿಲ್ಲ. ಏಕೆಂದರೆ ಅವರು ಪುಸ್ತಕವನ್ನು ಬಿಟ್ಟು ಬೇರೇನನ್ನೂ ಗಮನಿಸಿರುವುದಿಲ್ಲ. ಯಾಂತ್ರಿಕ ಬಗೆಯ ಶಿಕ್ಷಣ ಮನುಷ್ಯನನ್ನು ಒಂದು ಯಂತ್ರದಂತಾಗಿಸಬಲ್ಲುದೇ ಹೊರತು, ಹಲವಾರು ಬಗೆಯ ಭಾವನೆಗಳಿಗೆ ಮಿಡಿಯುವ ಮಾನವನನ್ನಾಗಿಸಲಾರದು.

ನಿಜವಾದ ಶಿಕ್ಷಣ ಮಾನವನ ಮನಸ್ಸನ್ನು ವಿಕಾಸಗೊಳಿಸುವಂತಿರಬೇಕು. ಮಾನವೀಯ ಗುಣಗಳನ್ನು ಹೆಚ್ಚಿಸಿ, ನಿಜವಾದ ಮಾನವತ್ವಕ್ಕೆ ಏರಿಸುವಂತಿರಬೇಕು. ಇಲ್ಲವಾದರೆ, ಸ್ವಾಮಿ ವಿವೇಕಾನಂದರು ಹೇಳುವಂತೆ; “ವಿಷಯ ಸಂಗ್ರಹವೇ ವಿದ್ಯಾಭ್ಯಾಸವಾದರೆ ಪುಸ್ತಕ ಭಂಡಾರಗಳೇ ಶ್ರೇಷ್ಠ ಜ್ಞಾನಿಗಳಾಗುತ್ತಿದ್ದುವು, ವಿಶ್ವಕೋಶಗಳೇ ಋಷಿಗಳಾಗುತ್ತಿದ್ದುವು.”

ಅಕ್ಷರ ಕಲಿತವರೆಲ್ಲರೂ ವಿದ್ಯಾವಂತರಲ್ಲ. ಅವರು ಅಕ್ಷರಸ್ಥರು ಅಷ್ಟೇ. ಓದು ಬಲ್ಲವರು ಆದರೆ, ಕಲಿತ ವಿದ್ಯೆಯನ್ನು ಸಫಲಗೊಳಿಸಿಕೊಳ್ಳುವುದು ನಮ್ಮ ಕರ್ತವ್ಯ. ಇಲ್ಲಿ ಕರ್ತವ್ಯ ಲೋಪವಾದರೆ ಕಲಿತವಿದ್ಯೆ ಕೈಬಿಟ್ಟಂತೆ. ಶಿಕ್ಷಣ ಮಾನವನನ್ನು ದೇವತ್ವಕ್ಕೇರಿಸುವಂತಾಗಬೇಕು. ದ್ವೇಷಾಸೂಯೆಗಳಿಂದ ದೂರವಾಗುವಂತಿರಬೇಕು. ಆಗಲೇ ಅದರ ಪ್ರಯೋಜನ. ಶಿಕ್ಷಣವನ್ನು ಪಡೆದವರಿಗೂ ಹಾಗೂ ಅದರನ್ನು ಅವಲಂಬಿಸಿದವರಿಗೂ ಸರಿಯಾದ ರೀತಿಯಲ್ಲಿ ಸಹಾಯವಾಗಲೂ ಸಾಧ್ಯ. ಗಿಣಿ ಪಾಠ ಯಾರಿಗೂ ಪ್ರಯೋಜನವನ್ನುಂಟುಮಾಡುವುದಿಲ್ಲ. ಕಲಿತದ್ದು ಸಫಲವಾಗಿ ಕಾರ್ಯಗತವಾಗಬೇಕು. ಆಗಲೇ ಶಿಕ್ಷಣದ ನಿಜವಾದ ಗುರಿಯು ಸಾಧನೆ ಆದಂತಾಗುವುದು.

3. ವಿಚಾರ ಶಕ್ತಿ

ನಂಬಿಕೆ ಮನುಷ್ಯನನ್ನು ಯಾವುದೇ ವ್ಯವಹಾರದಲ್ಲಿ ನಿರಾತಂಕವಾಗಿ ಪಾಲ್ಗೊಳ್ಳುವಂತೆ ಮಾಡುತ್ತದೆ. ಬಹುವಾಗಿ ಅವನಿಗೆ ಗೆಲವನ್ನು ತಂದುಕೊಡುತ್ತದೆ. ಮನುಷ್ಯನಲ್ಲಿ ಶ್ರದ್ಧೆ, ಉತ್ಸಾಹ, ಆಸಕ್ತಿಗಳು ಉಂಟಾಗುವಂತೆಯೂ ಅದು ಮಾಡುತ್ತದೆ. ಆದರೆ, ಬದುಕಿನಲ್ಲಿ ನಂಬಿಕೆಯನ್ನೇ ಕಳೆದುಕೊಂಡ ವ್ಯಕ್ತಿ ಯಾವ ದನವನ್ನೂ ಸೇರಲಾರ. ಯಾವ ಕಾರ್ಯದಲ್ಲೂ ಭಾಗವಹಿಸಲಾರ. ಹಾಗೆಯೇ ಮೂಢನಂಬಿಕೆಗೆ ತುತ್ತಾದ ವ್ಯಕ್ತಿಯೂ ವಿಚಾರವಂತನಾಗಲಾರ. ವಿಚಾರವಂತಿಕೆ ಮೂಡುವುದು ಬಾಳಿನ ಆಳವಾದ ಅನುಭವದಿಂದ. ಬಾಳಿನ ನೇರ ಅನುಭವವಿಲ್ಲದೆಯೇ ಯಾರೋ ಹೇಳಿದ್ದನ್ನು ಅದು ತಪ್ಪಾಗಿದ್ದರೂ ಕುರುಡು ಕುರುಡಾಗಿ ಅನುಸರಿಸಿದರೆ ಅದು ಕೆಟ್ಟ ಪರಿಣಾಮವನ್ನು ಅವರಿಗೂ, ಅವರ ಮುಂದಿನವರಿಗೂ ಉಂಟುಮಾಡುತ್ತದೆ.

ಜನಪದರನ್ನು ನಾವು ಸಾಮಾನ್ಯರು ಎಂದು ಕಡೆಗಣಿಸುವಂತಿಲ್ಲ. ಅವರು ಹಾಡಿದ್ದೆಲ್ಲವೂ, ಹೇಳಿದ್ದೆಲ್ಲವೂ, ಕಟ್ಟು ಕಥೆ, ಜೋಳನ್ಮ್ಯನ ಪುರಾಣ ಎಂದು ಕೈಬಿಡುವಂತಿಲ್ಲ. ಜೀವನದ ಬಗ್ಗೆ ಅವರಿಗಿರುವ ಕಾಳಜಿ ಬಹಳವಾದದ್ದು. ನೈಜ ಬದುಕನ್ನು ಕುರಿತು ಅವರು ತರ್ಕಿಸಿದ್ದಾರೆ, ವಿಚಾರ ಮಾಡಿದ್ದಾರೆ, ಅದಕ್ಕೆ ದಾರಿ ತೋರಿದ್ದಾರೆ. ‘ಅಪ್ಪ ಹಾಕಿದ ಆಲದ ಮರ’ ಎಂದು ನೇತುಹಾಕಿಕೊಂಡವನು ಅವನಲ್ಲ. ‘ಅಪ್ಪ ಹಾಕಿದ ಆಲದ ಮರ ಎಂದು ನೇಣು ಹಾಕಿಕೊಳ್ಳಲಾಗುತ್ತದೆಯೇ?’ ಎಂದು ಪ್ರಶ್ನಿಸಿದ್ದಾರೆ. ಜನಪದರ ಬದುಕೇ ದೈವದ, ಧರ್ಮದ ಹಾಗೂ ಭಕ್ತಿಯ ಕಟ್ಟಿನಲ್ಲಿ ಬೆಳೆದುಬಂದದ್ದಾದರೂ ಅದರಲ್ಲಿಯೂ ಒಳ್ಳೆಯದು, ಕೆಟ್ಟದ್ದರ ವಿವೇಚನೆ ನಡೆಸಿದ್ದಾರೆ. ‘ಆಪತ್ಕಾಲದಲ್ಲಿ ಆದವನೇ ನೆಂಟ’ ಎಂಬ ತೀರ್ಪು ಅವರದ್ದು. ನಂಬಿಕೊಂಡಿದ್ದ ಸ್ವಂತ ನೆಂಟ ಕೈಕೊಟ್ಟಾಗ, ಅವನು ಪರಮ ಶತ್ರುವಿಗೂ ಕಡೆಯಾಗುತ್ತಾನೆ. ದೇವರ ವಿಚಾರಕ್ಕೂ ಅವರು ಈ ಮಾತನ್ನು ಹೇಳದೆ ಬಿಟ್ಟವರಲ್ಲ: ‘ಕೊಲ್ಲುವ ದೈವಕ್ಕಿಂತಲೂ ಕಾಯುವ ದೆವ್ವವೇ ಮೇಲು’

ಎಂದಿದ್ದಾರೆ. ದೇವರು ಎಂದಾಕ್ಷಣ ಅಥವಾ ನಂಬಿಕೆಯ ಫಲವಾಗಿ ನಮ್ಮಲ್ಲಿ ಮೂಡಿದ ಆ ಭಾವನೆಯಿಂದ ಕೆಟ್ಟದ್ದನ್ನು ಒಳ್ಳೆಯದೆಂದು ಸ್ವೀಕರಿಸಲು ಆಗುವುದಿಲ್ಲ. ಅದು ಒಳ್ಳೆಯದೂ ಅಲ್ಲ. ದೇವರಾದರೇನು? ದೆವ್ವವಾದರೇನು? ನೆಂಟನಾದರೇನು? ಭಂಟನಾದರೇನು? ಯಾವನು ತಲೆ ಕಾಯುತ್ತಾನೋ ಅವನೇ ನೆಂಟ, ದೈವ.

ಹೀಗೆ ಜನಪದರ ವಿಚಾರಶಕ್ತಿ ಅತ್ಯಂತ ಚುರುಕಾದದ್ದು. ಅವರು ಹೇಳಿದ್ದೆಲ್ಲವೂ ಅಜ್ಜಿ ಪುರಾಣವಲ್ಲ. ಬದುಕಿಗೆ ದಾರಿ ತೋರುವ, ಬುದ್ಧಿಗೆ ಚುರುಕು ಮುಟ್ಟಿಸುವ ಕಾರ್ಯವನ್ನು ಮಾಡಿದ್ದಾರೆ. 'ಚರ್ಮ ತೊಳೆದರೆ ಕರ್ಮ ಹೊಗ್ತದ' 'ಚಳಿಗಿಲ್ಲದ ಕಂಬಳಿ ಎಲ್ಲಿದ್ರೇನು? ಯಾಳ್ಯಕ್ಕಿಲ್ಲದ ನೆರವು ಎಷ್ಟಿದ್ರೇನು?' ಎಂಬ ಪ್ರಶ್ನೆಗಳನ್ನು ಬದುಕಿನುದ್ದಕ್ಕೂ ಹಾಕಿಕೊಳ್ಳುವುದರ ಮೂಲಕ, ಹಸನಾದ ಬದುಕಿಗೆ ದಾರಿ ಮಾಡಿಕೊಂಡಿದ್ದಾರೆ.

ವಿಚಾರವಂತಿಕೆ ಅಥವಾ ಬುದ್ಧಿವಂತಿಕೆ ಯಾರೊಬ್ಬರಿಗೂ ಮೀಸಲಾದದ್ದಲ್ಲ. ಯಾರೊಬ್ಬರ ಗುತ್ತಿಗೆಯೂ ಅದಲ್ಲ. ಎಲ್ಲಿ ಬಾಳಿನ ಅನುಭವ ದಟ್ಟವಾಗಿ ಇರುತ್ತದೋ, ವಿಷಯಗಳನ್ನು ವಿಶ್ಲೇಷಿಸಿ ನೋಡುವ ಪ್ರತಿಭೆ ಇರುತ್ತದೋ ವಿಚಾರಗಳನ್ನು ಅಳೆದು ನೋಡುವ ಜಾಣ್ಮೆ ಇರುತ್ತದೋ ಅಲ್ಲೆಲ್ಲಾ ಇದನ್ನು ಕಾಣಬಹುದು.

'ಇರುಳು ಕಂಡ ಬಾವಿಗೆ ಹಗಲು ಬೀಳುವವರನ್ನು ಯಾರೂ ರಕ್ಷಿಸಲಾರರು. ಚಿನ್ನದ ಸೂಜಿ ಎಂಬ ಅಭಿಮಾನದಿಂದ, ವಾತ್ಸಲ್ಯದಿಂದ ತಮ್ಮ ಕಣ್ಣನ್ನು ಚುಚ್ಚಿಕೊಳ್ಳುವಂತಹವರನ್ನು ಯಾರೂ ಪಾರು ಮಾಡಲಾರರು'. ಅದರ ಔಚಿತ್ಯವನ್ನು ಕುರಿತು ಚರ್ಚಿಸಬೇಕಾಗುತ್ತದೆ. ಮಹತ್ವವನ್ನು ಕುರಿತು ಮನನ ಮಾಡಬೇಕಾಗುತ್ತದೆ. ನಂತರವೇ ಆ ಬಗೆಗೆ ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ.

'ಮಾನವ ಜನ್ಮ ಬಹು ದೊಡ್ಡದು' ಎಂದು ದಾಸರು ಹಾಡಿದ್ದಾರೆ. ಅದನ್ನು 'ಹಾಳು ಮಾಡಿಕೊಳ್ಳಬೇಡಿರಿ' ಎಂದೂ ಎಚ್ಚರಿಸಿದ್ದಾರೆ. ಎಷ್ಟೋ ಜನ್ಮಗಳ ನಂತರ ಈ ಜನ್ಮ ಎಂದೂ ಭಾವಿಸಿದ್ದಾರೆ. ಅದರ ಸದುಪಯೋಗವನ್ನು ಪ್ರತಿಯೊಬ್ಬರೂ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಮುಖ್ಯವಾಗಿ ಬೇಕಾದದ್ದು ಬಾಳಿನಲ್ಲಿ ಶ್ರದ್ಧೆ, ಆಸಕ್ತಿ, ನಂಬಿಕೆ. ಆದರೆ, ಅದು ಮೂಢನಂಬಿಕೆ ಆಗಬಾರದು ಅಷ್ಟೆ. ಮೂಢನಂಬಿಕೆ ವಿಚಾರಶಕ್ತಿಯನ್ನು ಕುಂಠಿತಗೊಳಿಸುತ್ತದೆ. ಪ್ರಗತಿಯನ್ನು ಸ್ಥಗಿತಗೊಳಿಸುತ್ತದೆ. ಬಾಳನ್ನು ಬರಡಾಗಿಸುತ್ತದೆ. ಯಾರೋ ತಪ್ಪುದಾರಿ ಹಿಡಿದು ಕಾಡನ್ನು ಸೇರಿದರೆ, ಎಲ್ಲರೂ ಕಾಡನ್ನೇ ಸೇರಬೇಕೆಂದು ಯಾರೂ ಹೇಳುವುದಿಲ್ಲ. ಧೀರ ದೊಡ್ಡ ವ್ಯಕ್ತಿಗಳು ತಮ್ಮದೇ ಆದ ಹೊಸದಾರಿಯನ್ನು ನಿರ್ಮಿಸಿಕೊಂಡು ನೆಮ್ಮದಿಯನ್ನು ಕಾಣುತ್ತಾರೆ. ಸಾಮಾನ್ಯ ವ್ಯಕ್ತಿಗಳು ಅದನ್ನು ಎಟುಕಿಸಿಕೊಳ್ಳಲು ಸಾಧ್ಯವಾಗದಿದ್ದರೂ ಹಳೆಯ ದಾರಿಯಲ್ಲಿಯೇ ಎಚ್ಚರಿಕೆಯಿಂದ ನಡೆದುಕೊಳ್ಳುತ್ತಾರೆ. ಸಮಾಧಾನ ಹೊಂದುತ್ತಾರೆ. ಈ ಎರಡು ಶಕ್ತಿಯೂ ಇಲ್ಲದವರು ದಡ್ಡರಾಗಿ ವರ್ತಿಸಿ ಹಾಳಾಗುತ್ತಾರೆ. ನೆಮ್ಮದಿಯನ್ನು ಕಾಣದೆ ಅಲೆದಾಡುತ್ತಾರೆ. ಇದು ಆಗಬಾರದು.

4. ಮಾನಸಿಕ ಶಕ್ತಿ

'ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ, ಇದೊಂದು
ದೊಡ್ಡ ಸತ್ಯ. ಶಕ್ತಿಯೇ ಸೌಭಾಗ್ಯ, ಅನಂತ ಜೀವನ,
ಅಮೃತ ಸ್ವರೂಪ. ದೌರ್ಬಲ್ಯವೇ ಅನವರತ ಚಿಂತೆ;
ದುಃಖ, ದೌರ್ಬಲ್ಯವೇ ಮರಣ.'

ಸ್ವಾಮಿ ವಿವೇಕಾನಂದರು ಒಂದೆಡೆ ಹೀಗೆ ಹೇಳಿದ್ದಾರೆ. 'ಮನಸಿದ್ದೆಡೆ ಮಾರ್ಗ' ಎಂಬ ಒಂದು ನಾಣ್ಣುಡಿಯೂ ಇದೆ. ಅವರೆ ಎರಡೂ ಹೇಳುವುದೂ ಒಂದನ್ನೇ. ಎಲ್ಲಕ್ಕೂ ಮನಸ್ಸೇ ಮುಖ್ಯ ಕಾರಣ. ಅದೊಂದು ಪ್ರಬಲ ಶಕ್ತಿ. ಮಾನವನ ಬದುಕಿನ ಏಳು ಬೀಳುಗಳಿಗೆ ಸಂಬಂಧಿಸಿದ್ದು. ಅದು ನಮ್ಮ ಭಾಗ್ಯದ ಬಾಗಿಲನ್ನು ತೆರೆಯಲೂ ಬಲ್ಲುದು. ಹಾಗೆಯೇ ಮುಚ್ಚಲೂ ಬಲ್ಲುದು.

ಬದುಕಿನಲ್ಲಿ ಯಶಸ್ಸನ್ನು ಪಡೆಯಲು, ಗುರಿಯನ್ನು ಸಾಧಿಸಲು ಮನಶ್ಶಕ್ತಿ ಮುಖ್ಯ. ಆತ್ಮಸ್ಥೈರ್ಯ ಮುಖ್ಯ. ಮಾನಸಿಕ ಗೆಲವು ಮುಖ್ಯ. ಇವಿಲ್ಲದೆ ಗುರಿ ಸಾಧನೆಯಾಗದು. ಸ್ವಾಮಿ ವಿವೇಕಾನಂದರು ಹೇಳುವಂತೆ "ನನ್ನ ಜೀವಕ್ಕೆ ನಾನೇ ಹೊಣೆಗಾರ. ನನ್ನ ಶುಭಕ್ಕೂ ನಾನೇ ಕಾರಣ, ಅಶುಭಕ್ಕೂ ನಾನೇ ಕಾರಣ. ನಾನೇ ಪವಿತ್ರಾತ್ಮ, ಧನ್ಯಾತ್ಮ." ಎಂಬ ವಿಶ್ವಾಸವಿರಬೇಕು.

'ಆತ್ಮನಿಂದೆ ಮಹಾಪಾಪ' ತನ್ನನ್ನು ತಾನು ಹಳಿದುಕೊಳ್ಳುವವನು ತನ್ನ ಬಗ್ಗೆಯೇ ತನಗೆ ವಿಶ್ವಾಸವಿಲ್ಲದವನು ಜೀವನದಲ್ಲಿ ಏನನ್ನೂ ಸಾಧಿಸಲಾರ. ಮೊದಲು ತನ್ನ ಶಕ್ತಿಯ ಅರಿವನ್ನು ತಾನು ಮಾಡಿಕೊಳ್ಳಬೇಕು. ಹಿಡಿದ ಕಾರ್ಯವನ್ನು ಮಾಡಿ ಮುಗಿಸುತ್ತೇನೆಂಬ ಛಲ ಅವನಲ್ಲಿರಬೇಕು. ಇಂತಹ ಶಕ್ತಿ ಹೊರಗಿನಿಂದ ಬರುವಂತಹುದಲ್ಲ. ಆತನಲ್ಲಿಯೇ ಅಂತರಂಗದಲ್ಲಿ ಮೂಡುವಂತಹುದು. ಪ್ರೇರಣೆಯನ್ನೂ ನೀಡುವಂಥಹುದು. 'ಹೇಳಿಕೊಟ್ಟ ಮಾತು, ಕಟ್ಟಿಕೊಟ್ಟ ಬುತ್ತಿ' ಬಹಳ ಕಾಲವಿರುವುದಿಲ್ಲ. ಅದರಿಂದ ಪ್ರತಿಯೊಬ್ಬನೂ ತನ್ನ ಜೀವನದ ಗುರಿಯನ್ನು ಮತ್ತು ದಾರಿಯನ್ನು ತಾನೇ ಕಂಡುಕೊಳ್ಳಬೇಕಾಗುತ್ತದೆ. ಒಂದು ಕೆಲಸಕ್ಕೆ ಕೈ ಹಾಕುವಾಗಲೇ ಯಾರು ಅಂಜುತ್ತಾರೋ, ಇದು ತನ್ನಿಂದ ಸಾಧ್ಯವೇ ಎಂದು ಅಳುಕುತ್ತಾರೋ ಅವರು ಈ ಜಗತ್ತಿನಲ್ಲಿ ಸೋಲನ್ನೇ ಕಾಣಬೇಕಾಗುತ್ತದೆ. ಅಂತಹವರಿಂದ ಅವರಿಗಷ್ಟೇ ಅಲ್ಲ. ಯಾರಿಗೂ ಏನೂ ಪ್ರಯೋಜನವಾಗಲಾರದು.

ಕೆಲವರು ದಾರವಿಲ್ಲದೆಯೇ ಬುಗುರಿಯಾಡಿಸಬಲ್ಲರು. ಮತ್ತೆ ಕೆಲವರು ದಾರವಿದ್ದು ಬುಗುರಿಯಾಡಿಸಲಾರರು. ಇದೆಲ್ಲಕ್ಕೂ ಅವರ ಮಾನಸಿಕ ಶಕ್ತಿಯೇ ಕಾರಣ. ದಾರವಿಲ್ಲದೆಯೇ ಬುಗುರಿ ಆಡಿಸುವವರು ಬೇರೆ. ಅದೊಂದು ವಿಶಿಷ್ಟ ಶಕ್ತಿ, ವಿಪರೀತ ಶಕ್ತಿ. ಹಲವೊಮ್ಮೆ ಅದು ಅನ್ಯಾಯದ ಅಂಚಿನಲ್ಲಿರುವುದೂ ಉಂಟು. ಆ ವಿಧಾನವನ್ನು ಯಾರೂ ಅನುಸರಿಸುವುದು ಬೇಡ. ಅದೊಂದು ರೀತಿಯ ತಂತ್ರ. ಮೊಂಡು ಧೈರ್ಯ. ಬದುಕುವುದಕ್ಕಾಗಿ ಹಾಕುವ ಒಂದು ವೇಷ. ಅದು ಎಂದಾದರೂ ಹೊರಬೀಳುತ್ತದೆ. ಆಗ ಆ ವ್ಯಕ್ತಿ ಬಯಲಿಗೆ ಬರಬೇಕಾಗುತ್ತದೆ. ಆದರೆ, ದಾರವಿದ್ದಾಗ ಬುಗುರಿಯಾಡಿಸುವುದಕ್ಕೆ ಅಂಜಬೇಕಾಗಿಲ್ಲ. ಅಳುಕಬೇಕಾಗಿಲ್ಲ. ಇಲ್ಲಿ ಬೇಕಾಗಿರುವುದು ತಮ್ಮನ್ನು ತಾವು ಕಂಡುಕೊಳ್ಳುವ ಶಕ್ತಿ ಅಷ್ಟೇ. ಮಾನಸಿಕ ಶಕ್ತಿಯ ಅರಿವು. ಆ ಅರಿವು ಉಂಟಾಗದ ಹೊರತು ಅವರು ಮುನ್ನುಗ್ಗಲಾರರು. ಧೈರ್ಯವಾಗಿ ಏನನ್ನೂ ಎದುರಿಸಲಾರರು. ಜೀವನದಲ್ಲಿ ಸಾಫಲ್ಯವನ್ನು ಕಾಣಲಾರರು. ಕಪಟಿಗಳು, ವಂಚಕರು ಕೊಡುವ ಕಿರುಕುಳವನ್ನು ಸಹಿಸಿಕೊಂಡು ಹೇಗೋ ಬದುಕುತ್ತಾರೆ. ಬೇರೆಯವರ ದೃಷ್ಟಿಯಲ್ಲಿ ಹೇಡಿಗಳೆನಿಸಿಕೊಂಡು ಜೀವನ ಸಾಗಿಸುತ್ತಾರೆ.

ಇವೆಲ್ಲ ದೌರ್ಬಲ್ಯದ ಕುರುಹುಗಳು. ದೌರ್ಬಲ್ಯ ಮನುಷ್ಯನನ್ನು ದುಃಖಕ್ಕೆ, ಸಂಕಟಕ್ಕೆ ಗುರಿಮಾಡುತ್ತದೆ. ಹಾಗಾಗಬಾರದು. ಅದು ಆ ವ್ಯಕ್ತಿಯನ್ನಷ್ಟೇ ಅಲ್ಲ, ಆತನನ್ನು ನಂಬಿಕೊಂಡ ಇತರರನ್ನು ತೊಂದರೆಗೀಡುಮಾಡುತ್ತದೆ. ರಾಷ್ಟ್ರಕವಿ ಕುವೆಂಪು ಅವರು ಹೇಳುವಂತೆ ನಮ್ಮ ಗುರಿ ಹಿಮಾಲಯದೆತ್ತರದ್ದಾಗಿರಬೇಕು. ಕೊನೆಗೆ ಒಂದು ಬೆಟ್ಟವನ್ನಾದರೂ ಏರಲು

ಆದರಿಂದ ಸಾಧ್ಯವಾಗುತ್ತದೆ. ನಮ್ಮ ಗುರಿ ಗುಡ್ಡವನ್ನೇರುವುದಷ್ಟೇ ಆದಾಗ ನಮ್ಮ ಮನೆಯ ಹೊಸ್ತಿಲನ್ನೂ ದಾಟಲಾರೆವು.

ಆತ್ಮಶಕ್ತಿ ಎಲ್ಲರಲ್ಲಿಯೂ ಮೂಡುವಂತಹುದಲ್ಲ, ಇರುವಂತಹುದಲ್ಲ. ಸತ್ಯದ, ಧರ್ಮದ ನೆಲೆಗಟ್ಟು ಅದಕ್ಕಿರಬೇಕಾಗುತ್ತದೆ. ತಾನು ಮಾಡುತ್ತಿರುವ ಕಾರ್ಯ ಧರ್ಮಸಮ್ಮತವಾದುದು, ನ್ಯಾಯಸಮ್ಮತವಾದುದು ಎಂಬುದು ತಿಳಿದಾಗ, ಅವನಲ್ಲಿ ಆತ್ಮಶಕ್ತಿ ಇಮ್ಮಡಿಯಾಗುತ್ತದೆ. ಧೈರ್ಯವಾಗಿ ಸಮಸ್ಯೆಗಳನ್ನು ಎದುರಿಸುತ್ತಾನೆ. ಕಳ್ಳನಿಗೆ ಕಳ್ಳತನ ಮಾಡುವಷ್ಟು ಶಕ್ತಿ ಇರುತ್ತದೆ. ಕೊಲೆಗಡುಕನಿಗೆ ಕೊಲೆಯನ್ನು ಮಾಡುವಷ್ಟು ಮಾತ್ರ ಶಕ್ತಿ ಇರುತ್ತದೆ. ಆದರೆ, ಸತ್ಯವನ್ನು ಎದುರಿಸುವ, ನ್ಯಾಯ, ಧರ್ಮವನ್ನು ಎದುರಿಸುವ ಶಕ್ತಿ ಅವರಲ್ಲಿರುವುದಿಲ್ಲ. ಕೊಲೆ ಮಾಡುವುದು ಕಳ್ಳತನ ಮಾಡುವುದು ದೌರ್ಬಲ್ಯದ ಕುರುಹುಗಳು. ಸರಿಯಾದ ಮಾರ್ಗದಲ್ಲಿ ಬದುಕನ್ನು ನಡೆಸಲಾರದವರು ಹಿಡಿದ ಒಂದು ಅಡ್ಡದಾರಿ.

ಆತ್ಮಶಕ್ತಿ ಬದುಕನ್ನು ಧೈರ್ಯವಾಗಿ ಎದುರಿಸುವ, ಸಮಸ್ಯೆಯನ್ನು ಬಿಡಿಸಿ, ಎಚ್ಚರವನ್ನುಂಟುಮಾಡುತ್ತದೆ. ಹಠ ತೊಟ್ಟು ತಿನ್ನಲು ಕುಳಿತ ಒಬ್ಬ ವ್ಯಕ್ತಿ ಅದನ್ನು ಹೇಗಾದರೂ ಮಾಡಿ ಮುಗಿಸಿಯೇ ಮುಗಿಸುತ್ತಾನೆ. ಪರೀಕ್ಷೆಗೆ ಕುಳಿತ ಒಬ್ಬ ವಿದ್ಯಾರ್ಥಿ ಹಾಗೆಯೇ ಹಠ ತೊಟ್ಟು ಕುಳಿತಾಗ ಸಫಲನಾಗುವುದು ಕಷ್ಟವೇನೂ ಅಲ್ಲ. ಇದಕ್ಕಿಂತ ಚೆನ್ನಾಗಿ ಈ ಚಿತ್ರವನ್ನು ಬರೆಯಬಲ್ಲೆ ಎಂದು ಮನಸ್ಸು ಮಾಡಿ ಕುಳಿತ ಒಬ್ಬ ಕಲಾವಿದನಿಗೆ ಆ ಕೆಲಸ ಕಷ್ಟವಾಗಲಾರದು.

ಆದರೆ, ಇವೆಲ್ಲಕ್ಕೂ ಮುಖ್ಯವಾಗಿ ಬೇಕಾಗಿರುವುದು ದೃಢ ಮನಸ್ಸು. ಅಂಥ ಮನಸ್ಸೊಂದಿದ್ದರೆ ಮನುಷ್ಯನಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ದೌರ್ಬಲ್ಯವನ್ನು ಧಿಕ್ಕರಿಸಿ ಹೊರಟಾಗ ಆತ್ಮಶಕ್ತಿ ಅವನಿಗೆ ಸೌಭಾಗ್ಯವನ್ನು ತಂದುಕೊಡುತ್ತದೆ.

5. ಸುಖ

'ಆಸೆಯೇ ದುಃಖಕ್ಕೆ ಮೂಲ' ಎಂದು ಬಹಳ ಹಿಂದೆಯೇ ಭಗವಾನ್ ಬುದ್ಧದೇವ ಸಾರಿದ. ಅಂದರೆ ಆಸೆ ಇರುವವರೆಗೆ ಸುಖ ಲಭಿಸುವುದಿಲ್ಲ. ಸುಖವನ್ನು ಪಡೆಯಬೇಕಾದರೆ ಆಸೆಯನ್ನು ತೊರೆಯಬೇಕು ಎಂಬುದು ಇದರ ಅರ್ಥ. ಆದರೆ ಆಸೆ ಪಡದ ವ್ಯಕ್ತಿ ಯಾರು? ಆ ಮೂಲಕ ಸುಖದ ಕನಸನ್ನು ಕಾಣದಿರುವವರು ಯಾರು? ಎಲ್ಲರೂ ಆಶಾಗೋಪುರದ ಮೇಲೆ ತಮ್ಮ ತಮ್ಮ ಸುಖದ ಕನಸನ್ನು ಕಟ್ಟಿಕೊಂಡೇ ಇರುತ್ತಾರೆ. ಅದಕ್ಕಾಗಿಯೇ ಜೀವ ಹಿಡಿದು ಬದುಕಿರುತ್ತಾರೆ. ಕುದುರೆ ತನ್ನ ಮುಂದೆ ನೇತು ಬಿಟ್ಟ ಹುಲ್ಲನ್ನು ಹಿಡಿದು ತಿನ್ನಲು ಆಸೆಪಟ್ಟು ಓಡಿ ದಣಿಯುವಂತೆ, ಮಾನವನೂ ಆಸೆಯ ಹುಲ್ಲನ್ನು ಹಿಂಬಾಲಿಸಿ ದಣಿಯುತ್ತಾನೆ. ಆದರೆ, ಅದು ಕೈಗೆ ಎಟುಕದು. ನಮ್ಮ ಜೊತೆಯಲ್ಲಿಯೇ ಅದೂ ಮುಂದೆ ಮುಂದೆ ಓಡುತ್ತದೆ. ಸಿಕ್ಕುತ್ತದೆ ಎಂಬ ಭ್ರಾಂತಿಯಿಂದ ನಾವು ಅದರ ಹಿಂದೆ ಓಡುತ್ತೇವೆ. ಹಲವು ಜನ್ಮ ಕಳೆದರೂ ಅದು ನಮಗೆ ದೊರೆಯುವಂತಹದಲ್ಲ, ಮರುಳುಗಾಡಿನ ಮರೀಚಿಕೆಯಂತೆ.

ಲೌಕಿಕವಾದ ಭೌತವಸ್ತುಗಳಿಂದ ದೊರೆಯುವ ಸುಖಕ್ಕೆ ಕೊನೆ ಮೊದಲಿಲ್ಲ. ಅದು ಎಂದಿಗೂ ಯಾರಿಗೂ ತೃಪ್ತಿಯನ್ನು ನೀಡದು. ಸಮಾಧಾನವನ್ನು ನೀಡದು ಬಿಸಿಲುಗುದುರೆಯಂತೆ ಅದು ನಮ್ಮನ್ನು ಓಡಿಸಿ ದಣಿಯುವಂತೆ ಮಾಡುತ್ತದೆ. ಮುಂದೆ ಅದರಿಂದ ನಮಗೆ ಕಾದಿರುವುದು ನಿರಾಶೆಯೇ ಹೊರತು ಸುಖವಲ್ಲ. ಸುಖಪಡಬೇಕೆಂದು ಆಶಿಸುವುದು ಮಾನವನ ಸ್ವಭಾವ. ಅದಕ್ಕಾಗಿ ಹಂಬಲಿಸುವುದೂ ಅವನ ಸಹಜ ಗುಣ. ಆದರೆ, ಅದೊಂದೇ ಎಂದಿಗೂ ಯಾರಿಗೂ ಲಭಿಸಿಲ್ಲ. ಏಕೆಂದರೆ ಸುಖ—ದುಃಖ ಎರಡೂ ಒಂದೇ ನಾಣ್ಯದ ಎರಡು ಮುಖ

ಗಳಿದ್ದಂತೆ. ಒಂದರ ಸರದಿಯ ನಂತರ ಮತ್ತೊಂದು ಇದ್ದದ್ದೇ. ಹುಟ್ಟು–ಸಾವು ಹೇಗೆ ಪ್ರಕೃತಿ ಧರ್ಮವೋ, ಸುಖ–ದುಃಖವೂ ಹಾಗೆಯೇ ಪ್ರಕೃತಿಧರ್ಮ. ನಾವು ಸುಖ ಒಂದನ್ನೇ ಅಪೇಕ್ಷಿಸಿದರೆ, ಹುಟ್ಟು ಮಾತ್ರ ಇರಲಿ ಸಾವು ಬೇಡ ಎಂದಂತೆ. ಆದರೆ ಅದು ಪ್ರಕೃತಿಯ ತತ್ವಕ್ಕೆ ವಿರುದ್ಧವಾದುದು.

'ಈ ಪ್ರಪಂಚದಲ್ಲಿ ಯಾರೂ ನಿಜವಾಗಿ ಸುಖವಾಗಿಲ್ಲ'—ಸ್ವಾಮಿ ವಿವೇಕಾನಂದರು ಒಂದೆಡೆ ಈ ಮಾತನ್ನು ಹೇಳುತ್ತಾರೆ. ಅದು ಸಾಧ್ಯವಿಲ್ಲದ್ದು. ತಾನು ಸೌಖ್ಯವಾಗಿರಬಲ್ಲೆ ಎಂಬುದು ಮೂರ್ಖನ ಮಾತು. ಇಷ್ಟಿದ್ದರೆ ಮತ್ತಷ್ಟು ಬೇಕೆಂಬ ಆಸೆ. ಮತ್ತಷ್ಟು ದೊರೆತರೂ ಇನ್ನಷ್ಟು ಬೇಕೆಂಬ ಆಸೆ. ಆದರೂ ಅದಕ್ಕೆ ಕೊನೆ ಎಂಬುದಿಲ್ಲ. ಕೊನೆಯನ್ನು ಕಂಡರೂ ಮತ್ತೊಂದು ಚಿಂತೆ ಕಾಣುತ್ತದೆ. ಜೀರ್ಣಶಕ್ತಿ ಚೆನ್ನಾಗಿದ್ದವನಿಗೆ ತಿನ್ನಲು ಅನ್ನವಿಲ್ಲ. ಪನ್ನೀರಿನಲ್ಲಿಯೇ ಕೈತೊಳೆಯುವಂತಹ ಶ್ರೀಮಂತನಿಗೆ ಜೀರ್ಣಶಕ್ತಿ ಇಲ್ಲ. ಬಡವನಿಗೆ ಮನೆ ತುಂಬ ಮಕ್ಕಳು. ಶ್ರೀಮಂತನಾದವನಿಗೆ ಮಕ್ಕಳಿರುವುದಿಲ್ಲ. ಮಕ್ಕಳಿದ್ದರೂ ಮನೆಮುರುಕರಾಗಿಯೋ ಅಥವಾ ಮತ್ತೇನೋ ಆಗಿಯೋ ಚಿಂತೆಯ ಚಿತೆಯೊಡ್ಡಿರುತ್ತಾರೆ.

ಹೀಗಾಗಿ ಲೌಕಿಕ ವಸ್ತುಗಳಿಗೆ ಆಸೆಪಟ್ಟು ಪಡೆಯಲಾಶಿಸುವ ಸುಖ ಕ್ಷಣಿಕವಾದದ್ದು.

ಸ್ವಾರ್ಥತೆಯ ಅಳಿವಿನಿಂದ ಮಾತ್ರ ನಿಜವಾದ ಸುಖ ಲಭಿಸಬಲ್ಲುದು. ಸುಖ ಹೊರಗಿನಿಂದ ಬರುವಂಥದಲ್ಲ. ವ್ಯಕ್ತಿಯಲ್ಲಿಯೇ ಕಾಣಿಸಿಕೊಳ್ಳುವಂಥದು. ಅದಕ್ಕೆ ಒಳ್ಳೆ ಸಂಸ್ಕಾರ ಬೇಕು, ಪವಿತ್ರ ಮನಬೇಕು. ಈ ಪ್ರಪಂಚದ ಪ್ರೀತಿಯೆಲ್ಲ ಒಂದು ನಟನೆ. ಸ್ವಾರ್ಥದಿಂದ ಕೂಡಿದ್ದು. ಗಂಡ–ಹೆಂಡತಿಯನ್ನು ಬಹಳವಾಗಿ ಪ್ರೀತಿಸುತ್ತಾನೆ ನಿಜ. ಆದರೆ, ಅಲ್ಲಿ ಸ್ವಾರ್ಥವಿದೆ. ಹೆಂಡತಿ ಗಂಡನನ್ನು ಬಹಳವಾಗಿ ಪ್ರೀತಿಸುತ್ತಾಳೆ ನಿಜ. ಆದರೆ, ಅದೂ ಸ್ವಾರ್ಥರಹಿತವಾದದ್ದಲ್ಲ. ಗಂಡ ತೀರಿಕೊಂಡ ಕ್ಷಣದಿಂದ ತನ್ನ ಮುಂದಿನ ಗತಿಯೇನೆಂದು ದುಃಖಿಸುತ್ತಾಳೆ. ಸುಂದರಳಾಗಿದ್ದ ಹೆಂಡತಿ ಕುರೂಪಿಯಾದಾಗ ಅವನು ಬೇರೆ ರೀತಿಯಲ್ಲಿ ಆಲೋಚಿಸಲು ತೊಡಗುತ್ತಾನೆ. ಮನುಷ್ಯ ಇದರ ಮರ್ಮವನ್ನು ಅರಿತಾಗ ಜ್ಞಾನಿಯಾಗಬಲ್ಲ. ಸ್ವಾರ್ಥವನ್ನು ದೂರ ಮಾಡಿ ಸುಖಿಯಾಗಬಲ್ಲ. ನೆಮ್ಮದಿಯ ಬದುಕನ್ನು ಕಂಡುಕೊಳ್ಳಬಲ್ಲ.

ಪಂಚೇಂದ್ರಿಯಗಳಿಂದ ಲಭಿಸುವ ಸುಖ ನಿಜವಾದ ಸುಖವಲ್ಲ. ಅದು ಸುಖದ ದಾಹವನ್ನು ಹೆಚ್ಚಿಸುತ್ತದೆ. ಆ ಮೂಲಕ ದುಃಖದ ಪರಿಧಿಯನ್ನು ಹಿಗ್ಗಿಸುತ್ತದೆ. ನಮ್ಮನ್ನು ಹಲವು ಬಂಧನಗಳಿಗೆ ಒಳಗು ಮಾಡುತ್ತದೆ. ಬಂಧನ ಹೆಚ್ಚಿದಷ್ಟೂ ನಾವೂ ಸ್ವಾತಂತ್ರ್ಯದ ಸುಖವನ್ನು ಕಳೆದುಕೊಳ್ಳುತ್ತೇವೆ. ಕಷ್ಟ ಬರಲಿ, ಸುಖ ಬರಲಿ, ಎರಡನ್ನೂ ಸಮಾನವಾಗಿ ಎದುರಿಸುವ ಸಂಯಮ ನಮ್ಮದಾಗಬೇಕು. ಸುಖಕ್ಕೆ ಹಿಗ್ಗದ, ದುಃಖಕ್ಕೆ ಕುಗ್ಗದ ಶಕ್ತಿಯನ್ನು ನಾವು ಬೆಳೆಸಿಕೊಳ್ಳಬೇಕು. ಜ್ಞಾನ ಈ ಅರಿವನ್ನು ಉಂಟುಮಾಡುತ್ತದೆ. ಆಧ್ಯಾತ್ಮಿಕ ಶಕ್ತಿ, ಉತ್ತಮ ಚಾರಿತ್ರ್ಯ ಈ ಶಕ್ತಿಯನ್ನು ತಂದುಕೊಡುತ್ತದೆ. ಆಗ ಮಾತ್ರ ಬದುಕು ಹಸನೆನಿಸುತ್ತದೆ.

6. ವ್ಯವಹಾರ

'ಅಕ್ಕನ ಮನೆಯಿಂದ ಅವರೇಬೇಳೆ ಹೋದರೆ
ತಂಗಿ ಮನೆಯಿಂದ ತೊಗರಿಬೇಳೆ ಬರುತ್ತದೆ.'

ಇದೊಂದು ಗಾದೆ ಮಾತು. ವ್ಯವಹಾರಕ್ಕೆ ಸಂಬಂಧಿಸಿದ್ದು. ವ್ಯವಹಾರ ಯಾವಾಗಲೂ ಇಬ್ಬರ ಮಧ್ಯೆ ನಡೆಯುವಂತಹುದು. ಆ ಇಬ್ಬರು ಯಾರೇ ಆಗಿರಬಹುದು. ಅಕ್ಕ–ತಂಗಿ, ಅಣ್ಣ–ತಮ್ಮ, ತಂದೆ–ಮಗ, ತಾಯಿ–ಮಗಳು, ನೆರೆ–ಹೊರೆ ಅಥವಾ ಎರಡು ಊರುಗಳಿಗೆ

ಸಂಬಂಧಿಸಿದ್ದಾಗಿರಬಹುದು ಇಲ್ಲವೇ ಎರಡು ರಾಷ್ಟ್ರಗಳಿಗೆ ಸಂಬಂಧಿಸಿದ್ದಿರಬಹುದು. ಆದರೆ ವ್ಯವಹಾರದ ಸೂತ್ರ ಮಾತ್ರ ಒಂದೇ; ಅದು ನ್ಯಾಯ, ನಿಷ್ಠೆ.

ವಂಚನೆ, ಮೋಸ, ದಗ, ಅನ್ಯಾಯಗಳು ಒಳ್ಳೆಯ ವ್ಯವಹಾರದ ಹತ್ತಿರಕ್ಕೂ ಸುಳಿಯ ಕೂಡದು. ಹಾಗೆ ಸುಳಿದಾಗ ಅದು ಅವ್ಯವಹಾರ ಅನ್ನಿಸಿಕೊಳ್ಳುತ್ತದೆ. ಸಂಬಂಧ ಕಡಿದು ಹೋಗುತ್ತದೆ. ಅಶಾಂತಿಗೆ ದಾರಿ ಮಾಡಿಕೊಡುತ್ತದೆ.

ವ್ಯವಹಾರದಲ್ಲಿ ಪಾಲ್ಗೊಳ್ಳುವವರ ಸಂಬಂಧ ಯಾವುದೇ ಬಗೆಯದ್ದಾಗಿದ್ದರೂ ಇಬ್ಬರೂ ಆ ಸೂತ್ರದ ಪಾತ್ರವನ್ನು ಅರಿತಿರಬೇಕಾಗುತ್ತದೆ. ಸಂಬಂಧ ಎಷ್ಟೇ ಹತ್ತಿರದ್ದಾದರೂ ವ್ಯವಹಾರ ಚೆನ್ನಾಗಿರುವವರೆಗೆ ಮಾತ್ರ ಅದು ದೂರವಾಗದೇ ಉಳಿಯುವಂತಹುದು.

'ಅಪ್ಪ ಜೇಬ್ ನೋಡ್ತಾನೆ, ಅವ್ವ ಹೊಟ್ಟೆ ನೋಡ್ತಾಳೆ' ಎಂಬ ಮಾತೂ ಈ ವ್ಯವಹಾರವನ್ನೇ ಕುರಿತದ್ದು. ದುಡಿದು ತಂದರೆ ಮಾತ್ರ ಜೀವಕೊಟ್ಟ ತಂದೆ ಆದರಿಸುತ್ತಾನೆ, ಪ್ರೀತಿಸುತ್ತಾನೆ, ಗೌರವಿಸುತ್ತಾನೆ. ಮಗ ಸೋಮಾರಿಯಾಗಿ ಹಾಳಾಗಬಾರದು ಎಂಬ ದೃಷ್ಟಿ ತಂದೆಗಿದ್ದರೂ, ನಾನು ಇದುವರೆಗೆ ಅವನನ್ನು ಸಾಕಿ ಬೆಳೆಸಿ ದೊಡ್ಡವನನ್ನಾಗಿ ಮಾಡಿದ್ದೇನೆ. ಈಗ ನನ್ನನ್ನು ಸಾಕುವುದು ಅವನ ಕರ್ತವ್ಯ ಎಂಬ ವ್ಯವಹಾರದ ದೃಷ್ಟಿಯೂ ಅವನದ್ದಾಗಿರುತ್ತದೆ.

ವ್ಯವಹಾರದ ಸೂತ್ರ, ಅದನ್ನು ಸರಿಯಾಗಿ ಪಾಲಿಸಿಕೊಂಡು ಹೋಗುವವರೆಗೂ ಬಹಳ ಸರಳವಾಗಿ ತೋರುವಂತಹುದು. ಆದರೆ, ಅದರ ಪಾಲನೆಯಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ, ಅದು ಬಹಳ ಕಠಿಣವಾಗಿ ತೋರುತ್ತದೆ

ನಾವು ನಡೆಸುವ ವ್ಯವಹಾರ ಪರಿಶುದ್ಧವಾದುದಾಗಿರಬೇಕು. ಮಾತಿನಿಂದ ಆರಂಭವಾಗುವ ವ್ಯವಹಾರ, ಅಷ್ಟರಿಂದಲೆ ಅದು ತನ್ನ ಉಳಿವು ಅಳಿವಿನಿಂದ ಯೋಗ್ಯತೆಯನ್ನು ತೋರಿಸಿಬಿಡುತ್ತದೆ. ವ್ಯವಹಾರ ಸೂತ್ರಬದ್ಧವಾಗಿದ್ದಾಗ, ಅದು ವ್ಯವಹಾರವಾಗಿಯಷ್ಟೇ ಉಳಿಯುವುದಿಲ್ಲ. ಪರಸ್ಪರ ವ್ಯಕ್ತಿಗಳನ್ನು ಮತ್ತಷ್ಟು ಹತ್ತಿರವಾಗಿಸುತ್ತದೆ. ಅವರ ಆತ್ಮಗಳನ್ನೂ ಬೆಸೆಯುತ್ತದೆ. ಪ್ರೀತಿ, ವಿಶ್ವಾಸಗಳನ್ನು ಹೆಚ್ಚಿಸುತ್ತದೆ. ವ್ಯವಹಾರವನ್ನು ಬಲಗೊಳಿಸುತ್ತದೆ.

ತಾನೂ ಉಳಿಯಬೇಕು, ಪರರೂ ಉಳಿಯಬೇಕು. ಇದು ವ್ಯವಹಾರ ನೀತಿ. ಸ್ವಾರ್ಥ ಇಲ್ಲಿ ಸಲ್ಲದು. ಸ್ವಾರ್ಥ ಇರುವೆಡೆ ವ್ಯವಹಾರ ಹೆಚ್ಚು ಕಾಲ ನಡೆಯದು. ಅಂತಹ ಕಡೆ ವ್ಯವಹಾರ ಏರ್ಪಟ್ಟರೂ 'ಕೊಟ್ಟವನು ಕೋಡಂಗಿ, ಈಸಿಕೊಂಡವನು ಈರಭದ್ರ' ಎಂಬಂತಾಗುತ್ತದೆ. ಅದು ನಗೆಪಾಟಲಾಗುವುದಷ್ಟೇ ಅಲ್ಲದೆ ದ್ವೇಷಕ್ಕೂ ಕಾರಣವಾಗಬಹುದು.

ವ್ಯವಹಾರ, ಪ್ರೀತಿಯಿಂದ ಬೆಸೆಯುವಂತೆಯೇ, ದ್ವೇಷದಿಂದ ಅನಾಹುತಗಳನ್ನೂ ಉಂಟುಮಾಡಬಲ್ಲುದು. ಎರಡು ಶಕ್ತಿಯೂ ಅದಕ್ಕಿದೆ. ವ್ಯವಹಾರದಲ್ಲಿ ತೊಡಗುವವರಲ್ಲಿ ಪರಸ್ಪರ ನಂಬಿಕೆಯೂ ಇರಬೇಕಾಗುತ್ತದೆ.

ಕೊಟ್ಟದ್ದನ್ನು ಪ್ರಾಮಾಣಿಕವಾಗಿ ಹಿಂತಿರುಗಿಸುವವರೆಗೆ, ಆಡಿದ ಮಾತಿನಂತೆ ನಿಷ್ಠೆಯಿಂದ ನಡೆದುಕೊಳ್ಳುವವರೆಗೆ, ಪಡೆದುಕೊಂಡುದ್ದಕ್ಕೆ ಸಮನಾಗಿ ಪ್ರತಿಯಾಗಿ ಸಲ್ಲಿಸುವವರೆಗೆ ವ್ಯವಹಾರ ಆಯತಪ್ಪದೆ ನಡೆದುಕೊಂಡು ಬರುತ್ತದೆ. ಇದಕ್ಕೆ ವ್ಯತಿರಿಕ್ತವಾದಾಗ ಅದು ಸೂತ್ರ ತಪ್ಪುತ್ತದೆ.

ತಂದೆ–ಮಕ್ಕಳಾದರೂ ತಂದೆಯ ಋಣ ತೀರಿಸುವವರೆಗೆ ವ್ಯವಹಾರ ಚೆನ್ನಾಗಿರುತ್ತದೆ; ಅಣ್ಣ–ತಮ್ಮಂದಿರಾದರೂ ಇರುವುದನ್ನು ಸಮನಾಗಿ ಹಂಚಿಕೊಳ್ಳುವವರೆಗೆ ವ್ಯವಹಾರ ಚೆನ್ನಾಗಿರುತ್ತದೆ. ಅಕ್ಕ–ತಂಗಿಯರಾದರೂ ಪರಸ್ಪರ ಚೆನ್ನಾಗಿ ನೋಡಿಕೊಳ್ಳುವವರೆಗೂ ವ್ಯವಹಾರ ಚೆನ್ನಾಗಿರುತ್ತದೆ. ಗುರು–ಶಿಷ್ಯರಾದರೂ ಪರಸ್ಪರ ಗೌರವವಿಟ್ಟುಕೊಂಡಿರುವವರೆಗೂ ವ್ಯವಹಾರ ಚೆನ್ನಾಗಿರುತ್ತದೆ.

ವ್ಯವಹಾರ ನಡತೆಗೆ ಸಂಬಂಧಿಸಿದ್ದು. ವ್ಯವಹರಿಸುವವರ ನಡತೆ ಶುದ್ಧವಾಗಿದ್ದಾಗ, ಶುಭ್ರವಾಗಿದ್ದಾಗ ಅವರ ನಡುವಿನ ವ್ಯವಹಾರವೂ ಪರಿಶುದ್ಧವಾಗಿರುತ್ತದೆ. ಬುದ್ಧಿವಂತರಾದವರು ವ್ಯವಹಾರಕ್ಕೆ ತೊಡಗುವ ಮುನ್ನ ಅವನ ನಡತೆಯನ್ನು ಗಮನಿಸುತ್ತಾರೆ, ನೀತಿಯನ್ನು ಗಮನಿಸುತ್ತಾರೆ. ಸರಿಯೆನಿಸಿದಾಗ ಸಂಬಂಧ ಬೆಳೆಸುತ್ತಾರೆ. ಅಂಥಾ ವ್ಯವಹಾರ ಹೆಚ್ಚುಕಾಲ ಉಳಿಯುತ್ತದೆ, ಬೆಳೆಯುತ್ತದೆ.

ವ್ಯವಹಾರಕ್ಕೆ ಕೈ ಹಾಕಿ ಕೈ ಸುಟ್ಟುಕೊಂಡವರು, 'ಕೊಟ್ಟು ನಿಷ್ಠೂರವಾಗುವುದಕ್ಕಿಂತ ಕೊಡದೆಯೇ ನಿಷ್ಠೂರವಾಗುವುದು ಒಳ್ಳೆಯದು' ಎಂದು ಕೈಕಟ್ಟಿ ಕೂರುವುದೂ ಉಂಟು. ಆದರೆ, ಇದರಿಂದ ಬದುಕು ನಡೆಯದು. ಎಚ್ಚರದಪ್ಪಿದರೆ ಬೆಂಕಿ ಕೈ ಸುಡುತ್ತದೆ. ಹಾಗೆಂದು ಅದರ ಸಂಬಂಧವನ್ನೇ ಕಳೆದುಕೊಳ್ಳುವುದಕ್ಕಾಗುವುದಿಲ್ಲ.

ವ್ಯವಹಾರ ಹಲವು ಬಗೆಯಾದುದು : ಮಾತಿನ ವ್ಯವಹಾರ, ಹಣದ ವ್ಯವಹಾರ, ಮದುವೆ ವ್ಯವಹಾರ, ಮನೆ ವ್ಯವಹಾರ—ಹೀಗೆ ಇದರ ಪಟ್ಟಿ ದೊಡ್ಡದು. ಆದರೆ ಇವುಗಳೆಲ್ಲದರ ಹಿಂದೆ ಇರುವ ತತ್ತ್ವ ಮಾತ್ರ ಒಂದೇ; ಯಾರೂ ಯಾರೊಬ್ಬರನ್ನೂ ವಂಚಿಸುವುದಕ್ಕೆ ಪ್ರಯತ್ನಿಸದಿರುವುದು.

ಬಾ. ರಾ. ಗೋಪಾಲ್

ಪ್ರಾಚೀನ ಕರ್ನಾಟಕದಲ್ಲಿ ನಗರಯೋಜನೆ ಮತ್ತು ನೀರಾವರಿ

ಕ್ರಿಸ್ತಪೂರ್ವದ ವರ್ಷಗಳಲ್ಲಿ ಅಥವಾ ಕ್ರಿಸ್ತಶಕದ ಆರಂಭದ ವರ್ಷಗಳಲ್ಲಿ ಕರ್ನಾಟಕದಲ್ಲಿ ನಗರ ಯೋಜನೆ ಇದ್ದಿತೇ, ಇದ್ದಿದ್ದೇ ಆದರೆ ಅದರ ಸ್ವರೂಪ ಎಂತಹುದು ಎಂದು ಖಚಿತವಾಗಿ ಹೇಳಲು ಆಧಾರಗಳು ಸಾಕಷ್ಟಿಲ್ಲ. ರಾಯಚೂರು ಜಿಲ್ಲೆಯ ಮಸ್ಕಿ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ–ಚಂದ್ರವಳ್ಳಿಗಳು ಅಶೋಕನ ಕಾಲದಲ್ಲಿಯೇ ಖ್ಯಾತಿವೆತ್ತಿದ್ದ ಸ್ಥಳಗಳು. ಆದರೆ ಅಲ್ಲಿ ನಡೆದ ಉತ್ಖನನಗಳಿಂದ ಇದಕ್ಕೆ ಸಂಬಂಧಿಸಿದ ಯಾವ ಹೆಚ್ಚಿನ ಮಾಹಿತಿಗಳೂ ದೊರೆತಿಲ್ಲ. ಬ್ರಹ್ಮಗಿರಿಯಲ್ಲಿಯಾಗಲೀ, ಮಸ್ಕಿಯಲ್ಲಿಯಾಗಲೀ ಯಾವುದೇ ಕಟ್ಟಡದ ಅವಶೇಷಗಳು ಕಂಡು ಬಂದಿಲ್ಲ. ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆಯಲ್ಲಿನ ನಿವೇಶನಗಳಲ್ಲಿ ಮನೆಗಳ ಅವಶೇಷಗಳು ಕಂಡುಬಂದಿವೆ. ಆದರೆ ಆ ಮನೆಗಳನ್ನು ಗುಡಿಸಲುಗಳೆಂದು ಕರೆಯುವುದು ಹೆಚ್ಚು ಸೂಕ್ತ. ತಗ್ಗು ದಿಣ್ಣೆಗಳಿದ್ದ ನೆಲದಲ್ಲಿ ಕಲ್ಲಿನ ಚೂರುಗಳನ್ನು ತುಂಬಿಸಿ ಮಣ್ಣಿನ ಹೊದಿಕೆಯಿಂದ ನೆಲವನ್ನು ದಮ್ಮಸ್ಸುಮಾಡಿ ಸೀಳಿದ ಬೊಂಬಿನ ಜಾಳಿಗೆಗಳನ್ನು ನಿಲ್ಲಿಸಿ ಜಾಳಿಗೆಗಳಿಗೆ ಮಣ್ಣನ್ನು ಮೆತ್ತಲಾಗುತ್ತಿತ್ತು. ಈ ಮನೆಗಳು ದುಂಡನೆ ಆಕಾರದವು. ನಮಗೆ ದೊರೆತಿರುವ ಅತಿ ದೊಡ್ಡ ಗುಡಿಸಲಿನ ನಿವೇಶನದ ವ್ಯಾಸ 18 ಅಡಿಗಳು. ಇದರಿಂದ ಅವರು ಕಟ್ಟಿಕೊಂಡ ಮನೆಗಳ ಬಗೆಗೆ ಸ್ಥೂಲವಾದ ಒಂದು ಕಲ್ಪನೆ ಉಂಟಾಗುತ್ತದೆ ಅಷ್ಟೆ. ಆದರೆ ನಗರ ಯೋಜನೆಗೆ ಸಂಬಂಧಿಸಿದಂತೆ ಯಾವ ವಿವರಗಳೂ ತಿಳಿದುಬಂದಿಲ್ಲ. ಕರ್ನಾಟಕದಲ್ಲಿನ ಪ್ರಾಚೀನ ನಗರಗಳಲ್ಲಿ ಹೆಚ್ಚಾಗಿ ಉತ್ಖನನಗಳು ಆಗದೇ ಇರುವುದು ಈ ಬಗೆಗೆ ಹೆಚ್ಚಿನ ವಿವರಗಳು ನಮಗೆ ತಿಳಿಯದಿರಲು ಕಾರಣ.

ಕರ್ನಾಟಕದಲ್ಲಿ ಬನವಾಸಿ ಒಂದು ಪ್ರಾಚೀನ ಐತಿಹಾಸಿಕ ನಗರ. ಇಲ್ಲಿನ ಒಂದೆರಡು ಸಣ್ಣ ನಿವೇಶನಗಳಲ್ಲಿ ಉತ್ಖನನವಾಗಿದ್ದರೂ ನಗರ ಯೋಜನೆಗೆ ಸಂಬಂಧಿಸಿದ ನೇರವಾದ ಯಾವ ಆಧಾರಗಳೂ ದೊರೆತಿಲ್ಲ. ಇದು 5–6ನೆಯ ಶತಮಾನಗಳಲ್ಲಿ ಕರ್ನಾಟಕದಲ್ಲಿ ಆಳಿದ ಕದಂಬರ ರಾಜಧಾನಿಯಾಗಿತ್ತು. ಪುಲಕೇಶಿಯ ಐಹೊಳೆಯ ಶಾಸನದಲ್ಲಿ ಇದನ್ನು ಸ್ಥಲದುರ್ಗವೆಂದು ವರ್ಣಿಸಿದೆ. ಗುಡ್ನಾಪುರದಲ್ಲಿ ದೊರೆತಿರುವ ಕದಂಬ ಅರಸ ರವಿವರ್ಮನ ಶಾಸನದಲ್ಲಿ ಅರಸನು ಆ ಗ್ರಾಮದಲ್ಲಿ ಕಾಮ ಜಿನಾಲಯವನ್ನು ಕಟ್ಟಿಸಿದನೆಂದು ಹೇಳಿದೆ. ಈ ದೇವಾಲಯದ ಬಲ ಭಾಗಕ್ಕೆ ಅರಸನ ಅರಮನೆಯೂ ಎಡಗಡೆಗೆ ಅಂತಃಪುರದ ಮುಂಭಾಗದಲ್ಲಿ ಎರಡು ನೃತ್ಯಶಾಲೆಗಳೂ ಇದ್ದುವೆಂದೂ ಹೇಳಿರುವುದರಿಂದ ಬನವಾಸಿಯಿಂದ ಸುಮಾರು 5 ಕಿ. ಮೀ. ದೂರದಲ್ಲಿರುವ

ಗುಡ್ನಾಪುರದಲ್ಲಿ ಅರಸನ ಅರಮನೆ ಇದ್ದಿತೆಂದು ಊಹಿಸಬಹುದು ಎಂದಮೇಲೆ ರಾಜಧಾನಿ ನಗರದ ಒಂದು ಕೊನೆಯಲ್ಲಿ ಅರಮನೆ, ಇನ್ನೊಂದು ಕೊನೆಯಲ್ಲಿ, ವರದಾ ನದಿಯ ತೀರದ ಮೇಲೆಯೇ, ಈಗಿನ ಮಧುಕೇಶ್ವರ ದೇವಾಲಯವಿದ್ದಿತೆನ್ನಬಹುದು. ರವಿವರ್ಮ ಬಹುಶಃ ಜೈನಧರ್ಮಪಕ್ಷಪಾತಿಯಾಗಿದ್ದುದರಿಂದ ಕಾಮಜಿನಾಲಯವನ್ನು ತನ್ನ ಅರಮನೆಯ ಪಕ್ಕದಲ್ಲಿಯೇ ಕಟ್ಟಿಸಿರಬಹುದು. ಇದನ್ನು ಗಮನದಲ್ಲಿಟ್ಟುಕೊಂಡರೆ ಬನವಾಸಿ ಅಂದು ವಿಶಾಲವಾದ ನಗರವೇ ಆಗಿತ್ತೆನ್ನುವುದರಲ್ಲಿ ಸಂದೇಹವಿಲ್ಲ. ಮಧುಕೇಶ್ವರಾಲಯದ ಮುಂದಿನ ವಿಶಾಲವಾದ ರಸ್ತೆ ಇನ್ನೊಂದು ತುದಿಯಲ್ಲಿದ್ದ ಅರಮನೆಯವರೆವಿಗೂ ಹಬ್ಬಿರಬಹುದು ಇಲ್ಲಿ ಇನ್ನೂ ಹೆಚ್ಚಿನ ಉತ್ಖನನಗಳಾಗುವವರೆವಿಗೂ ವಿಶೇಷ ವಿವರಗಳು ತಿಳಿದುಬರುವಂತಿಲ್ಲ. ಆದರೆ. ಚಾಮರಸ ತನ್ನ ಪ್ರಭುಲಿಂಗಲೀಲೆಯಲ್ಲಿ ಬನವಾಸಿನಗರವನ್ನು ಹೀಗೆ ವರ್ಣಿಸಿದ್ದಾನೆ:

ಕೇರಿಕೇರಿಯ ತಳಿರಿಡಿದ ಗುಡಿ
ತೋರಣಂಗಳ ಪರಿಮಳಿಸುತಿಹ
ಸಾರಣೆಯ ಕಾರಣೆಯ ಗಂಧೋಧಕದ ಚಳೆಯಗಳ
ಸೌರಭದ ಪೂವಳಿಗಳಲಿ ಶೃಂ
ಗಾರಿಸಿದ ಬೀದಿಗಳ ಸೊಬಗಿನ
ಸಾರದಲಿ ಸಮನಿಸಿದುದತಿಸೌರಂಭ ಬನವಸೆಯ ॥

ಈ ಪದ್ಯದಿಂದ ಕೆಲವು ವಿವರಗಳನ್ನು ಊಹಿಸಬಹುದು. ಈಗಲೂ ಬನವಾಸಿಯ ತೇರು ಮಂಟಪದ ಮುಂದಿನ ವಿಶಾಲವಾದ ರಸ್ತೆಯನ್ನು, ಇಕ್ಕೆಲಗಳಲ್ಲಿರುವ ವಿಶಾಲವಾದ ಮನೆಗಳನ್ನು ನೋಡಿದಾಗ ಇದು ಸುಯೋಜಿತ ನಗರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಬಾದಾಮಿಯ ಚಾಲುಕ್ಯರ ರಾಜಧಾನಿಯಾದ ಬಾದಾಮಿ, ರಾಷ್ಟ್ರಕೂಟರ ರಾಜಧಾನಿಯಾದ ಬೀದರ್ ಜಿಲ್ಲೆಯ ಮಳಖೇಡ, ಅದೇ ಜಿಲ್ಲೆಯ ಈಗಿನ ಬಸವಕಲ್ಯಾಣ, ಸೇಉಣರ ರಾಜಧಾನಿಯಾಗಿದ್ದ ದೇವಗಿರಿ (ಈಗಿನ ದೌಲತಾಬಾದ್), ಹೊಯ್ಸಳರ ದೋರಸಮುದ್ರ— ಇವುಗಳಲ್ಲದೆ 8-13ನೆಯ ಶತಮಾನಗಳಲ್ಲಿ ಅನೇಕ ಪಟ್ಟಣಗಳು ಕರ್ನಾಟಕದಲ್ಲಿದ್ದುವು. ಇವು ಸಾಂಸ್ಕೃತಿಕ ಕೇಂದ್ರಗಳಾಗಿಯೋ, ವ್ಯಾಪಾರಕ್ಕೆ ಹೆಸರಾದ ಪಟ್ಟಣಗಳಾಗಿಯೋ ಇದ್ದುವು ಎಂದು ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲೆಲ್ಲ ಐತಿಹಾಸಿಕ ನಿವೇಶನಗಳ ಉತ್ಖನನಕಾರ್ಯ ಆಗಿಯೇ ಇಲ್ಲ.

ಆದರೂ ಶಾಸನಗಳಿಂದ ಹಲವಾರು ಕುತೂಹಲಕರ ವಿಷಯಗಳು ತಿಳಿದಿವೆ. ರಾಜಬೀದಿ, ಮಹಾಪಥ, ಹೆದ್ದಾರಿ, ದಾರಿ, ಅಡ್ಡದಾರಿ, ಓಣಿ ಮುಂತಾದ ಪದಗಳನ್ನು ದಾನ ನೀಡಿದ ಭೂಮಿ ಮುಂತಾದವುಗಳಿಗೆ ಚಕ್ಕುಬಂದಿಗಳನ್ನು ವಿವರಿಸುವಾಗ ಶಾಸನಗಳಲ್ಲಿ ಬಳಸಿದೆ. ಬೇಲೂರಿನಲ್ಲಿ ದೊರೆತ ಹೊಯ್ಸಳ ಮೊದಲನೆಯ ನರಸಿಂಹನ ಶಾಸನವೊಂದರಲ್ಲಿ ದೋರಸಮುದ್ರದಲ್ಲಿ ದೇವರ ಚತುಸ್ಸೀಮೆಗಳನ್ನು ವಿವರಿಸುವಾಗ "ಮೂಡಲು ಪಂದಲದ ಕೇಶವದೇವರ ಬ್ರಹ್ಮಪುರಿಗೇರಿ, ತೆಂಕಲು ಇಕ್ಕಿದ ಪೌಳಿಯ ಕೋಟೆಯಾದಿಯಾಗಿ ಮಾಲಗಾಜಿಗೇರಿಯ ಕಡೆಯಿಂ ಮಾಲೇಶ್ವರಕೆ ಹೋದ ಓಣಿ ಮೇರೆ" ಎಂದು ಹೇಳಿದೆ. ಇದರಿಂದ ರಾಜಧಾನಿ ದೋರಸಮುದ್ರದಲ್ಲಿ ಪಂದಲದ ಕೇಶವದೇವರ ಬ್ರಹ್ಮಪುರಿಗೇರಿ ಎಂಬುದೂ ಮಾಲಗಾಜಿಗೇರಿ ಎಂಬುದೂ ಎರಡು ರಸ್ತೆಗಳು, ಮಾಲಗಾಜಿಗೇರಿಯಿಂದ ಮಾಲೇಶ್ವರ ದೇವಸ್ಥಾನಕ್ಕೆ ಹೋಗಲು ಒಂದು ಓಣಿ ಇತ್ತು ಎಂಬುದೂ ತಿಳಿದುಬರುತ್ತದೆ. ಮಾಲಗಾಜಿರು ದೇವರಿಗೆ ಮಾಲೆಗಳನ್ನು

ಕಟ್ಟಿಕೊಡುವವರು. ಅವರಿಗಾಗಿ ತಮ್ಮ ಕೇರಿಯ ಒಂದು ಓಣಿಯಲ್ಲಿ ತಮ್ಮ ಕಸುಬಿನ ಹೆಸರಿನಲ್ಲಿ ಮಾಲೇಶ್ವರ ಎಂಬ ದೇವಾಲಯವನ್ನು ಕಟ್ಟಿಕೊಂಡಿದ್ದರೆನಿಸುತ್ತದೆ.

ಮೈಸೂರು ಜಿಲ್ಲೆಯ ಸೋಮನಾಥಪುರದಲ್ಲಿ ಕೇಶವದೇವರ ಆಲಯವನ್ನು ಹೊಯ್ಸಳರ ಕಾಲದಲ್ಲಿ ಕಟ್ಟಿಸಿದುದು ತಿಳಿದಿದೆ. ಇದೊಂದು ಮಹಾಗ್ರಹಾರವಾಗಿತ್ತು. ಈ ದೇವಾಲಯ ಗ್ರಾಮದ ಮಧ್ಯದಲ್ಲಿದ್ದು ಕಾವೇರೀ ತೀರದಲ್ಲಿ ಲಕ್ಷ್ಮೀನರಸಿಂಹ ಮತ್ತು ಯೋಗನಾರಾಯಣರ ಆಲಯಗಳಿದ್ದುವು. ಅಲ್ಲಿನ ಪಂಚಲಿಂಗ ದೇವಾಲಯ ಗ್ರಾಮದ ಈಶಾನ್ಯದಲ್ಲಿತ್ತು. ಈ ಭಾಗವನ್ನು ಶೈವಸ್ಥಳವೆಂದೂ ಕೇಶವ ದೇವಾಲಯವಿದ್ದ ಭಾಗವನ್ನು ವೈಷ್ಣವಸ್ಥಳವೆಂದೂ ಅಲ್ಲಿನ ಶಾಸನಗಳಲ್ಲಿ ಕರೆದಿರುವುದನ್ನು ಗಮನಿಸಿದರೆ ಭಿನ್ನಧರ್ಮಗಳ ಅನುಯಾಯಿಗಳು ನಗರದ ಬೇರೆ ಬೇರೆ ಭಾಗಗಳಲ್ಲಿ ವಾಸಿಸುತ್ತಿದ್ದರೆನ್ನಬಹುದು. ಹೀಗೆ ಧರ್ಮಗಳನ್ನವಲಂಬಿಸಿ, ಕಸಬುಗಳನ್ನವಲಂಬಿಸಿ, ನಗರಗಳು ವಿಭಜಿಸಲ್ಪಡುತ್ತಿದ್ದುವೆಂದು ತೋರುತ್ತದೆ. ಈ ಸಂದರ್ಭದಲ್ಲಿ ತಮಿಳ್ನಾಡಿನ ಕಾಂಚೀಪುರವನ್ನು ಶಿವಕಂಚಿ, ವಿಷ್ಣುಕಂಚಿ ಎಂದು ವಿಭಜಿಸಿ ಈಗಲೂ ರೂಢಿಯಾಗಿ ಕರೆಯುತ್ತಿರುವುದನ್ನು ಗಮನಿಸಬಹುದು.

ಧಾರವಾಡ ಜಿಲ್ಲೆಯ ನರಗುಂದ ಒಂದು ಹಿರಿಯ ಅಗ್ರಹಾರವಾಗಿತ್ತು. ಅದರಲ್ಲಿ ನಾಲ್ಕು ಪ್ರಮುಖ ಕೇರಿಗಳಿದ್ದುವು. ಈ ನರಗುಂದ 'ಬೆಳ್ವಲನೆಂಬಾಲಲನೆಯತಿಳಕದವೋಲ್ಕಣ್ಗೊಳಿಸುವು'ದೆಂದೂ ಅದರ 'ನಾಲ್ಕು ಕೇರಿಗಳೊಳಗಲ್ಲಿಗಲ್ಲಿಗತಿರಮಣೀಯಂ ಮೂಡಣಭಾಗದ ಕೇರಿ ಶ್ರೀ ಮೆಕ್ಕೆಗೇರಿ ಎಂಬುದು ಪೆಸರಿಂ' ಎಂದು ಅಲ್ಲಿನ ಶಾಸನವೊಂದು ತಿಳಿಸುತ್ತದೆ. ಈ ಅಗ್ರಹಾರದ ಇನ್ನೊಂದು ಭಾಗ ಹೇಮಗೇರಿ. 'ಚಾರುತರಮೆನಿಪುದಾಪುರ ಕೇರಿಗಳಿಂ ನಾಲ್ಕಱಿಂದಮದಱೊಳು ಮೌಕ್ತಿಕಹಾರದ ನಾಯಕಮಣಿವೊಲುದಾರತೆಯಿಂ ಹೇಮಗೇರಿ ಕರಮೆಸೆದಿರ್ಕ್ಕುಂ' ಎಂದು ಹೇಮಗೇರಿಯನ್ನು ಶಾಸನವೊಂದು ವರ್ಣಿಸಿದೆ. ಮೂರನೆಯದು ಪಡುವಗೇರಿ. ನಾಲ್ಕು ಕೇರಿಗಳನ್ನೊಳಗೊಂಡ ನರಗುಂದದ ನಾಲ್ಕನೆಯ ಕೇರಿಯ ಹೆಸರು ತಿಳಿಯದಾಗಿದೆ. ಈ ಎಲ್ಲಾ ಕೇರಿಗಳಿಂದ ಕೂಡಿದ ಅಗ್ರಹಾರವು "ವಿಪುಳಪ್ರಾಕಾರಚಾರುಧ್ವಜಕುಳವಿಳಸದ ದ್ರಮ್ಯಹರ್ಮ್ಯಂಗಳಿಂ ನಾನೋತ್ತುಂಗ ದೇವಾಳಯ ವಿಳಸನದಿಂ ವಣಿಗ್ಗೇಹ ಸಂದೋಹದಿಂ ರಂಜಿಸುತ್ತ ಶೋಭಿಪುದೆತ್ತನೋಪ್ಪರ್ದಂ". ಇದರ ಒಟ್ಟು ಆಡಳಿತ 220 ಮಹಾಜನರಿಗೊಳಪಟ್ಟಿತ್ತು. ಪಡುವಗೇರಿ, ಮೆಕ್ಕೆಗೇರಿ, ಹೇಮಗೇರಿ ಮತ್ತು ಹೆಸರು ತಿಳಿಯದ ನಾಲ್ಕನೆಯ ಕೇರಿಗಳಲ್ಲಿ ಕ್ರಮವಾಗಿ 55, 35, 55 ಮತ್ತು 75 ಮಹಾಜನರಿದ್ದರು. ಇಲ್ಲಿ ಕೇರಿ ಎಂಬ ಮಾತಿಗೆ ಒಂದು ರಸ್ತೆ ಎಂದಷ್ಟೇ ಅರ್ಥವನ್ನು ಕೊಡಲಾಗದೆನಿಸುತ್ತದೆ. ಇದು ಒಂದೊಂದೂ ಬಡಾವಣೆಯಾಗಿತ್ತೆನಿಸುತ್ತದೆ.

ಹಾನಗಲ್ಲು 11-12ನೆಯ ಶತಮಾನಗಳಲ್ಲಿ ಆಳಿದ ಸಾಮಂತರಾದ ಕದಂಬರ ರಾಜಧಾನಿಯಾಗಿತ್ತಲ್ಲದೆ ಪಶ್ಚಿಮ ಕರಾವಳಿಗೆ ಹೋಗುವ ಹಾದಿಯಲ್ಲಿದ್ದು ವ್ಯಾಪಾರ ಕೇಂದ್ರವೂ ಆಗಿತ್ತು. ಇಲ್ಲಿ ಇತರ ಕಡೆಗಳಿಂದ ಬಂದ ಅನೇಕರು ನೆಲಸಿದ್ದರೆಂದು ತೋರುತ್ತದೆ. ಶಾಸನವೊಂದರಿಂದ ಅಲ್ಲಿ ತಿಗುಳ ಬೆವಹಾರಿಗಳು–ತಮಿಳುನಾಡಿನಿಂದ ಬಂದು ನೆಲಸಿದ್ದ ವರ್ತಕರು—ತಮ್ಮದೇ ಆದ ಒಂದು ಬಡಾವಣೆಯಲ್ಲಿ ವಾಸಿಸುತ್ತಿದ್ದರೆಂದು ತೋರುತ್ತದೆ. ಅವರ ಕೇರಿಯ ಸೀಮೆಯನ್ನು 'ನನ್ದನಪಿಳ್ಳೆಯ ರಾಮೇಶ್ವರದೇವರ ತಿಗುಳ ಬೆವಹಾರಿಗಳ ಕೇರಿಯ ಸೀಮೆ' ಎಂದು ಶಾಸನವೊಂದು ನಿರ್ದೇಶಿಸಿದೆ.

14ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದಾಗ ಅದರ ರಾಜಧಾನಿಯಾಗಿ ಹಂಪೆ ಪ್ರಾಮುಖ್ಯತೆಯನ್ನು ಪಡೆಯಿತು. ಇಲ್ಲಿ ಇನ್ನೂ ಸುವ್ಯವಸ್ಥಿತವಾದ ಯೋಜಿತ

ನಗರವನ್ನು ರಚಿಸಲಾಯಿತೆಂಬುದು ಈಗಲೂ ಅದನ್ನು ನೋಡಿದ ಯಾರಿಗಾದರೂ ವೇದ್ಯವಾಗುತ್ತದೆ. ಅರಸರ, ಅಧಿಕಾರಿಗಳ, ರಾಣೀವಾಸದ ಅರಮನೆಗಳು, ಗೃಹಗಳು, ಪೇಟೆಯ ಬೀದಿಗಳು, ಅಂಗಡಿ ಸಾಲುಗಳು, ಅವುಗಳಿಗೆ ತಕ್ಕ ಅನುಕೂಲವೇರ್ಪಡಿಸಲು ಇತರ ಸೌಕರ್ಯಗಳು ಇವುಗಳನ್ನೆಲ್ಲಾ ಹಂಪೆಯಲ್ಲಿ ನಾವು ಅವಶೇಷಗಳಾಗಿ ಕಾಣಬಹುದು. ಹೊರದೇಶಗಳಿಂದ ಬಂದ ಯಾತ್ರಿಕರೂ ಇತರ ಪ್ರಯಾಣಿಕರೂ ಇವುಗಳ ವೈಭವವನ್ನು ಕಂಡು ಮುಗ್ಧರಾಗಿದ್ದಾರೆ. ವಿಜಯನಗರವೆನಿಸಿದ ಈ ನಗರದ ಕೋಟೆಯ ಗೋಡೆಗಳು ಹೇಮಕೂಟವನ್ನಪ್ಪಿಕೊಳ್ಳಲು ಚಾಚಿದ್ದವೇನೋ—ಯಾ ಹೇಮಕೂಟಂ ನಿಜಸಾಲಬಾಹುಲತಾಭಿರೇನೇವ ಪರಿಷ್ವಜಂತೀ—ಎನಿಸಿತ್ತು, ಹುಲಿಕೆರೆಯ ತಾಮ್ರಶಾಸನ ಕವಿಗೆ. ಕ್ರಿ.ಶ 1443ರಲ್ಲಿ ಹಂಪೆಗೆ ಬಂದಿದ್ದ ಪರ್ಷಿಯನ್ ಯಾತ್ರಿಕ ಅಬ್ದುರ್ ರಜಾಕನು ಇದಕ್ಕೆ ಏಳು ಕೋಟೆಗಳು ಒಂದರೊಳಗೊಂದಿದ್ದಿತು, ಗುಡ್ಡದ ಮೇಲಿದ್ದ ವೃತ್ತಾಕಾರದ ಕೋಟೆಯನ್ನು ಕಲ್ಲು ಮತ್ತು ಗಾರೆಗಳಿಂದ ಕಟ್ಟಲಾಗಿತ್ತು. ಏಳನೆಯ ಕೋಟೆ ಉಳಿದವುಗಳ ಮಧ್ಯದಲ್ಲಿದ್ದು ಅದರೊಳಗೆ ಅರಸನ ಅರಮನೆ ಇತ್ತು. ಮೊದಲ ಮೂರು ಕೋಟೆಗಳ ನಡುವೆ ಗದ್ದೆಗಳು, ತೋಟಗಳು, ಮನೆಗಳೂ ಇದ್ದು ಮೂರರಿಂದ ಏಳರ ಒಳಗಣ ಕೋಟೆಗಳಲ್ಲಿ ಜನನಿಬಿಡವಾದ ಅಂಗಡಿಗಳು, ಪೇಟೆ ಬೀದಿಗಳೂ ಇದ್ದುವು. ಪೇಟೆ ಬೀದಿಗಳು ಉದ್ದವೂ ಅಗಲವೂ ಆಗಿದ್ದುವು—ಎಂದು ವರ್ಣಿಸಿದ್ದಾನೆ. ಈ ನಗರ ರೋಮ್ ನಗರದಷ್ಟು ವಿಶಾಲವಾಗಿದ್ದು ಅದರ ಭವ್ಯವಾದ ದ್ವಾರಗಳು, ತೋಟಗಳು, ಉದ್ಯಾನಗಳು ನಗರದೊಳಕ್ಕೆ ಹರಿದುಬರುವ ನೀರಿನ ಕಾಲುವೆಗಳು ಅವುಗಳ ಸೌಂದರ್ಯವನ್ನು ಹೆಚ್ಚಿಸಿದ್ದುವು ಎಂದಿದ್ದಾನೆ ಕೃಷ್ಣದೇವರಾಯನ ಆಸ್ಥಾನಕ್ಕೆ ಬಂದಿದ್ದ ಪೇಸ್.

ಇವಿಷ್ಟು ನಗರಯೋಜನೆಗೆ ಸಂಬಂಧಿಸಿದ ಕೆಲವು ಅಂಶಗಳು.

ಇನ್ನು ನೀರಾವರಿ ಸೌಲಭ್ಯಗಳನ್ನು ಕುರಿತು ಪ್ರಾಚೀನ ಕರ್ನಾಟಕದಲ್ಲಿ ಹೆಚ್ಚಿನ ಮಾಹಿತಿಗಳು ಸಿಗುತ್ತವೆ. ಇಮ್ಮಡಿ ನಾಗವರ್ಮನೆಂಬ 12ನೆಯ ಶತಮಾನದ ಕವಿ ತನ್ನ ಅಭಿಧಾನವಸ್ತುಕೋಶವೆಂಬ ಗ್ರಂಥದಲ್ಲಿ ಭೂವರ್ಗಕ್ಕೆ ಸಂಬಂಧಿಸಿದಂತೆ

ಅವುದು ಬೆಳೆಗುಂ ವೃಷ್ಟಿಯಿ
ನಾವಿಷಯಂ ದೇವಮಾತೃಕಂ ಸತತಂ ಮ
ತ್ತಾವುದು ನದೀಪ್ರವಾಹದೆ
ಱೀವೆ ನದೀಮಾತೃಕಂ ತದುರ್ವೀಭಾಗಂ

ಎಂದಿದ್ದಾನೆ. ಮಳೆಯಿಂದ ಬೆಳೆಯುವ ಭೂಮಿಗಳು, ನದಿಗಳಿಂದ ಸಹಜವಾಗಿಯೇ ಕಾಲುವೆಗಳನ್ನು ತೋಡಿ, ತನ್ಮೂಲಕ ನೀರಾವರಿ ಸೌಲಭ್ಯಗಳನ್ನೇರ್ಪಡಿಸಿಕೊಂಡು ಬೆಳೆಯುವ ಭೂಮಿಗಳು ಎಂದು ಎರಡು ವಿಧವಾಗಿ ಆತ ಭೂಮಿಯನ್ನು ವರ್ಗೀಕರಣ ಮಾಡಿದ್ದಾನೆಂಬುದು ಸ್ಪಷ್ಟ. ನೀರಾವರೀ ಸೌಲಭ್ಯ ಪಡೆದ ಭೂಮಿಗೆ ಎಂದಿನಿಂದಲೂ ಹೆಚ್ಚಿನ ಪ್ರಾಶಸ್ತ್ಯವಿದ್ದೇ ಇದೆ.

ಬೇಸಾಯ ನಮ್ಮ ನಾಡಿನ ಜೀವನದ ಬೆನ್ನೆಲುಬು. ಅತಿ ಪ್ರಾಚೀನ ಕಾಲದಿಂದಲೂ ವ್ಯವಸಾಯದ ಅಭಿವೃದ್ಧಿಗಾಗಿ ನಮ್ಮ ನಾಡಿನ ಆಳರಸರು ಶ್ರಮಿಸಿದ್ದಾರಲ್ಲದೆ ಕೆರೆಗಳನ್ನು ಕಟ್ಟಿಸುವುದೂ ಕಾಲುವೆಗಳನ್ನು ತೋಡಿಸುವುದೂ ಧರ್ಮಕಾರ್ಯಗಳಲ್ಲಿ ಒಂದು ಎಂದು ಬಗೆಯಲಾಗಿದೆ. ಕೆರೆಗಳನ್ನೂ ಕಾಲುವೆಗಳನ್ನೂ ಹಾಳುಗೆಡುವವರಿಗೆ ತೀವ್ರವಾದ ದಂಡನೆ ಕೊಡಬೇಕೆಂದು ಮನು ಸೂಚಿಸಿದ್ದಾನೆ. ಕೆರೆಗೊಡಗೆ ಎಂಬುದು ಕೆರೆಯನ್ನು ಕಟ್ಟಿಸಿದವರಿಗೆ, ಅದರ

ಕಟ್ಟೆ ಕಾಲುವೆಗಳನ್ನು ರಕ್ಷಿಸುತ್ತಿದ್ದವರಿಗೆ ಹಿಂದಿನ ಕಾಲದಲ್ಲಿ ನೀಡಲಾಗುತ್ತಿದ್ದ ಭೂಮಿದಾನ. ಇದಕ್ಕೆ ಬಿತ್ತುವಟ್ಟ ಎಂಬ ಹೆಸರೂ ಇದೆ. ಸುಮಾರು 9ನೆಯ ಶತಮಾನಕ್ಕೆ ಸೇರಿದ ಸಂಪಿಗೆಪುರ ಶಾಸನದಲ್ಲಿ ನಾಲ್ಕು ಗ್ರಾಮಗಳಿಂದ ಪಡೆದ ಹಣವನ್ನು ಕಮ್ಮಟಿಯ ಮಹಾಜನರು ಇತರ ಕಾರ್ಯಗಳ ಜೊತೆಗೆ ಕೆರೆಯನ್ನು ನೋಡಿಕೊಳ್ಳಲೂ ಉಪಯೋಗಿಸಿದರೆಂದಿದೆ. ಕ್ರಿ.ಶ. 1312ರಲ್ಲಿ ಭಯಿರಾಪುರದ ಮಹಾಜನರು 50 ವರಹಗಳಿಗೆ ಐದು ಖಂಡುಗ ಬೀಜವರಿ ಭೂಮಿಯನ್ನು ಮಾರಿದಾಗ ಆ ಭೂಮಿಗೆ ಯೋಗಣ್ಣನಕಟ್ಟೆಯಿಂದ ನೀರು ಹಾಯಿಸಿಕೊಳ್ಳಬಹುದೆಂದೂ, ಆ ನೀರು ಸಾಲದೆಯಿದ್ದರೆ 'ಹಿರಿಯ ಬಯಲಗದೆಯ ಓಪಾದಿಯಲಿ ಹಿರಿಯ ಕೆಱೆಯ ಅರಣಿಯನು ಯಿಕ್ಕಿಕೊಟ್ಟು ನೀರ ಸರಥಿಯನ್ನು ಕೊಡುವ' ಒಪ್ಪಂದ ಮಾಡಿಕೊಂಡರೆಂದೂ ಹೇಳಿದೆ.

ವಿಜಯನಗರದ ಕಾಲದಲ್ಲಿ ಪ್ರಧಾನ ಮಾದರಸ ಮತ್ತು ಸಾಯಣರು 'ತೋಡದ ಬಾವಿಯಿಲ್ಲ ಮರೆಕಟ್ಟವ ಪೆರ್ಗೆರೆಯಿಲ್ಲ' ಎಂದು ಶಾಸನಗಳು ಅವರನ್ನು ಸ್ತುತಿಸಿವೆ. ಹಂಪೆಯ ಪಶ್ಚಿಮಕ್ಕೆ ಸುಮಾರು ಒಂದು ಮೈಲು ದೂರದಲ್ಲಿ ತುಂಗಭದ್ರೆಗೆ ಕಟ್ಟಿದ ಅಣೆಕಟ್ಟಿನಿಂದ ಹೊರಟ ತುರ್ತನಾಲೆ ಈಗಲೂ ಉಪಯೋಗದಲ್ಲಿದೆ. ಇಂದಿಗೂ ಕಮಲಾಪುರ ಮತ್ತು ಹಂಪೆಯ ಸುತ್ತಲಿನ ಭೂಮಿಯ ಸಾಗುವಳಿ ಈ ನಾಲೆಯ ನೀರಿನಿಂದ ಆಗುತ್ತದೆ. ಇದಕ್ಕೆ ನದಿಯ ನೀರಲ್ಲದೆ ಕೆರೆಯ ನೀರೂ ಹರಿಯುವಂತೆ ಮಾಡಿದೆ.

ತುಂಗಭದ್ರೆಗೆ ಹರಿದ್ರಾನದಿ ಕೂಡುವುದು ಚಿತ್ರದುರ್ಗ ಜಿಲ್ಲೆಯಲ್ಲಿನ ಹರಿಹರದ ಸಮೀಪದಲ್ಲಿ. ಎಂತಲೇ ಹಿಂದೆ ಹರಿಹರಕ್ಕೆ ಕೂಡಲೂರು ಎಂಬ ಹೆಸರಿತ್ತು. ಈ ಹರಿದ್ರೆಗೆ ಕಟ್ಟೆಯನ್ನು ಕಟ್ಟುವ ವಿಷಯದಲ್ಲಿ ಕ್ರಿ.ಶ. 1410ರಲ್ಲಿ ವಿಜಯನಗರದ ಅರಸನಾದ ದೇವರಾಯನಿಗೂ ಹರಿಹರಪುರದ ಮಹಾಜನಗಳಿಗೂ ಒಂದು ಒಪ್ಪಂದವಾಯಿತು. ಅದರಂತೆ ಕಾಲುವೆಯ ಕೆಳಗೆ ನೀರಾವರಿಗೊಳಪಟ್ಟ ಹಲವಾರು ಗ್ರಾಮಗಳಿಗೆ ಸೇರಿದ ಭೂಮಿಯನ್ನೆಲ್ಲಾ ಮೂರು ಭಾಗ ಮಾಡಿ ಎರಡು ಪಾಲು ಭೂಮಿಯನ್ನು ಶ್ರೀ ಹರಿಹರದೇವರು ಭೋಗಿಸಬೇಕೆಂದೂ ಉಳಿದುದನ್ನು 'ಹೊಂನನಿಕ್ಕಿ ಕಟ್ಟೆಯಂ ಕಟ್ಟಿ ಕಾಲುವೆಯಂ ತಂದಂಥಾ ಮಹಾಜನಗಳು' ಅನುಭವಿಸಬೇಕೆಂದೂ ತೀರ್ಮಾನವಾಯಿತು. ಈ ಒಪ್ಪಂದದ ಪ್ರಕಾರ ಕಟ್ಟೆಕಾಲುವೆಗಳನ್ನು ಕಟ್ಟಿಸುವ ಕಾರ್ಯವನ್ನು ಬುಳ್ಳರಸನಿಗೆ ಒಪ್ಪಿಸಲಾಯಿತು. ಆದರೆ ಈ ಕಟ್ಟೆ 15 ವರ್ಷಗಳೊಳಗೇ ಭಗ್ನವಾಯಿತು. ಆಗ ಬುಳ್ಳರಸನು ಅರಸನ ಸಮಸ್ತ ಸೈನ್ಯಾಧಿಪತಿಯಾದ ಚಾಮುನೃಪಾಲನನ್ನು ಕಂಡು ಆತನನ್ನು ಧರ್ಮಕಾರ್ಯಕ್ಕೊಪ್ಪಿಸಿದನು. ಆ ಸೇತುವೆಯ ಜೀರ್ಣೋದ್ಧಾರ ಕಾರ್ಯ ಚಾಮುನೃಪಾಲನ ಧರ್ಮಬುದ್ಧಿಯಿಂದ ಸಾಧ್ಯವಾಯಿತು.

ಇದಕ್ಕೂ ಮೊದಲು ಕ್ರಿ.ಶ. 1389 ರಲ್ಲಿ ಇಮ್ಮಡಿ ಹರಿಹರರಾಯನ ಮಗ ಬುಕ್ಕರಾಯನು ಪೆನುಗೊಂಡೆ ಪಟ್ಟಣದಲ್ಲಿ ಅಧಿಕಾರದಲ್ಲಿದ್ದಾಗ, 'ಎಲ್ಲಾ ಪ್ರಜೆಗಳೂ ಸುಖದಲ್ಲಿ ಇರಬೇಕಾಗಿ ಜೀವಂಗಳಿಗೆಲ್ಲಾ ಉದಕವೇ ಪ್ರಾಣವಾಗಿ' ಪೆನುಗೊಂಡೆಗೆ ಪೆನ್ನಾರ್‌ನದಿಯ ನೀರನ್ನು ತರಬೇಕೆಂದು ನಿರ್ಧರಿಸಿ, ಅಲ್ಲಿದ್ದ ದಶವಿದ್ಯಾಚಕ್ರವರ್ತಿ ಜಲಸೂತ್ರದ ಸಿಂಗಾಯಭಟ್ಟನಿಗೆ ಆ ಕೆಲಸವನ್ನು ವಹಿಸಿದನು. ಆತನು ಆ ನದಿಯ ಕಾಲುವೆಯನ್ನು ಸಿರುವರದ ಕೆರೆಗೆ ತಂದು ಆ ಕಾಲುವೆಗೆ ಬುಕ್ಕರಾಯಸಮುದ್ರದ ಕಾಲುವೆ ಎಂದು ಹೆಸರನ್ನಿಟ್ಟನು. ಈ ಸಿಂಗಾಯಭಟ್ಟನನ್ನು ಜಲಸೂತ್ರದ ಎಂದು ಕರೆದಿರುವುದನ್ನು ನೋಡಿದರೆ ಈತನು ಇಂತಹ ಕಾರ್ಯಗಳ ಶಿಲ್ಪಿ (ಇಂಜಿನಿಯರ್) ಆಗಿದ್ದನೆನ್ನಬಹುದು.

ದೇವರಾಯನ ಆಳಿಕೆಯ ಕಾಲದಲ್ಲಿ ಮುಳಬಾಗಿಲಿನ ಸಮೀಪದ ಕತ್ತರಿಹಳ್ಳಿಯ ಹತ್ತಿರದ ಪಾಲಾರ್‌ನದಿಯ ಅರಳಿಯ ಅಣೆಕಟ್ಟು 'ಅನಾದಿಕಾಲ ತೊಡಗಿ ಒಡೆದು ನೆಲಸರಿತವಾಗಿ'

ಹಾಳಾಗಿ ಇತ್ತು. ಅದನ್ನು ಶಿವರಾತ್ರಿಯ ವೀರಣ್ಣ ಮತ್ತು ಮಲ್ಲಣ್ಣ ಎಂಬ ಇಬ್ಬರು ಸೋದರರು ತಮ್ಮ ಹಣವನ್ನು ಖರ್ಚುಮಾಡಿ ಸರಿಪಡಿಸಿದರು

ಕ್ರಿ.ಶ. 1455ರಲ್ಲಿ ನಾಗಮಂಗಲದ ಶಿಂಗಣ್ಣವೊಡೆಯನ ಮಗ ದೇವರಾಜನು ಕಾವೇರೀ ನದಿಗೆ ಹೊಸದಾಗಿ ಒಂದು ಕಟ್ಟೆಯನ್ನು ಕಟ್ಟಿ ಕಾಲುವೆಯನ್ನು ತಂದ. ಆಗ ಸಮೀಪದ ಹರಹುಗ್ರಾಮದ ಮಹಾಜನರು ತಮ್ಮ ಗ್ರಾಮದ ಎಲ್ಲೆಯೊಳಗೆ ಆದರ ಕಾಲುವೆಯನ್ನು ಹಾಯಿಸಬೇಕೆಂದು ಪ್ರಾರ್ಥಿಸಿ ಅದಕ್ಕೆ ಪ್ರತಿಫಲವಾಗಿ ಆತನಿಗೆ ತಮ್ಮ ಗ್ರಾಮದ ದೇವಸ್ಥಾನದ ಭೂಮಿಗಳಲ್ಲಿ ಪಾಲನ್ನೂ ಕೊಡುವುದಾಗಿ ತಿಳಿಸಿದರು. ಅದರಂತೆ ದೇವರಾಜ ಅವರ ಗ್ರಾಮಗಳಿಗೆ ಆ ಕಾಲುವೆಯನ್ನು ತಂದನು.

ಭಗ್ನವಾದ ಕೆರೆಗಳನ್ನು ಸರಿಪಡಿಸುವುದು ಸಹ ಅಷ್ಟೇ ಮಹತ್ವದ ಕಾರ್ಯವೆಂದು ಭಾವಿಸಲಾಗಿತ್ತು. ಸೊಂದೂರು ಸೀಮೆಯ ತಾಳೂರುಗ್ರಾಮದ ಚಿಕಬೂಚಿ ಎಂಬ ಕುಂಟೆಯೊಡೆದು ಬಿಲವಾಗಿರಲಾಗಿ ತಿಮ್ಮರಾಜರು ಕ್ರಿ.ಶ. 1521ರಲ್ಲಿ ಅದನ್ನು ಸರಿಪಡಿಸಿ, ವಿಸ್ತರಿಸಿ ದೊಡ್ಡ ಕೆರೆಯಾಗಿ ಕಟ್ಟಿಸಿದರು. 1527ರಲ್ಲಿ 'ನೊಣಬನಕೆರೆಯ ತುಂಬುಮುರಿದುಬಿದ್ದು ಕೆಟ್ಟಿರಲಾಗಿ ಆ ತುಂಬನು ಬಿಚ್ಚಿಸಿ ಸೋಧಿಸಿ ಒಲುಮಾಗದ ಕಲನು ಕಟ್ಟಿಸಿ ಗಾರೆಯನು ಹಾಕಿಸಿ ಚೆನ್ನಾಗಿ ಕಟ್ಟಿಸಿ' ಕೆರೆಯ ಜೀರ್ಣೋದ್ಧಾರವನ್ನು ತಿಮ್ಮರಸನ ಮೇಲ್ವಿಚಾರಣೆಯಲ್ಲಿ ಮಾಡಲಾಯಿತು.

ಹೀಗೆ ನೀರಾವರಿ ಸೌಕರ್ಯ ಮಾಡಿಕೊಟ್ಟಾಗ ಅಲ್ಲಿಯ ರೈತರು ಅದರ ಸಂಪೂರ್ಣ ಪ್ರಯೋಜನ ಪಡೆಯಲೆಂದು ಪ್ರಾರಂಭದಲ್ಲಿ ಅವರಿಂದ ಕೆಲವೊಮ್ಮೆ ತೆರಿಗೆಯನ್ನೇ ಪಡೆಯುತ್ತಿರಲಿಲ್ಲ. ಕೌಟಿಲ್ಯ, ಮನು ಮುಂತಾದ ರಾಜನೀತಿಜ್ಞರು ಧರ್ಮಶಾಸ್ತ್ರಜ್ಞರು ಸಹ ಇಂತಹ ಸಂದರ್ಭಗಳಲ್ಲಿ ಒಂದು ವರ್ಷದಿಂದ ಹಿಡಿದು ಮೂರುನಾಲ್ಕು ವರ್ಷಗಳವರೆಗೂ ರೈತರ ತೆರಿಗೆಯ ಭಾರವನ್ನು ಕಡಿಮೆ ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಪುಸ್ತಕ ಲೋಕ

ಅಮೆರಿಕೆಯ ಇತಿಹಾಸ : ಜಿ. ಎಸ್ ದೀಕ್ಷಿತ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಥಮ ಮುದ್ರಣ, 1974. ಪು. 328

ಅಮೆರಿಕಾ ಖಂಡದ ಸಂಯುಕ್ತ ಸಂಸ್ಥಾನ ಸ್ವತಂತ್ರ ರಾಷ್ಟ್ರವಾಗಿ ಬೆಳೆದು ಬಂದು ಇಂದಿಗೆ ಎರಡು ಶತಮಾನಗಳು ಕಳೆದಿವೆ. ಭಾರತೀಯರಂತೆ ಅಮೆರಿಕನ್ನರು ಬ್ರಿಟಿಷ್ ವಸಾಹತು ಷಾಹಿಗೆ ಒಳಗಾಗಿ, ಕಷ್ಟಕೋಟಲೆಗಳನ್ನು ಅನುಭವಿಸಿ, ಅವರ ವಿರುದ್ಧ ಹಿಂಸಾತ್ಮಕವಾದ ಕ್ರಾಂತಿಯನ್ನು ನಡೆಸಿ ಜುಲೈ 4, 1776 ರಂದು ಸ್ವಾತಂತ್ರ್ಯ ಪಡೆದು, ಅಂದಿನಿಂದ ಇಂದಿನವರೆಗೆ ಸತತವಾಗಿ ಪ್ರಗತಿಪಥದಲ್ಲಿ ಸಾಗಿದ್ದಾರೆ. ಜಾತ್ಯತೀತತೆ, ಪ್ರಜಾಪ್ರಭುತ್ವ, ವ್ಯಕ್ತಿ ಸ್ವಾತಂತ್ರ್ಯ ಮೊದಲಾದ ಮೌಲ್ಯಗಳಿಗೆ ಆ ದೇಶದಲ್ಲಿ ಮೊದಲಿನಿಂದಲೂ ಆದ್ಯತೆಯನ್ನು ಕೊಡಲಾಯಿತು. ವಾಷಿಂಗ್‌ಟನ್, ಲಿಂಕನ್ ಮತ್ತು ಫ್ರ್ಯಾಂಕ್ಲಿನ್ ಡಿಲಾನೋ ರೂಸ್‌ವೆಲ್ಟರಂತಹ ಮಹಾವ್ಯಕ್ತಿಗಳನ್ನೂ ಮಾರ್ಟಿನ್‌ಲ್ಯೂಥರ್ ಕಿಂಗ್‌ನಂತಹ ಅಹಿಂಸಾತ್ಮಕ ಹೋರಾಟಗಾರರನ್ನೂ ಥೋರೋವಿನಂತಹ ದಾರ್ಶನಿಕನನ್ನೂ, ಮಾರ್ಕ್‌ಟ್ವೇಯನ್‌ನಂತಹ ಬರಹಗಾರನನ್ನೂ ನೀಡಿದ ನಾಡು ಅದಾಗಿದೆ. ಇಂದು ಪ್ರಪಂಚದ ಅತ್ಯಂತ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಿದೆ. ನೈಸರ್ಗಿಕ ಸಂಪತ್ತನ್ನು ಅಪಾರವಾಗಿ ಹೊಂದಿದೆ. ಕೃಷಿ ಉತ್ಪನ್ನಗಳಲ್ಲಿ, ಕೈಗಾರಿಕೆಗೆ ಬೇಕಾದ ಅರಣ್ಯ ಸಂಪತ್ತಿನಲ್ಲಿ, ವ್ಯಾಪಾರಕ್ಕೆ ಅವಶ್ಯಕವಾದ ಸ್ವಾಭಾವಿಕ ಬಂದರುಗಳಲ್ಲಿ, ಯಾವುದರಲ್ಲೂ ಈ ರಾಷ್ಟ್ರಕ್ಕೆ ಕೊರತೆಯಿಲ್ಲ. ಅದರ ಐಹಿಕ ಪ್ರಗತಿಗೆ ಇವೇ ಮೂಲ. ಚಂದ್ರಲೋಕಕ್ಕೆ ಮಾನವನನ್ನು ಕಳುಹಿಸುವಂತಹ ಸಾಹಸ ಅವರಿಗೆ ಸಾಧ್ಯವಾಗಿರುವುದು ಅಪಾರ ಸಂಪತ್ತಿನ ಸಹಾಯದಿಂದ, ಅವರು ಹೊಂದಿರುವ ವೈಜ್ಞಾನಿಕ ಪ್ರಗತಿಯಿಂದ. ಅಂತರರಾಷ್ಟ್ರೀಯ ದೃಷ್ಟಿಯಿಂದ ನೋಡುವುದಾದರೆ ವಿಶ್ವಸಂಸ್ಥೆ ಹುಟ್ಟಿ ಬೆಳೆದಿರುವುದು ಇಲ್ಲೆಯೇ. ಇಂತಹ ನಾಡಿನ ಇತಿಹಾಸ ಪರಿಚಯ ಕನ್ನಡ ಬಲ್ಲವರಿಗೆಲ್ಲಾ ಆಗಬೇಕಾದದ್ದು ಅವಶ್ಯಕ.

ಸ್ನಾತಕ ತರಗತಿಗಳಲ್ಲಿ ಇತಿಹಾಸವನ್ನು ಪ್ರಧಾನವಾಗಿ ಅಧ್ಯಯನ ಮಾಡುತ್ತಿರುವ ಕರ್ನಾಟಕ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಅಮೆರಿಕದ ಇತಿಹಾಸವನ್ನು ಒಂದು ಪಠ್ಯ ವಿಷಯವನ್ನಾಗಿ ಸೇರಿಸಿರುವುದು ಮೆಚ್ಚಬೇಕಾದ ಸಂಗತಿಯಾಗಿದೆ. ಸ್ನಾತಕೋತ್ತರ ತರಗತಿಗಳ ಹಂತದಲ್ಲಿ ಕರ್ನಾಟಕದ ಉಳಿದ ವಿಶ್ವವಿದ್ಯಾನಿಲಯಗಳಲ್ಲಿ ಇದೇ ವಿಷಯವನ್ನು ಅಭ್ಯಾಸಕ್ಕಾಗಿ ಸೇರಿಸಲಾಗಿದೆ. ಕರ್ನಾಟಕ ವಿಶ್ವವಿದ್ಯಾನಿಲಯದ ದ್ವಿತೀಯ ಬಿ.ಎ. ತರಗತಿಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲೆಂಬ ಆಶಯವನ್ನು ಗಮನದಲ್ಲಿಟ್ಟುಕೊಂಡು ಈ ಗ್ರಂಥವನ್ನು ಪಠ್ಯಕ್ರಮಕ್ಕನುಗುಣವಾಗಿ ರಚಿಸಲಾಗಿದೆ. ವಸಾಹತು ಕಾಲದಿಂದ ಶೀತಲ ಯುದ್ಧದ ಕಾಲದವರೆಗಿನ (ಅಂದರೆ 1960ರವರೆಗಿನ) ಇತಿಹಾಸವನ್ನು ಇದು ಪರಿಚಯ ಮಾಡಿಕೊಡುತ್ತದೆ. 19 ಅಧ್ಯಾಯಗಳಲ್ಲಿ ಈ ವಿಷಯವನ್ನು ಅಡಕ ಮಾಡಿರುವುದರ ಜೊತೆಗೆ, ಪಾರಿಭಾಷಿಕ ಪದಕೋಶ, ಅಮೆರಿಕೆಯ ಇತಿಹಾಸದಲ್ಲಿ ಸ್ಮರಣೀಯ ಘಟನೆಗಳು, ಸ್ವಾತಂತ್ರ್ಯದ ನಂತರ ಸೇರ್ಪಡೆ ಆದ ರಾಜ್ಯಗಳು, ಲಿಂಕನ್ನನ ಗೆಟಿಸ್‌ಬರ್ಗ್ ಭಾಷಣ, ಅಭ್ಯಾಸಯೋಗ್ಯ ಆಂಗ್ಲಭಾಷೆಯಲ್ಲಿರುವ ಪುಸ್ತಕಗಳ ಪಟ್ಟಿ, ಸೂಚಿ ಮತ್ತು ಅನಿವಾರ್ಯವಾಗಿ ಬರಲೇ ಬೇಕಾದ ಓಪ್ಪೋಲೆ—ಇವುಗಳನ್ನು

ಒಳಗೊಂಡ ಸುಮಾರು 20 ಪುಟಗಳ ಅನುಬಂಧಗಳು ಇರುವುದು ಈ ಪುಸ್ತಕದ ಒಂದು ವಿಶೇಷ. ಪಾರಿಭಾಷಿಕ ಪದಗಳ ತರ್ಜುಮೆಯ ಜೊತೆಗೆ ಅಂಗ್ಲಭಾಷೆಯಲ್ಲೂ ಅದನ್ನೇ ಸೂಚಿಸಲಾಗಿದೆ. ಉದಾಹರಣೆಗೆ ಪು. 47ರಲ್ಲಿ "ಅಮೆರಿಕೆಯ ಸರಕಾರವು ತನ್ನ ವಿರೋಧವಾಗಿ ತಾನೇ ಭಾಗಿಸಿಕೊಂಡಿದೆ" (The American Government is divided against itself) ಎಂಬುದನ್ನು ನೋಡಬಹುದು. ಆದರೆ ಅದೇ ಪುಟದಲ್ಲಿ "ತ್ರಿದಳ ವಿಭಜನೆ" ಎಂಬುದಕ್ಕೆ ಅಂಗ್ಲಭಾಷೆಯ ಪದವನ್ನು ನೀಡಿಲ್ಲ. ಅನೇಕ ಕಡೆ ಭಾಷಾಂತರ ಮೂಲಕ್ಕಿಂತ ಕ್ಲಿಷ್ಟವಾಗಿ ಕಾಣುವ ಸಂಭವವೂ ಇದೆ. ವಿಶೇಷ ಸಂದರ್ಭಕ್ಕನುಗುಣವಾಗಿ ಭೂಪಟಗಳನ್ನು ಕೊಟ್ಟಿರುವುದು ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದೆ.

ನುರಿತ ಲೇಖಕರು, ಇತಿಹಾಸಕಾರರು ಮತ್ತು ಅನುಭವಿ ಪ್ರಾಧ್ಯಾಪಕರೂ ಆದ ಜಿ. ಎಸ್. ದೀಕ್ಷಿತರ ಈ ಗ್ರಂಥ ಇತಿಹಾಸದ ವಿದ್ಯಾರ್ಥಿಗಳಿಗಲ್ಲದೆ ಜನಸಾಮಾನ್ಯರಿಗೂ ಉಪಯೋಗವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಅಮೆರಿಕದ ಇತಿಹಾಸ ಅವರ ಲೇಖನಿಯಲ್ಲಿ ಸರಳವಾಗಿ ಮೂಡಿ ಬಂದಿದೆ. ಕನ್ನಡ ಭಾಷೆಯಲ್ಲಿ ಈ ದೇಶದ ಬಗೆಗೆ ಇರುವ ಇತಿಹಾಸ ಗ್ರಂಥಗಳು ಬಹಳ ವಿರಳ. ಆದುದರಿಂದ ಈ ಪುಸ್ತಕ ಹೆಚ್ಚಿನ ಆಸಕ್ತರಾದ ಓದುಗರನ್ನು ಆಕರ್ಷಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲವೆಂದು ಹೇಳಬಹುದು.

ಡಾ. ಕೆ. ಎಸ್. ಶಿವಣ್ಣ

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ ಮೈಸೂರು–೫೭೦ ೦೧೩